ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ

ಸಂಪುಟ 2 ಸಂಚಿಕೆ 14

ಏಪ್ರಿಲ್ 06, 2008

ಕನ್ನಡ ವಾರಪತ್ರಿಕೆ

ರೂ. 5/-

ಅಕಾಲಿಕ ಮಳೆ ಅಪಾರ ಹಾನಿ







ರಾಹುಲ ಗಾಂಧಿ :

ನೀತಿ ಬದಲಿಸದೇ ನೇತಾ ಬದಲಿ ಸಾಕೇ?



ಅಳಂದ ಗಲಭೆ :

ಬಿಜೆಪಿ ಕೊಳ್ಳಿಗೆ ಪೆಟ್ರೋಲ್ ಸುರಿದ ಪೊಲೀಸರು

ವೇತನ ಆಯೋಗ

ಅಧಿಕಾರಿಗಳ ಬಾಯಿಗೆ ಬೆಣ್ಣೆ ನೌಕರರ ಕಣ್ಣಿಗೆ ಸುಣ್ಣ

ಹಾಸನ :

ಮದ್ರಸಾ ಬಗ್ಗೆ ಅವ್ಯಾಹತ ಅಪಪ್ರಚಾರ

ಇದ್ದದ್ದು ಇದ್ದಾಂಗ..

ತೀರ್ಥೋದ್ಭವ!

"ತಲಕಾವೇರಿಯಲ್ಲಿ ತೀರ್ಥೋದ್ಭವ ಆಗುವುದು ಸುಳ್ಳು. ಇದು ಸಂಘ ಪರಿವಾರ ಹಾಗೂ ಪುರೋಹಿತಶಾಹಿ ವರ್ಗ ಜನರ ದಾರಿ ತಪ್ಪಿಸಲು ಮಾಡಿದ ಸುಳ್ಳು ಪ್ರಚಾರ. ಈ ಬಗ್ಗೆ ಸತ್ಯಾಸತ್ಯತೆ ಅರಿಯುವ ಅಗತ್ಯವಿದ್ದು ತೀರ್ಥೋದ್ಭವ ಆಗುವುದಿಲ್ಲ ಎಂಬುದನ್ನು ಸಾಬೀತುಪಡಿಸಲು ಸಿದ್ಧ"

ಎ.ಕೆ.ಸುಬ್ಬಯ್ಯ
ಕೊಡಗಿನ ಹಿರಿಯ ರಾಜಕಾರಣಿ

★

ಎಡಗೈ V/s ಬಲಗೈ !?

"ಬಹುಜನ ಸಮಾಜಪಕ್ಷದಲ್ಲಿ ಜಾತಿ ಅಭಿಮಾನ ಜಾಸ್ತಿಯಾಗಿ ಸರ್ವಾಧಿಕಾರಿ ಧೋರಣೆ ಅನುಸರಿಸುತ್ತಿದ್ದಾರೆ. ರಾಷ್ಟ್ರೀಯ, ರಾಜ್ಯ ಹಾಗೂ ಉಸ್ತುವಾರಿ ಹೊತ್ತ ವೀರಸಿಂಗ್ ಎಡಪಂಥಕ್ಕೆ (ಎಡಗೈ) ಸೇರಿದವರಾಗಿದ್ದು, ಬಲಪಂಥದವರಿಗೆ (ಬಲಗೈ) ಯಾವುದೇ ಸ್ಥಾನಮಾನ ನೀಡದೇ ಸರ್ವಾಧಿಕಾರಿ ಪ್ರವೃತ್ತಿಯಿಂದ ಮುಂದಿನ ದಿನಗಳಲ್ಲಿ ಬಿಎಸ್‌ಪಿಯು ರಾಜ್ಯದಲ್ಲಿ ನೆಲೆ ಕಳೆದುಕೊಳ್ಳುತ್ತದೆ.

ಗೋಪಾಲರು ಪಕ್ಷದಿಂದ ಉಚ್ಚಾಟನೆಯಾದ ಮೇಲೆ ಅಲ್ಲಿ ಬರೀ ಜಾತಿಯವರಿಗೆ ಸ್ಥಾನ ನೀಡುತ್ತಿದ್ದಾರೆ. ಆದ ಕಾರಣ ಗೋಪಾಲ ಅಭಿಮಾನಿಗಳಾದ ನಾವು ಕರ್ನಾಟಕ ರಾಜ್ಯ ಸರ್ವಜನ ಸಮಾಜ ಬಿ.ಗೋಪಾಲ ಅಭಿಮಾನಿಗಳ ಬಳಗವನ್ನು ಸ್ಥಾಪಿಸಿದ್ದು ಏಪ್ರಿಲ್ 1 ರಂದು ಬೆಂಗಳೂರಿನ ಪುರಭವನದಲ್ಲಿ ಬಿ.ಗೋಪಾಲರವರು ಉದ್ಘಾಟನೆ ಮಾಡುವರು"

ಎಚ್.ಎಂ. ವೆಂಕಟೇಶ್, ಹೆಬ್ಬಗೋಡಿ

★

"ಶಾಸಕಾಂಗ ಮತ್ತು ಕಾರ್ಯಾಂಗ ವ್ಯವಸ್ಥೆಗಳಲ್ಲಿರುವ ತಾರತಮ್ಯ ಅಥವಾ ಅಸಮಾನತೆ ನ್ಯಾಯಾಂಗ ವ್ಯವಸ್ಥೆಯಲ್ಲಿ ಇದೆ. ದೇಶದ ಒಟ್ಟು 610 ಹೈಕೋರ್ಟ್‌ಗಳಲ್ಲಿ 35 ಮಂದಿ ಹಿಂದುಳಿದವರು, 20 ಮಂದಿ ಪರಿಶಿಷ್ಟ ವರ್ಗದವರು ಮತ್ತು 27 ಮಂದಿ ಮಾತ್ರ ಪರಿಶಿಷ್ಟ ಪಂಗಡದವರು ಇದ್ದಾರೆ. ಉಳಿದ ಎಲ್ಲ ಸ್ಥಾನಗಳಲ್ಲಿ ಮೇಲ್ವರ್ಗದವರೇ ಇದ್ದಾರೆ. ಇದು ಸಂವಿಧಾನದ ಸಾಮಾಜಿಕ ನ್ಯಾಯದ ಆಶಯಕ್ಕೆ ಬಾರಿ ಏಟು ನೀಡಿದೆ."

ಸಿದ್ದರಾಮಯ್ಯ, ಕಾಂಗ್ರೆಸ್ ಮುಖಂಡರು

★

ದುಬಾರಿ

"ದೇಶದ ಎಲ್ಲ ನಗರಗಳಿಗಿಂತಲೂ ಬೆಂಗಳೂರಿನಲ್ಲಿ ನೀರು ದುಬಾರಿಯಾಗಿದೆ. ದಿಲ್ಲಿಯಲ್ಲಿ ಒಂದು ಸಾವಿರ ಲೀಟರ್ ನೀರಿಗೆ 2.20 ರೂಪಾಯಿ ವೆಚ್ಚವಾಗುತ್ತದೆ. ಅಷ್ಟೇ ಪ್ರಮಾಣದ ನೀರಿಗೆ ಬೆಂಗಳೂರಿನಲ್ಲಿ 5 ರೂಪಾಯಿ ವೆಚ್ಚ ತಗಲುತ್ತದೆ."

ಡಾ: ಸುನಿತಾ ನಾಯರ್, ನಿರ್ದೇಶಕಿ, ವಿಜ್ಞಾನ ಮತ್ತು ಪರಿಸರ ಕೇಂದ್ರ, ದೆಹಲಿ

ವರದಿಗಾರರು, ಬರಹಗಾರರ ಗಮನಕ್ಕೆ

ಪತ್ರಿಕೆಯ ಮೇಲೆ ಅಭಿಮಾನವಿಟ್ಟು ವರದಿ, ಲೇಖನ ಕಳಿಸುವ ಬರಹಗಾರರಲ್ಲಿ ವಿನಂತಿ. ದಯಮಾಡಿ ತಮ್ಮ ಲೇಖನದ ಜೊತೆಗೆ ಸಂಬಂಧಿಸಿದ ಫೋಟೋಗಳನ್ನು ಸಹ ಕಳಿಸಿಕೊಡಿ.

ಕೆಲವೊಂದು ವಿಷಯಗಳಲ್ಲಿ ಲೇಖನ-ವರದಿಗೆ ಬೇರೆಲ್ಲೂ ಫೋಟೋಗಳು ಸಿಗುವ ಸಂಭವ ಇರುವುದಿಲ್ಲ.

ನೀವು ಕಳಿಸುವುದು ಕೈಬರಹದ ವರದಿ ಲೇಖನವಾದರೆ ದಯಮಾಡಿ 'ಯಾರಿಗೇ ಆದರೂ ಅರ್ಥವಾಗಬಹುದಾದಂತೆ ಸ್ಪಷ್ಟವಾಗಿ ಬಿಡಿ ಬಿಡಿ ಅಕ್ಷರಗಳಲ್ಲಿ ಬರೆಯಿರಿ.

ನಿಮ್ಮ ಬರಹ ಕಂಪೋಸ್ ಆದ ಸ್ವರೂಪದಲ್ಲಿ ಇದ್ದರೆ ದಯಮಾಡಿ ಮೇಲ್ ಮಾಡಿ. ಅದು ತುಂಬಾ ಪ್ರಯೋಜನಕಾರಿ.

. ಕನ್ನಡ ತಂತ್ರಾಂಶಗಳಾದ 'ಬರಹ' 'ಆಕೃತಿ' ಆಗಬಹುದು. 'ನುಡಿ' ಆದರೆ ಬಹಳ ಒಳ್ಳೆಯದು.

ಇಮೇಲ್ ವಿಳಾಸ :
js_weekly@yahoo.com,
kriyaprakashana@gmail.com

ಹಣ ತುಂಬಿ, ಜೊತೆಗೆ ಸೂಕ್ತ ಮಾಹಿತಿ ನೀಡಿ

ಏಜೆನ್ಸಿದಾರರೇ ದಯಮಾಡಿ ಈ ಸೂಚನೆ ಗಮನಿಸಿ

ಪತ್ರಿಕೆಯ ಬಿಲ್ ಪಾವತಿಸುವ ಹಲವು ಏಜೆನ್ಸಿದಾರರು, ಪತ್ರಿಕೆಯ ಖಾತೆಗೆ ಹಣವನ್ನು ತುಂಬಲು ಕೋರ್ ಬ್ಯಾಂಕಿಂಗ್ ಸೌಲಭ್ಯವನ್ನು ಬಳಸುತ್ತಿರುವುದು ಸರಿಯಷ್ಟೇ. ಈ ಹಣವನ್ನು ತಮ್ಮ ತಮ್ಮ ಊರುಗಳಲ್ಲಿಂದಲೇ ಪತ್ರಿಕೆಯ ಖಾತೆಗೆ ತುಂಬುವಾಗ ಕೆಲವೊಂದು ಸೂಚನೆಗಳನ್ನು ಪಾಲಿಸುವುದು ಅವಶ್ಯಕ.

ಬ್ಯಾಂಕ್‌ನ ಚಲನ್‌ನಲ್ಲಿ ಯಾರ ಪರವಾಗಿ ಹಣ ತುಂಬಿರುವುದು ಎಂಬುದನ್ನು ಸ್ಪಷ್ಟವಾಗಿ ನಮೂದಿಸತಕ್ಕದ್ದು. ಹಾಗೆ ತುಂಬದೇ ಹೋದಲ್ಲಿ ಪತ್ರಿಕೆಯ ಖಾತೆಗೆ ಹಣ ಜಮಾ ಆಗುತ್ತದೆ. ಆದರೆ ಅದು ಯಾವ ಏಜೆನ್ಸಿದಾರರ ಹಣ ಎಂಬುದು ಗೊತ್ತಾಗುವುದಿಲ್ಲ. ದಯಮಾಡಿ ಹಣ ಜಮಾ ಮಾಡಿದ ನಂತರ ಅದರ ವಿವರಗಳನ್ನು ಬರೆದು ಒಂದು ಅಂಚೆ ಕಾರ್ಡನ್ನು ಕಳಿಸುವುದನ್ನು ಮರೆಯಬೇಡಿ.

ಈ ರೀತಿ ಹಣ ಜಮಾ ಆಗಿರುವ ಕೆಲವು ಪ್ರಕರಣಗಳಲ್ಲಿ ಸೂಕ್ತ ಮಾಹಿತಿ ಇಲ್ಲದೆ ಸಮಸ್ಯೆಯಾಗಿದೆ. ಸಂಬಂಧಿಸಿದವರು ದಯಮಾಡಿ ಸೂಕ್ತ ಮಾಹಿತಿ ನೀಡಿ.

ಸಂಪರ್ಕಕ್ಕೆ : ವೀರಣ್ಣ ಕಲ್ಮನಿ,
9480430394

ಚುಚ್ಚುಮದ್ದು

ಹಕ್ಕು

■ "ವಿಜಯನಗರ ಸಾಮ್ರಾಜ್ಯದ ಪತನ ಮತ್ತು ಹಂಪಿಯ ವಿನಾಶಕ್ಕೆ ಮುಖ್ಯಕಾರಣ ಹಂಪಿಯ ಶೈವರು ಎಂಬ ಮಾತಿನ ಮೂಲಕ ಅವರು (ಡಾ:ಎಂ.ಎಂ.ಕಲ್ಬುರ್ಗಿ) ಬಾಂಬ್ ಸಿಡಿಸಿದ್ದಾರೆ. ಇದರ ಮುಖ್ಯ ಕಾರಣವನ್ನು ಅರಿಯದೇ ಇಂತಹ ಮಾತು ಆಡಿರುವುದು ಸರಿಯಲ್ಲ. 'ವಿರೂಪಾಕ್ಷ ಮತ್ತು ವಿಠ್ಠಲ ಸಂಸ್ಕೃತಿ, ಶೈವ ಕನ್ನಡ ಹಾಗೂ ವೈಷ್ಣವ ತೆಲುಗು ಎಂದು ಭಾಷಿಕವಾಗಿ ಪರ್ಯಾವಸಾನಗೊಂಡು ತಾಳಿಕೋಟೆ ಯುದ್ಧದಲ್ಲಿ ಮುಸ್ಲಿಂ ಅರಸರೊಂದಿಗೆ ಶೈವರು ಕೈ ಜೋಡಿಸಿ ವಿಜಯನಗರ ಪತನಕ್ಕೆ ಕಾರಣರಾದರು' ಎಂಬ ಅವರ ಹೇಳಿಕೆ ಸಂಪೂರ್ಣ ನಿರಾಧಾರ.

ಡಾ: ಎಂ.ಚಿದಾನಂದಮೂರ್ತಿ

→ ಹೌದು ಬಿಡಿ. ನೀವು ಹೇಳುವುದು ಮಾತ್ರ ಸಾಧಾರ. ಮತ್ತು 'ಬಾಂಬ್' ಸಿಡಿಸುವ ಹಕ್ಕು ನಿಮಗೆ ಮಾತ್ರವೇ ಇರುವುದು.

ಯಾವುದೇ ಆಯ್ಕೆ ಕಡೆಗಣಿಸುವಂತಿಲ್ಲ.

■ "ಅಂತರಾಷ್ಟ್ರೀಯ ಎಚ್ಚರಿಕೆಗಳನ್ನು ಗಣನೆಗೆ ತೆಗೆದುಕೊಳ್ಳದಿರುವ ಇರಾನ್‌ನ ಪರಮಾಣು ಯೋಜನೆಗೆ ಅಂಕುಶ ಹಾಕಲು ದಿಗ್ಬಂಧನವು ಒಂದು ಉತ್ತಮ ವಿಧಾನವಾಗಿದೆ ಎಂದು ಇಸ್ರೇಲ್ ನಂಬುತ್ತದೆ. ಆದರೆ ಇನ್ನುಳಿದ ಯಾವುದೇ ಆಯ್ಕೆಯನ್ನು ನಾವು ಕಡೆಗಣಿಸುವಂತಿಲ್ಲ. ಕೆಲವೊಮ್ಮೆ ಸೇನಾ ಕ್ರಮವನ್ನೂ ಅವಲಂಬಿಸಬೇಕಾಗುವುದು."

ಇಸ್ರೇಲಿನ ಎಹುದ್ ಬರಾಕ್, ಯುದ್ಧ ಸಚಿವ,
ಅಮೇರಿಕಾದ ಉಪಾಧ್ಯಕ್ಷ ಡಿಕ್‌ಚೆನಿಗೆ ಹೇಳಿದ್ದು,

→ ಇಸ್ರೇಲ್ 'ಯುದ್ಧ' ಮಂತ್ರಿ, ಅಮೇರಿಕಾದ ಯುದ್ಧ ಕೋರ ಉಪಾಧ್ಯಕ್ಷರಿಗೆ ಇನ್ನೇನು ತಾನೇ ಹೇಳಬಹುದು.?

ಏನು ಚಿಂತೆ?

■ ನಾನಾಗಲಿ ಅಥವಾ ಮನಮೋಹನಸಿಂಗ್ ಆರ್ಥಿಕ ಬೆಳವಣಿಗೆಗಾಗಿ ಏನು ಮಾಡಿದರೂ, ಲೋಕಸಭೆಯ ಸುಮಾರು 60 ಮಂದಿ ಸದಸ್ಯರು ಅದರಲ್ಲಿ ಹುಳುಕನ್ನೂ ಹುಡುಕುತ್ತಿರುತ್ತಾರೆ. 'ಆರ್ಥಿಕ ಬೆಳವಣಿಗೆಯು ತುಂಬಾ ಪ್ರಸ್ತುತವಾಗಿದೆ ಹಾಗೂ ಒಂದು ಸಣ್ಣ ಸಮೂಹದ ಜನರಿಗೆ ಮಾತ್ರ ಇದರ ಪ್ರಯೋಜನ ದೊರೆಯುತ್ತದೆ' ಎಂದು ಅವರು ಹೇಳುತ್ತಾರೆ. ಆದರೆ ನಾವು ಶೇ.9 ರ ಸನಿಹದವರೆಗೆ ಆರ್ಥಿಕ ಬೆಳವಣಿಗೆಯನ್ನು ಸಾಧಿಸುವುದನ್ನು ಮುಂದುವರಿಸಿದಲ್ಲಿ 2020 ರೊಳಗೆ ಭಾರತೀಯರ ತಲಾ ವಾರ್ಷಿಕ ಆದಾಯ 2 ಸಾವಿರ ಡಾಲರ್‌ಗಳಾಗಿರುವುದು ಹಾಗೂ 2050 ರೊಳಗೆ ಅದು 16 ಸಾವಿರ ಡಾಲರ್‌ಗಳಾಗಿರುವುದು. ಭಾರತವು ಜಗತ್ತಿನ ಅತ್ಯಂತ ಶ್ರೀಮಂತ ರಾಷ್ಟ್ರಗಳ ಸಾಲಿಗೆ ಸೇರಲಿದೆ'

ಪಿ.ಚಿದಂಬರಂ, ಕೇಂದ್ರ ಹಣಕಾಸು ಮಂತ್ರಿ

→ ಭಾರತ ಶ್ರೀಮಂತ ರಾಷ್ಟ್ರಗಳ ಸಾಲಿಗೆ ಸೇರುತ್ತೆ ಅನ್ನೋ ಬಗ್ಗೆ ನಮಗೇನು ಅನುಮಾನವಿಲ್ಲ. ಆದರೆ ದಿನಕ್ಕೆ ಬರೇ 20 ರೂಪಾಯಿ ಮಾತ್ರ ಆದಾಯ ಇರೋ ದೇಶದ ಶೇ.77 ಜನರ ಪರಿಸ್ಥಿತಿ ಏನು ಅನ್ನೋದಷ್ಟೇ ನಮ್ಮ ಚಿಂತೆ.

ತಂತ್ರ

■ ಪ್ರಚಾರಕ್ಕೆ ತಾರೆಯರ ದಂಡು: ಬಿಜೆಪಿ ತಂತ್ರ-ಸುದ್ದಿ

→ ಜನಪರ ಕಾರ್ಯಕ್ರಮ ಇಲ್ಲದವರು ಇನ್ನೇನು ತಾನೇ ಮಾಡುವರು?

ಯಾರು ಗಲಭೆಕೋರರು?

■ ಹಿಂಸೆ ತ್ಯಜಿಸಿರಿ, ಇಲ್ಲವೇ ಪದತ್ಯಾಗ ಮಾಡುವೆ.

ದಲೈಲಾಮ, ಟಿಬೆಟ್‌ನ ಚಳುವಳಿಕಾರರಿಗೆ

→ ಅಂದರೆ ಗಲಭೆ ಮಾಡಿದವರು ಯಾರು ಅಂತ ಸ್ಪಷ್ಟವಾಯಿತಲ್ಲ !!

ದುಃಖ

■ ಇರಾಕ್‌ನಲ್ಲಿ ಸಂಭವಿಸಿದ ಪ್ರತಿಯೊಬ್ಬ ಅಮೇರಿಕನ್ ಸೈನಿಕರ ಸಾವಿನ ಬಗ್ಗೆಯೂ ನಮಗೆ ನಮಗೆ ಪಶ್ಚಾತಾಪವಿದೆ

ಡಿಕ್‌ಚೆನಿ

→ ಇರಾಕ್‌ನ ನಾಗರೀಕರ ಸಾವಿಗೆ ಪಶ್ಚಾತ್ತಾಪವಿಲ್ಲವೇ?

ದನ ಕಾಯಲು

ಸುಮ್ಮನೇ ಹಿಂದುಳಿದ ಯುವಜನಕೆ ನೋಡಿ
ಹಾಳನ್ನು ಮಾಡದಿರಿ ಉದ್ಯೋಗ ನೀಡಿ
ಗೋವುಗಳ ಕಾಯಲಿ ತ್ರಿಶೂಲ ಚಾಕು
ಜಳಪಿಸಲು ಈ ಹೊತ್ತು ಈ ಜನರು ಬೇಕು

★

ಸಂಘ ಪರಿವಾರ

ಕೆಲವು ಜನ ಉಣ್ಣುತ್ತ ತೇಗುತ್ತ ಇರಲಿ
ಹಲವು ಜನ ಈ ಜನಕೆ ದುಡಿ ದುಡಿದು ತರಲಿ
ಈ ಇದಕೇ ಬಲ್ಲಿರಾ ಸಂಘ ಪರಿವಾರ
ಎಂಬುದಕೆ ಬೇರೆಹುದು ಪೂರ್ಣ ಅಧಿಕಾರ

- ವಿಡಂಬಾರಿ

ಸಂಪಾದಕೀಯ

ನೀತಿ ಬದಲಾಯಿಸಲು ನಿರಾಕರಿಸುವ ಕಾಂಗ್ರೆಸ್‌ಗೆ ರಾಹುಲ ಸಾಕೆ ?

ರಾಹುಲ ಗಾಂಧಿ ರಾಜ್ಯಕ್ಕೆ ನೀಡಿದ ಭೇಟಿಯು ಕಾಂಗ್ರೆಸ್ಸಿಗರಲ್ಲಿ ಮಿಂಚಿನ ಸಂಚಾರ ತಂದಿದೆ ಎಂಬ ವರದಿಗಳಿವೆ. ಅವರ ಭೇಟಿ ರಾಜ್ಯಕ್ಕೆ ಅಥವಾ ಓಡಾಡಿದ ಪ್ರದೇಶಗಳ ಜನರಿಗೆ ಅದೆಷ್ಟು ಪ್ರಯೋಜನ ತಂದೀತು ಎಂಬ ಪ್ರಶ್ನೆ ಇರುವಾಗಲೇ ಚುನಾವಣಾ ನಿರೀಕ್ಷೆಯಲ್ಲಿರುವ ಕಾಂಗ್ರೆಸ್ಸಿಗರಿಗೆ ಹೊಳೆದಾಟಲು ಒಂದು ಹುಲ್ಲು ಕಡ್ಡಿ ಸಿಕ್ಕಿದಂತಹ ಆಶಾದಾಯ ಸ್ಥಿತಿ ಸೃಷ್ಟಿಯಾದಂತಿದೆ.

ರಾಹುಲನ ಓಡಾಟದಲ್ಲಿ ಯಾವುದೇ ರಾಜಕೀಯ ಉದ್ದೇಶವಿಲ್ಲ, ಅದು ಕೇವಲ ಭಾರತವನ್ನು ಅರಿಯುವ ಅಥವಾ ಸಂಶೋಧಿಸುವುದೇ ಆಗಿದೆ ಎಂದು ಹೇಳಲಾಗುತ್ತಿದೆಯಾದರೂ, ಅಂತಹ ಶೋಧನೆಗಳು ಏನೆಂದು ಇನ್ನು ಹೊರ ಜಗತ್ತಿಗೆ ಪ್ರಕಟವಾಗಿಲ್ಲ.

ಹಿಂದೆ ರಾಜೀವಗಾಂಧಿಗೂ ಯುವ ನಾಯಕ-ಪ್ರಧಾನಿ, ಶುದ್ಧಾತಿಶುದ್ಧ ಎಂದೆಲ್ಲಾ ಅಬ್ಬರದ ಪ್ರಚಾರ ನೀಡಿ ತನ್ನ ನೆಲೆ ಉಳಿಸಿಕೊಳ್ಳಲು ಕಾಂಗ್ರೆಸ್ ಮುಂದಾಗಿತ್ತು. ಆದರೆ ಕಾಲ ಸರಿದಂತೆ ಇಂತಹ ನೇತಾರರ ಬಣ್ಣ ಬಯಲಾಯಿತು. ರಾಜೀವ್ ಬೋಫೋರ್ಸ್ ಹಗರಣ ಬಯಲಾಯಿತು. ತಂದ ಹೊಸ ಆರ್ಥಿಕ ನೀತಿಗಳ ದೇಶವನ್ನು ಪ್ರಪಾತದತ್ತ ನಡೆಸಿತು.

ಈಗ ನೆಹರೂ ಕುಟುಂಬದ ಕುಡಿಯೊಂದು ಎಂಬುದೇ ರಾಹುಲನಿಗೆ ಹೆಗ್ಗಳಿಕೆ. ನೆಹರೂರವರ ಪಾಂಡಿತ್ಯಪೂರ್ಣ 'ಭಾರತದ ಶೋಧನೆ' ಎಂಬ ಗ್ರಂಥದ ಹೆಸರು ಬಳಸುವುದು, ಇಂದಿರಾಗಾಂಧಿ ಮೊಮ್ಮಗ ಎಂದು ಪದೇ ಪದೇ ಬಿಂಬಿಸುವುದು. ಆತನಿಗೆ ಒಂದು ಇಮೇಜ್ ತರುವ ಕಾರ್ಯವಷ್ಟೇ. ನೇಪಥ್ಯದಲ್ಲೇ ಓಡಾಡಿಕೊಂಡಿದ್ದ ರಾಹುಲನನ್ನು ಎಐಸಿಸಿಯ ಪ್ರಧಾನ ಕಾರ್ಯದರ್ಶಿಯನ್ನಾಗಿ ನೇಮಿಸಿದ ಹೈಕಮಾಂಡ್‌ನ ಕ್ರಮದಿಂದಲೇ ಇದೆಲ್ಲಾ ಸಾಧ್ಯ ಎಂಬುದನ್ನು ಪ್ರತ್ಯೇಕವಾಗಿ ಹೇಳಬೇಕಿಲ್ಲ. ಇನ್ನೂ ರಾಹುಲ ಜನ ಮಾನಸದಲ್ಲಿ ನಿಲ್ಲಬೇಕಾದರೆ ಹಲವು-ತಳ ಬೇರು ಒಡನಾಟದ ಅಗತ್ಯವಿದೆ ಎಂದು ಕಾಂಗ್ರೆಸ್ಸಿನ ಹಿರಿಯರು ಹೇಳದಿದ್ದರೆ ಮುಂದಿನ ಪ್ರಧಾನಿ ಅಭ್ಯರ್ಥಿ ತಾನೇ ಎಂಬ ಭ್ರಮೆ ಈಗಲೇ ಹುಟ್ಟುವ ಸಂಭವವಿದೆ!

ಪಕ್ಷಕ್ಕೆ ಯಾರು ನಾಯಕರು ಎಂಬುದು ಅವರ ಆಂತರಿಕ ವಿಷಯ. ಇವೆಲ್ಲಕ್ಕೂ ಮುಖ್ಯ ವಿಷಯವೇನೆಂದರೆ ಈ ಹಿಂದೆಯೇ ಕಳೆದ ಚುನಾವಣೆಯಲ್ಲಿ ಕಾಂಗ್ರೆಸ್ ಸೋತು ಹೋದದ್ದರ ಹಿನ್ನೆಲೆಯಲ್ಲಿ ಮನಃ ಏಕಾಂಗಿಯಾಗಿ ಅಧಿಕಾರ ಹಿಡಿಯಲು ನಡೆಸುತ್ತಿರುವ ಅದರ ಕಸರತ್ತುಗಳಿಗೆ ರಾಹುಲಗಾಂಧಿಯಂತಹವರ ಇಮೇಜ್‌ನ್ನೂ ನೆಚ್ಚಿಕೊಂಡಿದೆ. ರಾಹುಲಗಾಂಧಿ ಯುವಕ ಇನ್ನೂ ನೇರವಾಗಿ ಭ್ರಷ್ಟಾಚಾರದಲ್ಲಿ ಭಾಗಿಯಾಗದೇ ಕಳಂಕ ಹೊತ್ತಿರದ ನಾಯಕ ಎಂದು, ಯುವಜನರು ಹಾಗೂ ಸಾಮಾನ್ಯರ ನಡುವೆ ಭಾವನೆ ಸೃಷ್ಟಿಸಿ. ಅದನ್ನೇ ಬಂಡವಾಳ ಮಾಡಿಕೊಳ್ಳಲು ಕಾಂಗ್ರೆಸ್ಸಿನ ಯತ್ನವಿದೆ. ಇನ್ನೊಂದೆಡೆ ಕಾಂಗ್ರೆಸ್ ಪಕ್ಷವು ಜನ ಸಾಮಾನ್ಯರ ಮನ ಗೆಲ್ಲುವಂತಹ ಯಾವುದೇ ಕಾರ್ಯಕ್ರಮ ಜಾರಿಗೊಳಿಸದೆ ರಾಹುಲ, ಕೃಷ್ಣ ಇತ್ಯಾದಿಗಳೇ ತಮ್ಮನ್ನು ಅಧಿಕಾರದ ಗದ್ದುಗೆಗೆ ಕೊಂಡೊಯ್ದು ಬಿಡಲಿದ್ದಾರೆ ಎಂದು ನಂಬಿರುವುದು ಒಂದು ಭ್ರಮೆಯಷ್ಟೇ.

ಇದೇ ರಾಹುಲ ಗಾಂಧಿ ಇತ್ತೀಚಿನವರೆಗೂ ಉ.ಪ್ರದೇಶ, ಗುಜರಾತ್‌ನ ಚುನಾವಣೆಗಳಲ್ಲಿ ಮಿಂಚಿನ ಸಂಚಾರ ನಡೆಸಿ ಪ್ರಚಾರಿಸಿದ್ದರೂ ಕಾಂಗ್ರೆಸ್ ಅನುಭವಿಸಿದ ಸೋಲು ಕಣ್ಣೆದುರೇ ಇದೆ. ಬದುಕಿನ ಕ್ರೂರ ವಾಸ್ತವ ಮತ್ತು ಭ್ರಮಾಲೋಕದಲ್ಲಿನ ನಡುವೆ ಜನರಿಗೆ ಅವರ ಬದುಕೇ ಮುಖ್ಯವಾಗುತ್ತದೆ.


ಇಂದು ಅಗತ್ಯ ವಸ್ತುಗಳ ಬೆಲೆ ಗಗನಕ್ಕೇರುತ್ತಿವೆ. ಸಮರ್ಪಕ ಪಡಿತರ ವಸ್ತುಗಳ ವಿತರಣೆ ಇಲ್ಲವಾಗಿದೆ. ಕೋಟ್ಯಾಂತರ ಕುಟುಂಬಗಳಿಗೆ ರೇಷನ್ ಇಲ್ಲ. ಬಿ.ಪಿ.ಎಲ್. ರೇಷನ್ ಕಾರ್ಡ್ ಇಲ್ಲ. ಕಾರ್ಷಿಕ ಬಿಕ್ಕಟ್ಟು ಇನ್ನೂ ಆಳವಾಗುತ್ತಿದೆ. ಆತ್ಮಹತ್ಯೆಗಳ ಸರಣಿ ನಿಲ್ಲಲೇ ಇಲ್ಲ, ವಸತಿ, ನೀರು, ಆಹಾರ ಭದ್ರತೆ, ಶಿಕ್ಷಣ, ನಿರುದ್ಯೋಗದಂತಹ ಬವಣೆಗಳಿಂದ ಜನ ತತ್ತರಿಸುತ್ತಿದ್ದಾರೆ.

ರಾಜ್ಯದಲ್ಲಂತೂ ಅಕಾಲಿಕವಾಗಿ ಬಿದ್ದ ಮಳೆಗೆ ಆದ ಜೀವ, ಆಸ್ತಿ-ಬೆಳೆಗಳ ಹಾನಿಯ ಅಘಾತದಿಂದ ಜನ ಇನ್ನೂ ಚೇತರಿಸಿಕೊಂಡಿಲ್ಲ. ಇಂತಹ ಸ್ಥಿತಿಯಲ್ಲಿ ಕೇಂದ್ರದಲ್ಲಿ ಆಳುತ್ತಿರುವ ಕಾಂಗ್ರೆಸ್ ಪಕ್ಷ ಅದರ ಸರ್ಕಾರ ಕನಿಷ್ಠ ಅಗ್ಗಧರದಲ್ಲಿ ರೇಷನ್ ವ್ಯವಸ್ಥೆ ಮಾಡಿದ್ದರೂ ಅದು ಜನರನ್ನು ಪ್ರಭಾವಿಸುತ್ತಿತ್ತು. ಭಾರತವನ್ನು ಕಂಡು ಹಿಡಿಯಲೆಂದೇ ಕಾಡು-ನಾಡಿನಲ್ಲಿ ಓಡಾಡಿದ ರಾಹುಲನಿಗೂ ಇದು ಅರ್ಥವಾಗದೇ ಹೋಗಿದೆ. ಅಂದರೆ ಜನರ ಬದುಕು ಬಡತನದ ಭಾರತ ಆತನಿಗೆ ಅರ್ಥವಾಗಿದೆ ಎಂದು ಭಾವಿಸಲಾದೀತೆ ?

ಆದ್ದರಿಂದ ಜನತೆಗೆ ಬೇಕಿರುವುದು ಸಾಮಾನ್ಯವಾಗಿ ಪರಿಹಾರ. ಇದಕ್ಕೆ ಬೇಕಿರುವುದು ನೀತಿಗಳ ಬದಲಾವಣೆ. ಆದರೆ ಕಾಂಗ್ರೆಸ್ ಇದುವರೆಗೂ ತಾನು ಅನುಸರಿಸುತ್ತಿರುವ ಉದಾರೀಕರಣ ಜಾಗತೀಕರಣದ ಜನವಿರೋಧಿ ನೀತಿಗಳನ್ನು ಕೈಬಿಡಲು ತಯಾರಿಲ್ಲ. ಕಾರಣ ಅದರ ಭೂಮಾಲೀಕ-ಬಂಡವಾಳಗಾರರ, ಬಹುರಾಷ್ಟ್ರೀಯ ಕಂಪನಿಗಳ ಪರವಾದ ನೀತಿಗಳು. ಇವನ್ನು ಕೈಬಿಡದೆ ಹೋದರೆ ಜನರೂ ಅವರನ್ನೂ ಕೈಬಿಡುತ್ತಾರೆ ಎಂಬ ಕಹಿ ಸತ್ಯವನ್ನು ಅರಿಯುವುದು ಒಳ್ಳೆಯದು.

ವರ್ಗ ಬದ್ಧತೆ, ಇದನ್ನು ಕೈಬಿಡದೇ ಹೋದರೆ ಜನರೂ ಅವರನ್ನು ಕೈಬಿಡುತ್ತಾರೆ ಎಂಬ ಕಹಿ ಸತ್ಯವನ್ನು ಕಾಂಗ್ರೆಸ್ ನಾಯಕರು ಅರಿಯುವುದು ಒಳ್ಳೆಯದು.

ಅಂತರ್ಜಾಲದಲ್ಲಿ ಜನಶಕ್ತಿ



ಎಸ್.ವೈ.ಗುರುಶಾಂತ್

ಒಂದು ಅತ್ಯಂತ ಸಂತೋಷ ಸಂಗತಿ ನಿಮ್ಮೊಂದಿಗೆ ಹಂಚಿಕೊಳ್ಳಲೇಬೇಕು. ದುಡಿವ ಜನರ ಪ್ರಾಣಮಿತ್ರ ಜನಶಕ್ತಿ ಈಗ ಅಂತರ್ಜಾಲದಲ್ಲಿ ಲಭ್ಯ. ಇದೇ 27ರಂದು ಬೆಂಗಳೂರಿನ ಸೆನೆಟ್ ಹಾಲ್‌ನಲ್ಲಿ ಬರಗೂರರು ಸಾಂಕೇತಿಕವಾಗಿ ಅದನ್ನು ಉದ್ಘಾಟಿಸಿದಾಗ ನೆರೆದ ಎಲ್ಲರಲ್ಲೂ ಎಲ್ಲಿಲ್ಲದ ಖುಷಿ. ಕಿವಿಗಡಚಿಕ್ಕುವ ಕರತಾಡನ. ನಾವು ಒಂದು ಹೆಜ್ಜೆ ಮುಂದಕ್ಕೆ ಇಟ್ಟಿದ್ದೇವೆ ಎಂಬ ಆತ್ಮವಿಶ್ವಾಸ ಜನಶಕ್ತಿಯ ಬಳಗಕ್ಕೆ.

ವಿಶಾಲವಾದ ಚಲನಶೀಲ ಜನ ಸಮೂಹವನ್ನು ತಲುಪಲು 16 ಪುಟಗಳ ಬಹುವರ್ಣದ ಪತ್ರಿಕೆಯಾಗಿ, ಜನಶಕ್ತಿ ಕಳೆದ ವರುಷ ಮೇ ಯಲ್ಲಿ ಪ್ರಕಟಣೆ ಆರಂಭಿಸಿತು. ಹಾಗೆಯೇ ಸಮೂಹ ಮಾಧ್ಯಮದಲ್ಲೇ ಒಂದು ವಿಶಿಷ್ಟ ಸಾಧ್ಯತೆಯು ಶಕ್ತಿ, ವಿಪುಲ ಅವಕಾಶಗಳ ಅದ್ಭುತ ಮಾಧ್ಯಮವಾಗಿ ಬೆಳೆಯುತ್ತಿರುವ ಅಂತರ್ಜಾಲದಲ್ಲಿ ಓದುಗರಿಗೆ ಎಲ್ಲೆಲ್ಲೂ ದೊರೆಯುವಂತೆ, ಮುಂದೆ ಎಲ್ಲ ಅವಕಾಶಗಳನ್ನು ಬಳಸಿ, ಬೆಳೆದು ಮುಂದೆ ಅದೇ ಒಂದು ಸ್ವತಂತ್ರ ಸಂವಹನ ಮಾಧ್ಯಮವಾಗಿ ಮಾರ್ಪಾಡಾಗುವಂತಹ ಕಡೆಗೆ ನಡೆಯುವುದು ನಮ್ಮ ಪ್ರಬಲ ಇಚ್ಛೆ. ಆ ಕಡೆಗೆ ಒಂದು ಪುಟ್ಟ ಹೆಜ್ಜೆ.



ಅಂದು ಸಭಾಂಗಣವೆಲ್ಲಾ ಕಿಕ್ಕಿರಿದು ತುಂಬಿ, ಹೊರಗೂ ಒತ್ತಾಗಿ ನಿಂತು ಮಾತುಗಳನ್ನು ಆಲಿಸಿದ್ದಕ್ಕೆ ಮುಖ್ಯ ಕಾರಣ ಪಾಲಗುಮ್ಮಿ .ಸಾಯಿನಾಥ್ ಮಾಧ್ಯಮಲೋಕದ ಈ ಭಿನ್ನ ಪಯಣಿಗ ಇಲ್ಲಿಗೆ ಬರಲಿದ್ದಾರೆ, ಮಾತನಾಡಲಿದ್ದಾರೆ ಎಂಬ ಸುದ್ದಿ ಪಸರಿಸುತ್ತಿದ್ದಂತೆ ಕಾರ್ಯಕ್ರಮದ ಖಚಿತತೆಗಾಗಿ, ಅಂತರಂಗದ ಆತುರ ಹೊರಗರುಹಿ ಸಂಪರ್ಕಿಸಿದವರು ನೂರಾರು ಜನ. ಸದಾ ಕಾಲಿಗೆ ಚಕ್ರವನ್ನು ಕಟ್ಟಿಕೊಂಡೇ ದೇಶ ಸುತ್ತುವ ಸಾಯಿನಾಥ್, ಇಲ್ಲಿ ಮೂರು ತಾಸು ಕುಂತು, ನಿಂತು ಮಾತನಾಡಿದಾಗ ಅಲುಗಾಡದೇ ಆಲಿಸಿದವರೇ ಎಲ್ಲರೂ. ಮಾತು ಮುಗಿಸಿದಾಗಲೂ ಇನ್ನೂ ಒಂದಿಷ್ಟು ಮಾತುಗಳನ್ನು ವಿಷಯಗಳನ್ನು ಆಡಬೇಕಿತ್ತು ಎಂಬ ನಿರೀಕ್ಷೆ.

ಹೌದು ಇಲ್ಲಿ ಬಂದು ಭಾಗವಹಿಸಿದವರೂ ವಿಶಿಷ್ಟರೇ. ಸಂವಹನ ಮಾಧ್ಯಮ, ಸಾಂಸ್ಕೃತಿಕ ಲೋಕದಲ್ಲಿ ತಮ್ಮದೇ ಬಹುಮುಖೀ ಕೊಡುಗೆಗಳನ್ನು ನೀಡುತ್ತಿರುವ ಅನುಭವಿಗಳು, ಹಾಗಾಗಬೇಕೆಂದು ಕಣ್ಣರಳಿಸಿ ಕಲಿಯುತ್ತಿರುವ ಮಾಧ್ಯಮದ ವಿದ್ಯಾರ್ಥಿಗಳು, ಅಲ್ಲದೇ ಜನಚಳುವಳಿಗಳ ಜೀವಕಣಗಳು.

ಈ ಸಮಾರಂಭದಲ್ಲಿ ಉದ್ಘಾಟನಾ ಭಾಷಣ ಮಾಡಿದ ಕನ್ನಡದ ಹಿರಿಯ ಸಾಹಿತಿ ಚಿತ್ರನಿರ್ದೇಶಕರಾದ ಡಾ.ಬರಗೂರು ರಾಮಚಂದ್ರಪ್ಪನವರು ವರ್ತಮಾನದ ಸಂಗತಿಗಳಿಗೆ ಒಂದು ತಾತ್ವಿಕ ವಿಶ್ಲೇಷಣೆ ಒದಗಿಸಿದರು. ಪ್ರತಿ ಮಾತಿನಲ್ಲೂ ಕಾವ್ಯದ ಝರಿ ಹರಿಸುವ ಕವಿ, ಈ ಟಿ.ವಿ. ಕನ್ನಡ ಛಾನೆಲ್‌ನ ಸುದ್ದಿ ವಿಭಾಗದ ಮುಖ್ಯಸ್ಥ ಜಿ.ಎನ್.ಮೋಹನ್ ಮಾತುಗಳಿಗೆ ಬೀಳ್ಕೊಟ್ಟು, ಆಡಿದ್ದೆಲ್ಲಾ ಸಾಯಿನಾಥರ ವಿಶಿಷ್ಟ ವ್ಯಕ್ತಿತ್ವದ ಬಗ್ಗೆಯೇ ಅವರು ಹುಡುಕುವ ನೋಟದ ಬಗ್ಗೆಯೋ ಹೀಗೆ ಒಂದೊಂದು ಭಿನ್ನ ಬಗೆ... ಅಂದಿನ ಕಾರ್ಯಕ್ರಮಕ್ಕೆ ಜೀವಂತಿಕೆ, ಅರ್ಥವಂತಿಕೆ ತಂದುಕೊಟ್ಟವು.

ಅಂದ ಹಾಗೆ ಅಲ್ಲಿ ಬಂದವರೆಲ್ಲಾ ಇನ್ನು ಮುಂದೆಯೂ ಇಂತಹ ಹಲವು ಹತ್ತು ಸಂವಾದಗಳನ್ನು ಆಪೇಕ್ಷಿಸಿದರು. ಅಂತರ್ಜಾಲ ಹುಡುಕಾಟದಲ್ಲಿ, ಕತ್ತಲೆಯೊಡನೆ ಹೋರಾಡುವ ಒಂದು ಪುಟ್ಟ ಹಣತೆಗಾಗಿ ಹಂಬಲಿಸಿದರು. ಈಗ ಪ್ರತಿವಾರವೂ ನಮಗೊಂದು ಹೊಸ ಜವಾಬ್ದಾರಿ. ಇನ್ನೂ ಹೊಸತನ್ನು ಸಾಧಿಸಲು ನಿಮ್ಮೆಲ್ಲರ ಪಾಲಿರಲಿ. ಸಮಯ ಸಿಕ್ಕಾಗ, ಇಲ್ಲವೇ ಪ್ರತಿ ಸೋಮವಾರ 6 ನಂತರ www.janashakthi.org ಗೆ ಒಂದು ಭೇಟಿ ಕೊಡಿ.

ಈ ಹಬ್ಬಗಳು ..... ಅವರ ಕೈಗೆ ಸಿಕ್ಕರೆ

ನಮ್ಮಲ್ಲಿಯ ಬಹುತೇಕ ಹಬ್ಬಗಳು ಜನತೆಯನ್ನು ಬೆಸೆಯುವ ವಿಶೇಷ ಸನ್ನಿವೇಶಗಳನ್ನು ಸೃಷ್ಟಿಸುತ್ತವೆ.

ಕಳೆದ ಶುಕ್ರವಾರ (21)ದಂದು ಒಂದು ವಿಶಿಷ್ಟ ಸಂದರ್ಭಕ್ಕೆ ಸಾಕ್ಷಿಯಾಯಿತು. ಅಂದು ಗುಡ್ ಫ್ರೈಡೇ (ಶುಭ ಶುಕ್ರವಾರ), ಈದ್ ಮಿಲಾದ್ ಹಾಗೂ ಹೋಳಿ, ಕ್ರಿಶ್ಚಿಯನ್, ಮುಸ್ಲಿಮ್, ಹಿಂದೂಗಳಿಗೆ ಸಂಭ್ರಮ ದಿನ.

ಆದರೆ ಈಗೀನ ಹಬ್ಬಗಳ ಬಾಂಧ್ಯವ್ಯ ಬೆಸೆಯುವ, ಹರುಷ ಹಂಚಿಕೊಳ್ಳುವ ಸಂದರ್ಭದಲ್ಲಿ.... ಆತಂಕದ, ತಲ್ಲಣ ಹುಟ್ಟಿಹಾಕುವಂತಹದ್ದಾಗುತ್ತಿದೆ. ಕಾರಣ ಕೋಮುವಾದಿ ರಾಜಕಾರಣದ ಪ್ರವೇಶ. ಹಬ್ಬಗಳು ಬಂದವೆಂದರೆ ಅಲ್ಲಿ ಪೋಲಿಸರ ಲಾಠಿ, ಬೂಟಿನ ಸಪ್ಪಳ ಅನಿವಾರ್ಯ ಎನ್ನುವಂತಾಗಿ ಬಿಟ್ಟಿದೆ.

ಇದೇ ಶುಕ್ರವಾರ ಶನಿವಾರದಂದೂ ನಡೆದ ಘಟನೆಗಳನ್ನು ನೋಡಿ. ಹೋಳಿ ಹಬ್ಬದ ಸಂದರ್ಭ ಬಳಸಿ ಸಂಘ ಪರಿವಾರ ಉತ್ತರ ಕನ್ನಡದ ಮುಂಡಗೊಡ ಮತ್ತು ಹಳಿಯಾಳಗಳಲ್ಲಿ, ಗುಲ್ಬರ್ಗದ ಆಳಂದದಲ್ಲಿ, ಹುಬ್ಬಳಿಯಲ್ಲಿ ಗಲಭೆ ಹುಟ್ಟಿ ಹಾಕಿದ್ದಾರೆ. ಸಕಲೇಶಪುರಲ್ಲಿ ಮುಸ್ಲಿಮರನ್ನು ಅವ್ಯಾಚ್ಯ ಶಬ್ದಗಳಿಂದ ನಿಂದಿಸಿ, ಅಮಾನುಷ ಕ್ರಮಗಳನ್ನು ಕೈಗೊಳ್ಳಲು ಕರೆ ನೀಡಿದ ಪ್ರಚಾರ ಕರಪತ್ರವನ್ನು ವ್ಯಾಪಕವಾಗಿ ಹಂಚಿದ್ದಾರೆ. ಅದು ತಮ್ಮ ವಿರುದ್ಧವೇ ತಿರುಗಿದಾಗ ಅದನ್ನು ನಿರಾಕರಿಸಿದ್ದಾರೆ. ಚುನಾವಣೆ ಹತ್ತಿರವಾಗುತ್ತಿರುವಂತೆ ಈ ಕಾವೀಪಡೆ ಹಲವು ಹತ್ತು ದಿಕ್ಕಿನಲ್ಲಿ ಹಲವು ಸ್ವರೂಪಗಳಲ್ಲಿ ಏಕ ಕಾಲಕ್ಕೆ ಕಾರ್ಯವೆಸಗುತ್ತಿದೆ.

ನೋಡಿ ಈ ನಡುವೆ ಯಡಿಯೂರಪ್ಪರನ್ನು ಮುಖ್ಯಮಂತ್ರಿಯಾಗಿ ಬಿಜೆಪಿ ಆರಿಸಿ ಬಿಟ್ಟಿದೆ. ಇನ್ನೂ ಚುನಾವಣೆ ಪ್ರಕಟವಾಗಿಲ್ಲ. ಮತದಾನವಾಗಿ ಬಹುಮತ ಪಡೆಯಲು ಶಾಸಕರು ಆಯ್ಕೆಯಾಗಲಿಲ್ಲ. ಆಯ್ಕೆಯಾದ ಶಾಸಕರು ನಾಯಕನನ್ನು ಆರಿಸಲಿಲ್ಲ. ಆದರೆ ಆತ ಸಿ.ಎಂ. ಅದ್ವಾನಿ ಪಿ.ಎಂ...... ಅಂದರೆ ಒಂದು ಪ್ರಜಾಸತ್ತಾತ್ಮಕ ಪ್ರಕ್ರಿಯೆಗೆ ಪಕ್ಕಾಗುವ, ಜನಾದೇಶಕ್ಕೆ ತಲೆಬಾಗುವ ಅಥವಾ ಕಾಯುವ ಯಾವ ಕನಿಷ್ಟ ವಿನಯವಂತಿಕೆ, ಬದ್ಧತೆ ಇಲ್ಲವೇ ಇಲ್ಲ. ಹೀಗೆ ಒಪ್ಪಿಸುವ ಮೂಲಕ ಫ್ಯಾಶಿಸ್ಟ್ ಮನೋಭಾವವೊಂದನ್ನು ಅತ್ಯಂತ ನಯವಾಗಿ, ಆಕರ್ಷಕವಾಗಿ ಹೇರುತ್ತಾ ಸಾರ್ವಜನಿಕ ಬದುಕಿನಲ್ಲಿ ಮೌಲ್ಯವಾಗಿ ರೂಪಿಸುತ್ತಾ ಹೋಗುತ್ತಾರಲ್ಲ! ಅದೂ ವಿಷದ ವಿಕೃತ ವೈರಸ್‌ನ ಹುಟ್ಟಿಗಾಗಿ........

ಕೂಸು ಹುಟ್ಟುವ ಮೊದಲೇ ಕುಲಾಯಿ ಹೊಲೆಸುವ, ಹೊಲಿಸಿದ ಕೂಲಾಯಿಗಾಗಿ ಏನೆಲ್ಲವನ್ನು ಮಾಡುವ ಇವರ ಬಗ್ಗೆ ಎಷ್ಟು ಎಚ್ಚರ ವಹಿಸಿದರೂ ಸಾಕಾಗದು ಅಲ್ಲವೇ ?

ಜಾತಿ ವ್ಯವಸ್ಥೆಗೆ ಬಲಿಯಾದ ಪ್ರೀತಿ

ಬಸವಣ್ಣ, ಬುದ್ಧನ ನಾಡು ಭಾರತ ಜಾತಿ, ಕೋಮು, ಅಸ್ಪೃಶ್ಯತೆಯಂತಹ ಅಮಾನವೀಯ ವ್ಯವಸ್ಥೆಯನ್ನು ಇಂದಿಗೂ ತನ್ನೊಡಲಲ್ಲಿ ತುಂಬಿಕೊಂಡಿದೆ.

ಇಲ್ಲಿ ಹೇಳುತ್ತಿರುವ ಕಥೆ ಭಿನ್ನವಾಗಿರುವುದು ಮಾತ್ರವಲ್ಲ, ಜಾತಿ ವ್ಯವಸ್ಥೆಯ ಗಂಭೀರತೆ ಕಣ್ಣಿಗೆ ರಾಚುತ್ತದೆ. ಮೇಲ್ಜಾತಿ ಯುವತಿಯನ್ನು ಪ್ರೀತಿಸಿದ್ದಕ್ಕೆ ದಲಿತ ಯುವಕನ ಕಣ್ಣು ಕಿತ್ತಿದ್ದಾರೆಂದರೆ ಅವರೇನು ಮನುಷ್ಯರೋ ಇಲ್ಲ ಪ್ರಾಣಿಗಳೋ? ಮಹಾರಾಷ್ಟ್ರದ ನಾಂದೇಡ್ ಜಿಲ್ಲೆಯ ಸತೇಗಾಂವ್ 200 ಮನೆಗಳಿರುವ ಸಣ್ಣ ಹಳ್ಳಿ, ಅದರಲ್ಲಿ ದಲಿತ ಮಾತಂಗ್ ಜಾತಿಗೆ ಸೇರಿದ 20 ಕುಟುಂಬಗಳಿವೆ. ದಲಿತ ಯುವಕ ಚಂದ್ರಕಾಂತ್ ಗಾಯಕ್‌ವಾಡ್ ಮರಾಠ ಜಾತಿಯ ಪ್ರೇಮಲ ಜಾಧವ್‌ರನ್ನು ಐದು ವರ್ಷಗಳಿಂದ ಪ್ರೀತಿಸುತ್ತಿದ್ದ. ಯುವತಿ ಮನೆಯವರು ಇದಕ್ಕೆ ತೀವ್ರ ವಿರೋಧ ವ್ಯಕ್ತಪಡಿಸಿದ್ದರು. ಚಂದ್ರಕಾಂತ್‌ನೊಂದಿಗೆ ಮದುವೆ ಮಾಡಿಕೊಳ್ಳಲು ಸಹಮತ ಸೂಚಿಸದಿದ್ದರೆ ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಪ್ರೇಮಲ ಬೆದರಿಕೆ ಒಡ್ಡಿದ್ದಳು. ಇದನ್ನು ಅವರ ಮನೆಯವರು ಕ್ಯಾರೇ ಅನ್ನಲಿಲ್ಲ.

ಒಂದು ದಿನ ಮದುವೆ ಮಾಡಿಕೊಳ್ಳಲೆಂದು ಚಂದ್ರಕಾಂತ್ ಸ್ನೇಹಿತ ದಲಿತ ಬೌದ್ಧನಾದ ಮಿಲಿಂದ್ ಜೋಂದಲೆ ನೆರವಿನೊಂದಿಗೆ ಮೂವರೂ ಆಂಧ್ರಪ್ರದೇಶಕ್ಕೆ ಹೊರಟರು. ಆಂಧ್ರದ ಸಿದ್ದಪೇಟೆಯಲ್ಲಿ ಒಂದು ದಿನ ತಂಗಿದ್ದು ಮರುದಿನ ಚಂದ್ರಕಾಂತ್ ಅವರ ಸಂಬಂಧಿಕರಿದ್ದ ನಿಜಾಮಬಾದ್‌ಗೆ ತೆರಳುವ ಯೋಜನೆ ಹೊಂದಿದ್ದರು. ಸಿದ್ದಿಪೇಟೆಯಲ್ಲಿರುವಾಗಲೇ ಪ್ರೇಮಲ ಮನೆಯವರಿಗೆ ಸುದ್ದಿ ತಿಳಿಯಿತು. ರಾತ್ರೋರಾತ್ರಿ ಜೀಪ್‌ಗಳೊಂದಿಗೆ ಸಿದ್ದಿಪೇಟೆಗೆ ದಾಳಿ ಮಾಡಿ ಮೂವರನ್ನೂ ಹಿಡಿದರು. ಅಲ್ಲೇ ಇಬ್ಬರೂ ದಲಿತ ಯುವಕರನ್ನೂ ಮನಸೋಯಿಚ್ಛೆ ಅಮಾನವೀಯವಾಗಿ ಥಳಿಸಿದರು. ಅವರನ್ನೆಲ್ಲಾ ಮತ್ತೆ ಸತೇಗಾಂವ್‌ಗೆ ಕರೆತಂದರು.

ಸತೇಗಾಂವ್‌ನಲ್ಲಿ ನಡೆಯಿತೊಂದು ಘೋರ ದುರಂತ. ಚಾಕು ಮತ್ತು ಚೂರಿಗಳಿಂದ ಚಂದ್ರಕಾಂತ್‌ನ ಒಂದು ಕಣ್ಣನ್ನು ಕಿತ್ತರು. ಮತ್ತೊಂದು ಕಣ್ಣು ತೆಗೆಯುವ ತಯಾರಿಯಲ್ಲಿದ್ದರು. ಸುದ್ದಿ ತಿಳಿದ ಚಂದ್ರಕಾಂತ್ ಮನೆಯವರು ಸ್ಥಳಕ್ಕೆ ಧಾವಿಸಿದರು. ಪೋಲೀಸರಿಗೆ ದೂರು ನೀಡಬಾರದು. ಒಂದು ವೇಳೆ ದೂರು ನೀಡಿದರೆ ಇಡೀ ಕುಟುಂಬವನ್ನೇ ಮುಗಿಸುತ್ತೇವೆ ಎಂದು ಎಚ್ಚರಿಕೆ ನೀಡಿ ಅವರನ್ನು ಬಿಡುಗಡೆ ಮಾಡಿದರು.

ಚಂದ್ರಕಾಂತ್ ಕುಟುಂಬ ಈ ಷರತ್ತಿಗೆ



ಕಣ್ಣು ಕಳೆದುಕೊಂಡ ದಲಿತ ಯುವಕ

ಸಮ್ಮತಿಸಿದ್ದರಿಂದ ಮತ್ತೊಂದು ಕಣ್ಣು ಉಳಿಯಿತು. ಆದರೆ ಚಂದ್ರಕಾಂತ್ ಚಿಕ್ಕಪ್ಪ ಪೋಲೀಸರಿಗೆ ದೂರು ನೀಡಿದ, ಪ್ರಕರಣಕ್ಕೆ ಸಂಬಂಧಿಸಿದಂತೆ ಪೋಲೀಸರು ಕೆಲವರನ್ನು ಬಂಧಿಸಿದರು. ಆದರೆ ಪ್ರಮುಖ ಆರೋಪಿ ಪ್ರೇಮಲ ಚಿಕ್ಕಪ್ಪ ಸರ್ಕಾರಿ ಶಾಲೆ ಶಿಕ್ಷಕ ದಿಗಂಬರ್ ಜಾಧವ್ ಇನ್ನೂ ತಲೆಮರೆಸಿಕೊಂಡಿದ್ದಾನೆ.

ಮಧ್ಯಪ್ರವೇಶ: ಸಿಪಿಐ(ಎಂ) ಮಹಾರಾಷ್ಟ್ರ ರಾಜ್ಯ ಸಮಿತಿ ಸದಸ್ಯರಾದ ವಿಜ್ ಗಂಭಾನೆ ನೇತೃತ್ವದ ನಿಯೋಗ ತತ್‌ಕ್ಷಣ ಆಸ್ಪತ್ರೆಗೆ ಭೇಟಿ ನೀಡಿ ಸಂಕಷ್ಟಕ್ಕೆ ಒಳಗಾದ ಯುವಕರು ಮತ್ತು ಅವರ ಕುಟುಂಬಕ್ಕೆ ಸಾಂತ್ವನ ಹೇಳಿತು. ಚಂದ್ರಕಾಂತ್ ಕಣ್ಣನ್ನು ಕಿತ್ತ ಸತೇಗಾಂವ್‌ಗೂ ನಿಯೋಗ ಭೇಟಿ ನೀಡಿತ್ತು.

ನಂತರ ಸಿಪಿಎಂ ಪಕ್ಷ ಇತರ ಎಡಪಕ್ಷಗಳು ಮತ್ತು ರಿಪಬ್ಲಿಕ್ ಗುಂಪುಗಳ ಸಭೆ ಕರೆದು ಘಟನೆಯನ್ನು ಖಂಡಿಸಿ ಹಾಗೂ ಆರೋಪಿಗಳನ್ನು ಶಿಕ್ಷೆಗೆ ಗುರಿಪಡಿಸಬೇಕೆಂದು ಆಗ್ರಹಿಸಿ ನಾಂದೇಡ್ ಬಂದ್‌ಗೆ ಕರೆ ನೀಡಿತು. ಈ ಪಕ್ಷಗಳ ಸಾವಿರಾರು ಮಂದಿ ಬೀದಿಗಿಳಿದು ಪ್ರತಿಭಟನೆ ನಡೆಸಿದರು. ಕೆಂಪು ಮತ್ತು ನೀಲಿ ಬಾವುಟಗಳು ಒಂದಾದವು. ದಲಿತರಿಗೆ ಪುನರ್ ವಸತಿ ಕಲ್ಪಿಸಬೇಕು. ಆರ್ಥಿಕ ನೆರವು ಒದಗಿಸಬೇಕು ಚಂದ್ರಕಾಂತ್ ಹಾಗೂ ಮಿಲಿಂದ್‌ಗೆ ಸರ್ಕಾರಿ ಉದ್ಯೋಗ ಕಲ್ಪಿಸಬೇಕೆಂದು ಒತ್ತಾಯಿಸಲಾಯಿತು.

ಘಟನೆ ನಡೆದ ರಾತ್ರಿಯೇ ಸಿಪಿಐ(ಎಂ)ಪಕ್ಷದ ಪಾಲಿಟ್ ಬ್ಯೂರೋ ಸದಸ್ಯರು ಹಾಗೂ ರಾಜ್ಯ ಸಭೆ ಸದಸ್ಯರಾದ ಬೃಂದಾಕಾರಟ್ ನಾಂದೇಡ್‌ಗೆ ತೆರಳಿ ಚಂದ್ರಕಾಂತ್ ಮತ್ತು ಮಿಲಿಂದ್ ಕುಟುಂಬಗಳನ್ನು ಭೇಟಿ ಮಾಡಿ ಸಾಂತ್ವನ ಹೇಳಿದರು. ಜಿಲ್ಲಾಧಿಕಾರಿ ಮತ್ತು ಜಿಲ್ಲಾರಕ್ಷಣಾಧಿಕಾರಿಗಳನ್ನು ಸಂಪರ್ಕಿಸಿ ಬೇಡಿಕೆಗಳನ್ನು ಈಡೇರಿಸ ಬೇಕೆಂದು ಒತ್ತಾಯಿಸಿದರು. ಇಷ್ಟು ಪ್ರಯತ್ನದ ನಂತರ ಮೊದಲು ತೀರಾ ಅಲ್ಪ ಪರಿಹಾರ ನೀಡಿ ಕೈ ತೊಳೆದುಕೊಂಡಿದ್ದ ಜಿಲ್ಲಾಡಳಿತ ಪರಿಹಾರ ಮೊತ್ತವನ್ನು ಹೆಚ್ಚಿಸಿದೆ. ಜಾತಿಯ ಅಂಧಾಭಿಮಾನ ಮನುಷ್ಯನೇ ಮನುಷ್ಯನ ಕಣ್ಣನ್ನು ತೆಗೆಯುವವರೆಗೆ ಕೊಂಡೊಯ್ಯುತ್ತದೆ ಎಂದರೆ ಈ ಜಾತಿ ವ್ಯವಸ್ಥೆ ಜಾತಿ ಭಾವನೆ ಸಮಾಜದಲ್ಲಿ ಎಷ್ಟು ಆಳವಾಗಿ ಬೇರೂರಿದೆ ಎಂದು ಅರ್ಥ ಮಾಡಿಕೊಳ್ಳಬೇಕಾಗಿದೆ.

ವರ್ಣಾಶ್ರಮ ಧರ್ಮವನ್ನು ಉಲ್ಲಂಘಿಸಲು ಸಿದ್ಧವಾದ ಪುರೋಹಿತರು !?

ಇಲ್ಲೊಂದು ವಿಶೇಷ ಸುದ್ದಿ ಇದೆ. ಬ್ರಾಹ್ಮಣ ಕುಟುಂಬಗಳ ಸಾಂಪ್ರದಾಯಿಕ ವೃತ್ತಿಯಾದ ಪೌರೋಹಿತ್ಯ, ಪೂಜೆ ಇತ್ಯಾದಿ ಮಾಡುವ ಯುವಕರು ಬ್ರಾಹ್ಮಣರಲ್ಲದ ಇತರ ಜಾತಿಯ ಹೆಣ್ಣು ಮಕ್ಕಳನ್ನು ಮದುವೆಯಾಗಬಹುದಂತೆ. ಯಾರು ಇದನ್ನು ಹೇಳಿದ್ದು. ಇತ್ತೀಚೆಗೆ ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ, ಕಾಸರಗೋಡು ಜಿಲ್ಲೆಗಳ ಪುರೋಹಿತ, ಪಂಡಿತರು, ವಿದ್ವಾಂಸರು ಪಾಲ್ಗೊಂಡ ವಿಚಾರ ಸಂಕಿರಣ ಒಂದರಲ್ಲಿ ಇಂತಹ ನಿರ್ಣಯ ಕೈಗೊಂಡಿದ್ದಾರೆ.

ಏನಿದು ಈ ರೀತಿ ಜಾತಿ ವ್ಯವಸ್ಥೆ ಸಡಿಲಗೊಳಿಸುವ ದಿಢೀರ್ ಜ್ಞಾನೋದಯ ಅಂತ ಆಶ್ಚರ್ಯವೇ? ಸ್ವಲ್ಪ ತಡೆಯಿರಿ ಹಾಗೆಲ್ಲ ಭ್ರಮಿಸಬೇಡಿ. ಇದರ ಅಸಲಿ ಕಾರಣ ಬೇರೆ. ಈಗೀಗ ಬ್ರಾಹ್ಮಣ ಕುಟುಂಬಗಳಲ್ಲಿ ಪೌರೋಹಿತ್ಯ ವೃತ್ತಿ ಮುಂದುವರೆಸುವ ಯುವಕರಿಗೆ ತಮ್ಮ ಜಾತಿಗಳಲ್ಲಿ ಯುವತಿಯರು ದೊರೆಯುತ್ತಿಲ್ಲ. ಈ ಬ್ರಾಹ್ಮಣ ಯುವತಿಯರಿಗೆ ಐಟಿ-ಬಿಟಿ ಕ್ಷೇತ್ರಗಳಲ್ಲಿ ದುಡಿಯುವ ಗಂಡುಗಳು, ವೈದ್ಯರು ಮುಂತಾದ ವೃತ್ತಿಯ ಗಂಡುಗಳೇ ಬೇಕು ಅನ್ನುತ್ತಿದ್ದಾರಂತೆ. ಮದುವೆಗೆ ಸ್ವಜಾತಿ ಹೆಣ್ಣು ದೊರೆಯದ ಪೂಜಾರಿ ಗಂಡುಗಳೆಲ್ಲಾ ಒತ್ತಡ ತಂದು ಇಂತಹ ತೀರ್ಮಾನವೊಂದನ್ನು ಅಂಗೀಕರಿಸುವಂತೆ ಮಾಡಿದ್ದಾರಂತೆ.

ಈಗ ವಿದ್ವಾಂಸರು ಪಂಡಿತರು ಏನಂತಾರೆ ಅಂದರೆ ಇದೇನು ತಪ್ಪಲ್ಲವಂತೆ. 2000 ವರ್ಷಗಳ ಹಿಂದಿನ 'ಗೃಹ್ಯ ಸೂತ್ರ' ದಲ್ಲಿ ಈ ಕ್ರಮವನ್ನು ಸೂಚಿಸಲಾಗಿದೆ ಯಂತೆ.

ನಮ್ಮ ಶಾಸ್ತ್ರ, ಪುರಾಣ, ಗ್ರಂಥಗಳನ್ನು ಕೆದಕುತ್ತಾ ಹೋದರೆ ಈಗಿನ ಸಮಯ, ಸನ್ನಿವೇಶಕ್ಕೆ 'ಅನುಕೂಲ' ವಾಗಬಹುದಾದ್ದೇನೋನೋ ಸಿಗುತ್ತಾ ಹೋಗುತ್ತವೆ. 'ಅನುಕೂಲ' ಮುಖ್ಯ ಅಷ್ಟೇ.

'ಅನ್ಯ ಜಾತಿ'ಯ ಯುವತಿಯರು ಎಂದರೆ ಎಲ್ಲಿಯವರೆಗೆ. ದಲಿತ ಯುವತಿಯರನ್ನೂ ಈ ಯುವಕರು ಮದುವೆಯಾಗಲು ಸಿದ್ಧರೆ, ಇದಕ್ಕೆ ಅವಕಾಶ ಮಾಡಿಕೊಡಲು ಹಿರಿಯ ಪಂಡಿತರು, ವಿದ್ವಾಂಸರು ಒಪ್ಪುವರೇ! ಇದರ ಬಗ್ಗೆ ಯಾವುದೂ ಸ್ಪಷ್ಟ ಇಲ್ಲ.


ಮತ್ತೆ ದಲಿತ, ಶೂದ್ರ ಜಾತಿಗಳ ಯುವಕರು ಬ್ರಾಹ್ಮಣ ಯುವತಿಯರನ್ನು ಮದುವೆಯಾಗಲು ಬಯಸಿದರೆ (ಹೆಣ್ಣುಗಳು ಒಪ್ಪಿದರೆ) ಆಗ ಅದಕ್ಕೆ ಇವರು ಒಪ್ಪಿಗೆ ನೀಡುವರೇ?

ಅದೆಲ್ಲಾ ಹೋಗಲಿ, ಅನುಕೂಲಕ್ಕಾಗಿ ಸೃಷ್ಟಿಸಿರುವ ಈ ವರ್ಣ ವ್ಯವಸ್ಥೆ ಬಯಸಿದ ಅನುಕೂಲಗಳನ್ನು ಒದಗಿಸದೇ ಹೋದ ಮೇಲೆ ಅದು ಇದ್ದಾದರೂ ಏನು ಪ್ರಯೋಜನ ಅಲ್ಲವೇ? ಹೀಗಿದೆ ವರ್ಣ ವ್ಯವಸ್ಥೆಯ ರಹಸ್ಯ.

ದೊಡ್ಡ ನಮಸ್ಕಾರ ನಿಮಗೆ

ಸಾಮಾನ್ಯ ಪ್ರಜೆ : ನಮ್ಮ ಸಮಸ್ಯೆ ಕೇಳೋರ್‍ಯಾರ್ರಿ...?
ಕಾಂಗ್ರೆಸ್ ಪುಡಾರಿ : ಕೃಷ್ಣ ಬಂದಿದ್ದಾರೆ ಇನ್ನೇನು ಯೋಚನೆ ಮಾಡಬೇಕಾಗಿಲ್ಲ.
ಸಾ.ಪ್ರ : ತರಕಾರಿ ಬೆಲೆಗಳು ಏರ್ತಾ ಇದೆಯಲ್ರಿ....
ಕಾಂ.ಪು : ಕೃಷ್ಣ ಬರುತ್ತಿದ್ದ ಹಾಗೇ ಎಲ್ಲ ಸ್ವಾಮಿಜಿಗಳಿಗೂ ಅಡ್ಡ ಬೀಳ್ತಿದ್ದಾರೆ ಅವರೆಲ್ಲರ ಆಶೀರ್ವಾದ ಸಿಗುತ್ತದೆ.
ಸಾ.ಪ್ರ : ಹಾಲಿನ ಬೆಲೆನೂ ಏರಿದೆಯಲ್ರಿ.....?
ಕಾಂ.ಪು : ಕೃಷ್ಣ ಹೋಮ ಹವನಗಳನ್ನು ಚೆನ್ನಾಗಿ ಮಾಡಿಸ್ತಾರೆ.
ಸಾ.ಪ್ರ : ಬಸ್ ಚಾರ್ಜ್ ಏರಿದ್ಯಲ್ರೀ.... ಈ ಪಾಟಿ.
ಕಾಂ.ಪು : ಈ ಸಾರಿ ಬೆಂಗಳೂರನ್ನು ಪೂರಾ ಸಿಂಗಾಪುರ ಮಾಡ್ತಾರೆ ಕೃಷ್ಣ.
ಸಾ.ಪ್ರ : ಅಕ್ಕಿ ಬೇಳೆ ಎಣ್ಣೆ ಎಲ್ಲಾ ಪದಾರ್ಥಗಳ ಬೆಲೆ ಗಗನಕ್ಕೆ ಏರ್ತಿದೆಯಲ್ರಿ........
ಕಾಂ.ಪು : ಕೃಷ್ಣ ಬಂದಿರೋದ್ರಿಂದ ಸಾಫ್ಟ್‌ವೇರ್‌ನೋರೆಲ್ಲ ಖುಷಿಯಾಗಿದ್ದಾರೆ.
ಸಾ.ಪ್ರ : ಪೆಟ್ರೋಲ್ ರೇಟು ಏನ್ರಿ ಹೀಗೆ ಏರ್ತಿದೆ?
ಕಾಂ.ಪು : ಕೃಷ್ಣ ಬಂದಿದ್ದಾರಲ್ಲ ಇನ್ನು ಯಾವಾಗ ಎಲೆಕ್ಷನ್ ಆದ್ರೂ ಚಿಂತೆಯಿಲ್ಲ.
ಸಾ.ಪ್ರ : ನಾವು ಒಂದು ಸೈಟು, ಮನೆ ಮಾಡೋದು ಹ್ಯಾಗ್ರಿ....
ಕಾಂ.ಪು : ಕೃಷ್ಣ ಬಂದಿದ್ದಾರೆ. ಆದ್ರೂ ನಮ್ಮ ಪಕ್ಷದಲ್ಲಿ ಶಂಕಿತ ಬಾವಿ ಮುಖ್ಯಮಂತ್ರಿ ಅಂತ ಯಾರ ಹೆಸರನ್ನೂ ಹೇಳಲ್ಲ.
ಸಾ.ಪ್ರ : ಸ್ವಾಮಿ, ದೊಡ್ಡ ನಮಸ್ಕಾರ ನಿಮಗೆ
ಕಾಂ.ಪು : ಕೃಷ್ಣ ಬಂದಿದ್ದಾರೆ. ನಮಗೆ ಸಂಪೂರ್ಣ ಬಹುಮತ ಕೊಡಿ.

★



ಸಾಮಾನ್ಯ ರೈತ : ಕಬ್ಬಿಗೆ ಬೆಲೆಯಿಲ್ಲ ಏನ್ಮಾಡೋದಪ್ಪ?
ಬಿಜೆಪಿ ಪುಢಾರಿ : ರಾಜ್ಯಪಾಲರು ಕಾಂಗ್ರೆಸ್ ಪಕ್ಷಪಾತಿ
ಸಾ.ರೈ : ಒಳ್ಳೆ ಬಿತ್ತನೆ ಬೀಜ ಸಿಗುತ್ತಿಲ್ಲ.
ಬಿ.ಪು : ರಾಜ್ಯಪಾಲರು ಕಾಂಗ್ರೆಸ್ ಏಜೆಂಟ್
ಸಾ.ರೈ : ರಸಗೊಬ್ಬರ ಸರಿಯಾಗಿ ಸಿಗುತ್ತಿಲ್ಲ.
ಬಿ.ಪು : ರಾಜ್ಯಪಾಲರು ಕೇಂದ್ರದ ಕೈಗೊಂಬೆ
ಸಾ.ರೈ : ಮಳೆ ಬಂದು ಬೆಳೆ ಹಾಳಾಗ್ತಿದೆ.
ಬಿ.ಪು : ರಾಜ್ಯಪಾಲರು ಶ್ವೇತಪತ್ರ ಹೊರಡಿಸಬೇಕು
ಸಾ.ರೈ : ಬೆಳೆದ ಕಬ್ಬು ಒಣಗ್ತಾ ಇದೆ. ಅರಿತಾ ಇಲ್ಲ.
ಬಿ.ಪು : ರಾಜ್ಯಪಾಲರು ಮೇ ತಿಂಗಳೊಳಗೆ ಚುನಾವಣೆ ಆಗದ ಹಾಗೆ ಮಾಡ್ತಿದ್ದಾರೆ.
ಸಾ.ರೈ : ಸಾಲಕೊಟ್ಟ ಸಾಹುಕಾರರು ಪ್ರಾಣ ತಿಂತಿದಾರೆ.
ಬಿ.ಪು : ರಾಜ್ಯಪಾಲರಿಗೆ ಬಾವಿ ಮುಖ್ಯಮಂತ್ರಿ ಯಡಿಯೂರಪ್ಪನವರನ್ನು ಕಂಡರೆ ಆಗುವುದಿಲ್ಲ.
ಸಾ.ರೈ: ಬೆಳೆದ ಪದಾರ್ಥಗಳಿಗೆ ಸರಿಯಾದ ಬೆಲೆ ಸಿಗ್ತಿಲ್ಲ.
ಬಿ.ಪು : ರಾಜ್ಯಪಾಲರು ಯಡಿಯೂರಪ್ಪನವರ ಥರ ಮಠಗಳಿಗೆ ದುಡ್ಡು ಕೊಡಬೇಕು.
ಸಾ.ರೈ : ಸ್ವಾಮಿ ದೊಡ್ಡ ನಮಸ್ಕಾರ ನಿಮಗೆ
ಬಿ.ಪು : ನಮಗೆ ಗುಜರಾತ್ ಮಾದರಿ ಬಹುಮತ ಕೊಟ್ಟು ಈ ರಾಜ್ಯಪಾಲರನ್ನು ಓಡಿಸಿ.

★

ಸಾಮಾನ್ಯ ಪ್ರಜೆ : ಕುಡಿಯುವ ನೀರಿನ ವ್ಯವಸ್ಥೆ ಸರಿಯಲ್ಲ
ಜೆಡಿಎಸ್ ಪುಡಾರಿ : ನಮ್ಮ ಕುಮಾರಸ್ವಾಮಿ ನೀರಿನ ಟ್ಯಾಂಕ್ ಮೇಲೆ ವಾಸ್ತವ್ಯ ಮಾಡ್ತಾರೆ.
ಸಾ.ಪ್ರ : ರಸ್ತೆಗಳು ಸರಿಯಿಲ್ಲ
ಜೆ.ಪು : ನಮ್ಮ ದೇವೇಗೌಡರು ತಮಿಳುನಾಡಲ್ಲಿ ಹೋಗಿ ಸಿಕ್ರೆಟ್ ಹೋಮ, ಹವನ ಮಾಡ್ತಾರೆ.
ಸಾ.ಪ್ರ : ವಿದ್ಯುತ್ ಅವ್ಯವಸ್ಥೆ ಆಗಿದ್ಯಲ್ರಿ....
ಜೆ.ಪು : ನಮ್ಮ ರೇವಣ್ಣನೇ ಮುಂದಿನ ಮುಖ್ಯ ಉಪಮಂತ್ರಿ ಅಲ್ಲಲ್ಲ ಉಪ ಮುಖ್ಯಮಂತ್ರಿ.
ಸಾ.ಪ್ರ : ನಿಮ್ಮ ಪಕ್ಷದಲ್ಲಿ ಮಹಿಳೆಯರೇ ಇಲ್ವಲ್ರಿ..
ಜೆ.ಪು : ನಾವು ಯಾರ ಜತೆಗೂ ಹೊಂದಾಣಿಕೆ ಮಾಡ್ಕೊಳ್ಳಲ್ಲ.
ಸಾ.ಪ್ರ : ಸ್ವಾಮಿ ದೊಡ್ಡ ನಮಸ್ಕಾರ ನಿಮಗೆ
ಜೆ.ಪು : ನಮಗೆ 40 ರಿಂದ 50 ಸೀಟ್ ಗೆಲ್ಲಿಸಿ ಸಾಕು ಎಲ್ರನ್ನೂ ಆಟ ಆಡಿಸ್ತೀವಿ.

…ಕೃಷಿ ಬಿಕ್ಕಟ್ಟು ಮತ್ತು ಬ್ಯಾಂಕ್‌ಗಳು

…ಾನೆಗೂ ಕೇಂದ್ರದ ಯುಪಿಎ ಸರ್ಕಾರ …,314 ಕೋಟಿ ರೂ. ಸಾಲ ಮನ್ನಾ ಮಾಡಿದೆ. …ರ್ಕಾರಗಳ ಜಾಗತೀಕರಣ ಪರ ನೀತಿಗಳಿಂದಾಗಿ …ಷಿಯು ತೀವ್ರ ಬಿಕ್ಕಟ್ಟಿಗೆ ಸಿಲುಕಿ ರೈತರು …ತ್ಮಹತ್ಯೆಗೆ ಒಳಗಾಗುತ್ತಿರುವ ಸಂದರ್ಭದಲ್ಲಿ, …ಡಪಕ್ಷಗಳು ರೈತ ಸಂಘಟನೆಗಳು ಮತ್ತು ಜನ …ಾಮಾನ್ಯರ ತೀವ್ರ ಒತ್ತಡದಿಂದಾಗಿ ಸಾಲ ಮನ್ನಾ …ಾಡಲಾಗಿದೆ. ದೇಶದ ಒಟ್ಟು ಆರ್ಥಿಕತೆಯಲ್ಲಿ …,000 ಕೋಟಿ ರೂ. ಎಂಬುದು ದೊಡ್ಡ ಮೊತ್ತ …ಂದು ಎನಿಸಿದರೂ ಒಟ್ಟು ರೈತರ ಸಂಖ್ಯೆ …ಮನಿಸಿದರೆ ಇದು ತೀರಾ ಅತ್ಯಲ್ಪ.

ಉದಾಹರಣೆಗೆ ನಮ್ಮ ದೇಶದಲ್ಲಿ ಒಟ್ಟು …ತರು ಹಾಗೂ ಅವರ ಮೇಲೆ ಅವಲಂಬಿತರು …0 ಕೋಟಿ ಜನ ಎಂದು ಪರಿಗಣಿಸಿದರೆ, …ಬ್ಬೊಬ್ಬರಿಗೆ ಮನ್ನಾ ಆಗಿರುವ ಸಾಲ ಕೇವಲ …000 ರೂ. ಮಾತ್ರ (60,000 ಕೋಟಿ- 60 …ಟಿ) = ರೂ.1000.

ಇದೇ ದೇಶದಲ್ಲಿ ಬ್ಯಾಂಕುಗಳಿಂದ ಪಡೆದ …ಾಲದಲ್ಲಿ ಹೆಚ್ಚು ಸಾಲ ಬಾಕಿ …ರಿಸಿಕೊಂಡಿರುವವರ ಒಟ್ಟು ಖಾತೆಗಳ ಸಂಖ್ಯೆ …3,822 ಕಂಪನಿಗಳು. ಇವರಿಗೆ ನೀಡಿದ …ಾಲದಲ್ಲಿ ವಾಪಸ್ ಬರುವುದಿಲ್ಲ ಎಂದು ಲೆಕ್ಕ …ಾಕಿರುವ ಸಾಲಗಳ ಒಟ್ಟು ಮೊತ್ತ 96,079 …ೋಟಿ ರೂ. ಇದು 31.03.2004 ರ ಹೊತ್ತಿಗೆ …ಾಕಿ ಇರುವ ಸಾಲಗಳ ಮೊತ್ತ. ಈಗ ನಾಲ್ಕು …ರ್ಷಗಳ ನಂತರ ಈ ಮೊತ್ತ ಇನ್ನಷ್ಟು ಜಾಸ್ತಿ …ಗಿದೆ. 31.03.2004ನ್ನು ಆಧಾರವಾಗಿಟ್ಟು …ೊಂಡರೂ ಸರಾಸರಿ ಒಂದು ಖಾತೆಯಲ್ಲಿ 7.38 …ೋಟಿ ರೂ. ಬಾಕಿ ಇದ್ದಂತಾಗುತ್ತದೆ. …್ಯಾಂಕುಗಳಿಂದ ಪಡೆದ ಈ ಸಾಲವನ್ನು …ಧಿಕೃತವಗಿ ಮನ್ನಾ ಮಾಡದಿದ್ದರೂ …ನಧಿಕೃತವಾಗಿ ಮನ್ನಾ ಆದಂತೆಯೇ.

ಒಂದೊಂದು ಖಾತೆಗೆ ಅಂದರೆ 1 ಕೋಟಿ ರೂ.ಗಿಂತಲೂ ಜಾಸ್ತಿ ಸಾಲ ಪಡೆದ ಶ್ರೀಮಂತರಿಗೆ ಸರಾಸರಿ 7 ಕೋಟಿ 38 ಲಕ್ಷ ರೂ. ಸಾಲ ಮನ್ನಾ ಆದರೆ ಬಡ ರೈತರಿಗೆ ಸಾಲ ಮನ್ನಾ ಆಗುತ್ತಿರುವುದು ಸರಾಸರಿ ಕೇವಲ 1000 ರೂ. ಮಾತ್ರ. ಅದರಲ್ಲೂ ಬ್ಯಾಂಕುಗಳಲ್ಲಿ ಸಾಲ ಸಿಗುತ್ತಿರುವುದು ಆಸ್ತಿ ಮತ್ತು ಪ್ರಭಾವ ಉಳ್ಳ ಮಧ್ಯಮ ಮತ್ತು ಶ್ರೀಮಂತ ರೈತರಿಗೆ ಮಾತ್ರ.

ಗ್ರಾಮೀಣ ಬ್ಯಾಂಕು ಶಾಖೆಗಳ ಮುಚ್ಚುವಿಕೆ

ನಿಜವಾಗಿಯೂ ರೈತರು ಬದುಕುಳಿಯಬೇಕೆಂದಾದರೆ, ಸಾಲ ಮನ್ನಾ ಮಾಡುವುದರ ಜೊತೆಯಲ್ಲಿ ಕಡಿಮೆ ದರದಲ್ಲಿ ಹೊಸ ಸಾಲಗಳು ಸಿಗುವಂತಾಗಬೇಕು. ಈಗಾಗಲೇ ಸಾಲ ಪಡೆದ ರೈತರಿಗೆ ಸಾಲ ಮನ್ನಾ ಆಗಿ ಹೊಸ ಸಾಲ ಸಿಗಬಹುದು. ಆದರೆ ಅಸಂಖ್ಯಾತ ರೈತರು ಇನ್ನೂ ಸಾಲ ಪಡೆಯಲು ಬ್ಯಾಂಕಿನ ಒಳಗೆ ಹೋಗಲು ಸಾಧ್ಯವಾಗಿಲ್ಲ. ಕೃಷಿ ಕೂಲಿಕಾರರಿಗಂತೂ, ಅವರಲ್ಲಿ ಯಾವುದೇ ಆಸ್ತಿ ಇಲ್ಲದಿರುವು ದರಿಂದ ಯಾವುದೇ ಸಾಲ ಲಭ್ಯವಾಗುವುದಿಲ್ಲ. ಅವರಿಗೂ ಜಾನುವಾರು, ನೇಗಿಲು ಮತ್ತಿತರ ಬೇಸಾಯಕ್ಕೆ ಸಂಬಂಧಿಸಿದ ಉಪಕರಣಗಳನ್ನು ಕೊಳ್ಳಲು ಸಾಲ ಸಿಗಬೇಕು. ಉದ್ಯೋಗ ಖಾತರಿ ಯೋಜನೆ ಪ್ರಕಾರ ಬ್ಯಾಂಕ್ ಖಾತೆ ಕಡ್ಡಾಯ ವಾದುದರಿಂದ ಆದಾಯವು ಬ್ಯಾಂಕ್‌ಗಳಿಗೆ ಸಲ್ಲಿಕೆಯಾಗುತ್ತದೆ. ಮಾತ್ರವಲ್ಲ ಆ ಸಾಲದ ಬಡ್ಡಿದರ ಕಡಿಮೆಯಾಗಬೇಕು. ರೈತರ ಉತ್ಪನ್ನಗಳಿಗೆ ಸರಿಯಾದ ಬೆಲೆ ಸಿಗದೆ ಇರುವುದರಿಂದ ಕಡಿಮೆ ಬಡ್ಡಿಯಲ್ಲಿ ಸಾಲ ಸಿಕ್ಕಿದರೆ ಮಾತ್ರ ತೀರಿಸಲು ಸಾಧ್ಯವಾಗುತ್ತದೆ. ಆದ್ದರಿಂದ ಎಂ.ಎಸ್. ಸ್ವಾಮಿನಾಥನ್ ಆಯೋಗ ಹೇಳಿದಂತೆ ರೈತನಿಗೆ ಸಿಗುವ ಸಾಲ ಬಡ್ಡಿದರವನ್ನು ಶೇ.4ಕ್ಕೆ ಇಳಿಸಬೇಕು.

ಇದೆಲ್ಲ ಆಗಬೇಕಾದಲ್ಲಿ, ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚು ಹೆಚ್ಚಾಗಿ ಶಾಖೆಗಳನ್ನು ತೆರೆಯಬೇಕು. ಇತ್ತೀಚೆಗೆ ಕೇಂದ್ರ ಸರ್ಕಾರವು ಮಂಡಿಸಿದ ಬಜೆಟ್‌ನಲ್ಲಿ ಹಣಕಾಸು ಸಚಿವ ಚಿದಂಬರಂರವರು ಪ್ರತಿಗ್ರಾಮ ಪಂಚಾಯತ್ ಪ್ರದೇಶದಲ್ಲಿ ಪ್ರತಿವರ್ಷ ಕನಿಷ್ಠ 250 ಕುಟುಂಬಗಳನ್ನು ಬ್ಯಾಂಕಿಂಗ್ ಚಟುವಟಿಕೆಗಳಿಗೆ ಒಳಪಡಿಸಬೇಕೆಂದು ವಾಣಿಜ್ಯ ಬ್ಯಾಂಕ್‌ಗಳಿಗೆ ಆದೇಶ ನೀಡಿರುತ್ತಾರೆ. ಸ್ವಸಹಾಯ ಸಂಘಗಳಿಗೂ ಸಾಲ ನೀಡಬೇಕೆಂದೂ ಸೂಚಿಸಿದ್ದಾರೆ.

ಆದರೆ ಇದಕ್ಕೆ ವ್ಯತಿರಿಕ್ತವಾಗಿ, ಗ್ರಾಮೀಣ ಪ್ರದೇಶದ ಬ್ಯಾಂಕುಗಳ ಶಾಖೆಗಳನ್ನು ಮುಚ್ಚಲಾಗುತ್ತಿದೆ. 28.03.2008ರ 'ಹಿಂದೂ' ಪತ್ರಿಕೆಯಲ್ಲಿ ಪಿ.ಸಾಯಿನಾಥ್‌ರವರು ರಿಸರ್ವ್ ಬ್ಯಾಂಕಿನ ಅಂಕಿ ಅಂಶಗಳನ್ನು ಉಲ್ಲೇಖಿಸುತ್ತಾ 1993 ರಿಂದ 2006-07 ರ 15 ವರ್ಷಗಳ ಅವಧಿಯಲ್ಲಿ 4750 ಗ್ರಾಮೀಣ ಪ್ರದೇಶದ ಶಾಖೆಗಳನ್ನು ಮುಚ್ಚಲಾಗಿದೆ ಎಂದಿದ್ದಾರೆ. ಅಂದರೆ ಈಗಾಗಲೇ ಬ್ಯಾಂಕುಗಳಿಗೆ ಹೋಗಿ ತನ್ನ ಹಣ ಜಮಾ ಮಾಡಲು ಅಥವಾ ಸಾಲ ಪಡೆಯಲು ಹಲವಾರು ಕಿಲೋ ಮೀಟರು ದೂರ ನಡೆದುಹೋಗಬೇಕಾದ ಸಂದರ್ಭದಲ್ಲಿ ಇನ್ನಷ್ಟು ಶಾಖೆಗಳನ್ನು ಮುಚ್ಚುತ್ತಿದ್ದರೆ, ಬ್ಯಾಂಕ್ ಮುಚ್ಚಿದ ಪ್ರದೇಶಗಳಲ್ಲಿನ ಲೇವಾದೇವಿಗಾರರಿಗೆ ಲಾಭವಾಗುತ್ತದೆ. 15 ವರ್ಷಗಳಲ್ಲಿ 4750 ಶಾಖೆಗಳು ಮುಚ್ಚಿದ್ದಾವೆ ಎಂದರೆ ಪ್ರತಿತಿಂಗಳು 26 ಶಾಖೆಗಳು ಮುಚ್ಚಿದಂತೆ ಆಗಿದೆ.

ಸನ್ಮಾನ್ಯ ಚಿದಂಬರಂರವರು ಕೃಷಿ ಸಾಲ ದ್ವಿಗುಣಗೊಳಿಸಲಾಗಿದೆ ಎಂದು ತನ್ನ ಭುಜವನ್ನು ತಾನೇ ತಟ್ಟಿಕೊಳ್ಳುತ್ತಿದ್ದರೆ, ಬ್ಯಾಂಕುಗಳೇ ಬಿಡುಗಡೆ ಮಾಡಿದ ಅಂಕಿ ಅಂಶಗಳು ಇನ್ನೊಂದು ಮುಖವನ್ನು ತೋರಿಸುತ್ತವೆ. 2007ರ ಮಾರ್ಚ್ 31ಕ್ಕೆ ಗ್ರಾಮೀಣ ಬ್ಯಾಂಕುಗಳೂ ಸೇರಿದಂತೆ ವಾಣಿಜ್ಯ ಬ್ಯಾಂಕುಗಳು ನೀಡಿದ ಒಟ್ಟು ಸಾಲದಲ್ಲಿ ಗ್ರಾಮೀಣ ಪ್ರದೇಶದಲ್ಲಿ ನೀಡಿದ ಸಾಲ ಕೇವಲ ಶೇ. 7.93 ಮಾತ್ರ. ಇದು ಶೇಕಡವಾರು ಲೆಕ್ಕದಲ್ಲಿ 2006ರಲ್ಲಿ ನೀಡಿದ ಸಾಲಕ್ಕಿಂತ ಕಡಿಮೆ. 2006ರಲ್ಲಿ ಶೇಕಡಾ 8.39 ರಷ್ಟು ಗ್ರಾಮೀಣ ಸಾಲವನ್ನು ನೀಡಲಾಗಿದ್ದರೆ, 2001ರಲ್ಲಿ ಈ ಸಾಲದ ಪ್ರಮಾಣದ ಶೇ.10 ರಷ್ಟಾಗಿತ್ತು. ಅಂದರೆ ಒಟ್ಟು ಸಾಲ ನೀಡಿಕೆಯಲ್ಲಿ ಶೇಕಡಾವಾರು ಪ್ರಮಾಣ ಕಡಿಮೆಯಾಗುತ್ತಾ ಬಂದಿರುವುದು ಕಾಣುತ್ತದೆ.

2001ರ ಜನಗಣತಿಯ ಪ್ರಕಾರ ಶೇ.72ರಷ್ಟು ಜನರು ಗ್ರಾಮೀಣ ಪ್ರದೇಶದಲ್ಲಿ ವಾಸಿಸುತ್ತಿದ್ದರೂ, ಬ್ಯಾಂಕುಗಳು ನೀಡುತ್ತಿರುವ ಒಟ್ಟು ಸಾಲದಲ್ಲಿ ಶೇ.82.32 ರಷ್ಟು ಸಾಲ ನಗರ ಮತ್ತು ಮೆಟ್ರೋ ನಗರ ಪ್ರದೇಶಗಳಿಗೆ ನೀಡಲಾಗುತ್ತಿದೆ. ಹೀಗಾದಲ್ಲಿ ಕೃಷಿ ಬಿಕ್ಕಟ್ಟಿನಿಂದ ಹೊರಗೆ ಬರುವುದಾದರೆ ಹೇಗೆ? ಈ ತಾರತಮ್ಯವನ್ನು ಹೋಗಲಾಡಿಸಲು ಸಂಘಟಿತ ಹೋರಾಟವೇ ದಾರಿ.

ಬಾಲಕೃಷ್ಣ ಶೆಟ್ಟಿ

ತ್ರಿಪುರ

ಓ ತ್ರಿಪುರವೇ ನಿನಗೆ ಕರ ಮುಗಿವೆ ನಾನು
ಸತ್ಯವನು ಅರಿತವರ ಹೆತ್ತವಳು ನೀನು
ಎಲ್ಲಾ ಮಕ್ಕಳ ಹಿತವು ಪ್ರಾಮುಖ್ಯ ನಿನಗೆ
ನಿನ್ನನ್ನು ನೋಡಿದರೆ ಹೊಟ್ಟೆ ಉರಿ ನಮಗೆ

ಜಾನುವಾರು ಪಕ್ಷವೂ....

ಭಾರತೀಯ ಜಾನುವಾರು ಪಕ್ಷ ನೋಡಿ
ಕಟ್ಟುವೆವು ನಾವಿಂದು ಕೆಲವುಜನ ಕೂಡಿ
ನೀಡಿದರೆ ನೀವೆಲ್ಲ ವೋಟೆಂಬ ಕಪ್ಪ
ಗ್ಯಾರಂಟಿ ಕೆಲವರಿಗೆ ಹೊಸ ಬೆಣ್ಣತುಪ್ಪ

- ವಿಡಂಬಾರಿ

ಹಾವೇರಿ ಸಕ್ಕರೆ ಕಾರ್ಖಾನೆಯಲ್ಲಿ 20 ಲಕ್ಷ ರೂ.ಗಳ ಫೋರ್ಜರಿ

'ಉಂಡೂ ಹೋದ, ಕೊಂಡೂ ಹೋದ ಬಿಜೆಪಿ ಭೂಪ'

ಲಂಚದ ದುಡ್ಡನ್ನು ಬಾಚಿಕೊಂಡ ಬಿಜೆಪಿ ನಾಯಕರನ್ನು ನೋಡಿದ್ದೇವೆ. ಶಾಸನಸಭೆಗಳಲ್ಲಿ ಪ್ರಶ್ನೆ ಕೇಳಲು ಲಂಚ ಪಡೆದ ಬಿಜೆಪಿ ಸಂಸದರು ತಮ್ಮ ಚುನಾಯಿತ ಸ್ಥಾನಗಳನ್ನು ಕಳೆದುಕೊಂಡು ಮನೆಗೆ ಹೋಗುವುದನ್ನು ನೋಡಿದ್ದೇವೆ. ಪರಸ್ತ್ರೀಯನ್ನು ತನ್ನ ಸ್ವಂತ ಹೆಂಡತಿ ಎಂದು ಸುಳ್ಳು ಹೇಳಿ ಪರದೇಶಕ್ಕೆ ಕರೆದೊಯ್ದು ಸಿಕ್ಕು ಬಿದ್ದ ಬಿಜೆಪಿ ಮುಖಂಡರನ್ನು ನೋಡಿದ್ದೇವೆ. ಇಲ್ಲೊಬ್ಬ ಬಿಜೆಪಿ ಭೂಪ ಸಕ್ಕರೆ ಕಾರ್ಖಾನೆಯ 20 ಲಕ್ಷ ರೂ.ಗಳನ್ನು ಎತ್ತಿಹಾಕಿ 'ಚಡ್ಡಿ'ಯಲ್ಲಿ ಓಡಿ ಹೋಗುವುದನ್ನು ನೋಡುವ(ದು) ಭಾಗ್ಯ ನಮಗೆ ದೊರೆತಿದೆ. ಈತ ಮತ್ತಾರೂ ಅಲ್ಲ. ಬಿಜೆಪಿಯ ಮಾಜಿ ಮಂತ್ರಿ ಸಿ.ಎಂ.ಉದಾಸಿ ಅವರ ಬಲಗೈ ಬಂಟ ಸದಾಶಿವ ಚೆನ್ನಬಸಪ್ಪ ಬೆಲ್ಲದ.

ಅವಿಭಜಿತ ಧಾರವಾಡ ಜಿಲ್ಲೆಯ ಏಕೈಕ ಸಕ್ಕರೆ ಕಾರ್ಖಾನೆಯಾಗಿರುವ ಸಂಗೂರಿನ ಕರ್ನಾಟಕ ಸಹಕಾರಿ ಸಕ್ಕರೆ ಕಾರ್ಖಾನೆಯಲ್ಲಿ ಕೋಟ್ಯಾಂತರ ರೂಪಾಯಿಗಳನ್ನು ಕೊಳ್ಳೆ ಹೊಡೆದು, ಕಾರ್ಖಾನೆಯನ್ನು ದಿವಾಳಿಯೆಬ್ಬಿಸಿ ಅತ್ತ ಕಬ್ಬು ಬೆಳೆಗಾರರನ್ನು ಇತ್ತ ಕಾರ್ಮಿಕ ಕುಟುಂಬಗಳನ್ನು ಬೀದಿಗೆ ತಳ್ಳಿದ ಕೀರ್ತಿ ಇವರಿಬ್ಬರಿಗೆ ಹೇಗೆ ಸಲ್ಲುತ್ತದೆ ಎಂಬುದನ್ನು ಈ ಹಿಂದೆ ಪತ್ರಿಕೆಯ ಓದುಗರ ಗಮನಕ್ಕೆ ತರಲಾಗಿದೆ. ಕಾರ್ಖಾನೆಯ ಅಧೋಗತಿಗೆ ಕಾರಣವಾದ ಆಡಳಿತ ಮಂಡಳಿಯನ್ನು ವಜಾ ಮಾಡಬೇಕು, ಕಾರ್ಮಿಕರಿಗೆ 20 ತಿಂಗಳುಗಳಿಂದ ಬಾಕಿ ಇದ್ದ ವೇತನವನ್ನು ಸಂದಾಯ ಮಾಡಿ ಸರ್ಕಾರವೇ ಕಾರ್ಖಾನೆಯನ್ನು ನಡೆಸಬೇಕೆಂದು ಆಗ್ರಹಿಸಿ ಕಾರ್ಖಾನೆಯ ಕಾರ್ಮಿಕರು ಮತ್ತು ಅವರ ಕುಟುಂಬ ಸದಸ್ಯರು ಎರಡು ತಿಂಗಳುಗಳಿಗೂ ಹೆಚ್ಚು ಕಾಲ ನಡೆಸಿದ ಹೋರಾಟದ ಫಲವಾಗಿ ಕಾರ್ಖಾನೆಯ ಪುನರಾರಂಭಕ್ಕೆ ರಾಜ್ಯಪಾಲರು ಆಸಕ್ತಿ ತೋರಿದ್ದರು. ಸದಾಶಿವ ಬೆಲ್ಲದ ಅಧ್ಯಕ್ಷರಾಗಿದ್ದ ಆಡಳಿತ ಮಂಡಳಿಯನ್ನು ಸರ್ಕಾರ 2007 ನವೆಂಬರ್ 22 ರಂದು ವಜಾ ಮಾಡಿ ಹಾವೇರಿ ಜಿಲ್ಲಾಧಿಕಾರಿ ಪಿ.ಎಸ್. ವಸ್ತ್ರದ ಅವರನ್ನು ಆಡಳಿತಾಧಿಕಾರಿಯಾಗಿ ನೇಮಿಸಿತ್ತಲ್ಲದೆ ಸಹಕಾರಿ ಸಂಘಗಳ ಉಪನಿಬಂಧಕ ಎಚ್.ವೈ. ಗದ್ದನಕೇರಿ ಅವರನ್ನು ವ್ಯವಸ್ಥಾಪಕ ನಿರ್ದೇಶಕರಾಗಿ ನೇಮಿಸಿತ್ತು.




ಅಧ್ಯಕ್ಷ ಸದಾಶಿವ ಬೆಲ್ಲದ ವಜಾಗೊಂಡ ನಂತರ ಆತನ ಕ್ರಿಮಿನಲ್ ಮೆದುಳು ಇನ್ನೂ ಹೆಚ್ಚು ಕ್ರಿಯಾಶೀಲ(!) ವಾಯಿತು. ಕರ್ನಾಟಕ ಸೇಲ್ಸ್ ಟ್ಯಾಕ್ಸ್ ಕಾಯ್ದೆಯಡಿಯಲ್ಲಿ ಕಾರ್ಖಾನೆಗೆ 45,76,981 ರೂಪಾಯಿ ಸಂದಾಯವಾಗಿತ್ತು. ಈ ಮೊತ್ತದಲ್ಲಿ 20 ಲಕ್ಷ ರೂ.ಗಳನ್ನು ಲಪಟಾಯಿಸಿ ಮಾಜಿ ಅಧ್ಯಕ್ಷ ಬೆಲ್ಲದ ಫರಾರಿಯಾದ ಪ್ರಕರಣ ತಡವಾಗಿ ಬೆಳಕಿಗೆ ಬಂದಿದೆ. 2008 ಜನವರಿ 12 ರಂದು ಕಾರ್ಖಾನೆಯ ಆಡಳಿತ ಮಂಡಳಿಯ ಸಭೆ ನಡೆಯಿತೆಂದು ಸುಳ್ಳು ದಾಖಲೆಗಳನ್ನು ಸೃಷ್ಟಿಸಿ, ಠರಾವು ಬರೆದು, ಬ್ಯಾಂಕಿನ ಅಧಿಕಾರಿಗಳಿಗೆ ತಪ್ಪು ಗ್ರಹಿಕೆ ಬರುವಂತೆ ಮಾಹಿತಿ ನೀಡಿ, ಬೇರೆಯವರ ಭಾವಚಿತ್ರ ಬಳಸಿ, ಬ್ಯಾಂಕೊಂದರಲ್ಲಿ ಖಾತೆಯನ್ನು ತೆರೆದಿದ್ದಲ್ಲದೇ ಆ ಖಾತೆಗೆ ವಾಣಿಜ್ಯ ತೆರಿಗೆ ಇಲಾಖೆಯಿಂದ ಬಂದ ಹಣ ಜಮಾ ಆಗುವಂತೆ ಮಾಡಿ ಕಾರ್ಖಾನೆಯ ವ್ಯವಸ್ಥಾಪಕ ನಿರ್ದೇಶಕರ ಸಹಿಯನ್ನು ಫೋರ್ಜರಿ ಮಾಡಿ ಫೆಬ್ರವರಿ 15 ರಂದು ಬ್ಯಾಂಕಿನಿಂದ 20 ಲಕ್ಷ ರೂ.ಗಳನ್ನು ಪಡೆಯಲಾಗಿದೆ. ತನ್ನ ಸಹಿಯನ್ನು ಫೋರ್ಜರಿ ಮಾಡಿ ಹಣವನ್ನು ಲಪಟಾಯಿಸಿದ್ದು ಗಮನಕ್ಕೆ ಬಂದಾಗ, ವ್ಯವಸ್ಥಾಪಕ ನಿರ್ದೇಶಕರು ಹಾವೇರಿ ಗ್ರಾಮೀಣ ಪೋಲೀಸ್ ಠಾಣೆಯಲ್ಲಿ ದೂರು ನೀಡಿದ್ದಾರೆ. ದೂರು ದಾಖಲಿಸಿಕೊಂಡ ಪೋಲೀಸರು. ಆರೋಪಿಯ ಹುಡುಕಾಟ ನಡೆಸಿದ್ದಾರೆ.

ಹಿರಿಯ ಪೋಲೀಸ್ ಅಧಿಕಾರಿಯೊಬ್ಬರು ಅಕ್ಕಿ ಆಲೂರಿನಲ್ಲಿರುವ ಬೆಲ್ಲದ ಅವರ ಮನೆಗೆ ತೆರಳಿದಾಗ, ಪೋಲೀಸ್ ಬಂಧನದಿಂದ ತಪ್ಪಿಸಿಕೊಳ್ಳಲು ಸದಾಶಿವ ಬೆಲ್ಲದ 'ಅಂಡರ್‌ವೇರ್' ನಲ್ಲಿಯೇ ಓಡಿ ಹೋದರೆಂದು ಹೇಳಲಾಗುತ್ತಿದೆ. ಆರೋಪಿ ಬೆಂಗಳೂರಿನ ಲಾಡ್ಜ್‌ವೊಂದರಲ್ಲಿ ಇದ್ದಾರೆಂಬ ಸುದ್ದಿ ತಿಳಿದು ಬೆಂಗಳೂರಿಗೆ ಹೋದ ಪೋಲೀಸರು 3 ದಿನಗಳವರೆಗೆ ಕಾದು, ಹೋದ ದಾರಿಗೆ ಸುಂಕವಿಲ್ಲ ಎಂಬಂತೆ ಬರಿಗೈಯಲ್ಲಿ ಮರಳಿದ್ದಾರೆ ಎಂದು ತಿಳಿದು ಬಂದಿದೆ. ಮುಂಬರುವ ವಿಧಾನಸಭಾ ಚುನಾವಣೆ ಯಲ್ಲಿ ಬಿಜೆಪಿಯ ಸಿ.ಎಂ.ಸೋತರೆ ಮಾತ್ರ ಬೆಲ್ಲದರ ಭೇಟಿಯಾಗಬಹುದು ಎಂದು ಹಾವೇರಿ, ಹಾನಗಲ್ಲ ಜನ ಮಾತನಾಡಿಕೊಳ್ಳುತ್ತಿದ್ದಾರೆ.

■ ನಾರಾಯಣ ಕಾಳೆ

'ಕೂಲಿ ಎಕ್ಸ್‌ಪ್ರೆಸ್' ಆರಂಭಿಸಲು ಒತ್ತಾಯಿಸಿ ಪ್ರದರ್ಶನ



ಉತ್ತರ ಕರ್ನಾಟಕದ ಜಿಲ್ಲೆಗಳಿಂದ ದುಡಿಯಲು ಬರುವ ಕೂಲಿಕಾರರ ಪ್ರಯಾಣದ ಅನುಕೂಲತೆಗಾಗಿ ಬೆಂಗಳೂರು - ಗುಲ್ಬರ್ಗಾ ನಡುವೆ ಓಡಾಡುವ 'ಕೂಲಿ ಎಕ್ಸ್‌ಪ್ರೆಸ್' ರೈಲೊಂದನ್ನು ಆರಂಭಿಸಬೇಕೆಂದು ಒತ್ತಾಯಿಸಿ ಬೆಂಗಳೂರು ರೈಲ್ವೆ ವಿಭಾಗೀಯ ಕಚೇರಿಯ ಎದುರು ಪ್ರತಿಭಟನಾ ಪ್ರದರ್ಶನ ನಡೆಸಿ ಕೇಂದ್ರ ರೈಲ್ವೇ ಮಂತ್ರಿ ಲಾಲೂ ಪ್ರಸಾದ್ ಯಾದವ್ ಅವರಿಗೆ ಮನವಿಯೊಂದನ್ನು ಸಲ್ಲಿಸಲಾಯಿತು. ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘದ ಕರೆಯ ಮೇರೆಗೆ ಬೆಂಗಳೂರು ಅಲ್ಲದೆ ಗುಲ್ಬರ್ಗಾ, ಯಾದಗಿರಿ, ಚಿತ್ತಾಪುರ, ರಾಯಚೂರು, ಕೊಪ್ಪಳ, ಹೊಸಪೇಟೆ, ಬಳ್ಳಾರಿ, ಮಂಡ್ಯ ಮೊದಲಾದ ರೈಲು ನಿಲ್ದಾಣಗಳಲ್ಲಿ ಪ್ರದರ್ಶನ ನಡೆಸಿ ಮನವಿಗಳನ್ನು ಸಲ್ಲಿಸಲಾಗಿದೆ.

ಬೆಂಗಳೂರಿನಲ್ಲಿ ನಡೆದ ಪ್ರತಿಭಟನೆಯಲ್ಲಿ ಭಾಗವಹಿಸಿ ಮಾತನಾಡಿದ ಕೂಲಿಕಾರರ ಸಂಘದ ರಾಜ್ಯ ಅಧ್ಯಕ್ಷ ನಿತ್ಯಾನಂದಸ್ವಾಮಿ ಅವರು 'ಎಕ್ಸ್‌ಪ್ರೆಸ್ ರೈಲುಗಳಲ್ಲಿ ಸಾಮಾನ್ಯ ಬೋಗಿಗಳ ಸಂಖ್ಯೆ ಬಹಳ ಕಡಿಮೆ ಇರುವುದರಿಂದ ವಿಪರೀತ ನೂಕುನುಗ್ಗಲು ಉಂಟಾಗುತ್ತಿದ್ದು, ಅವುಗಳಲ್ಲಿ ಪ್ರಯಾಣಿಸುವ ಕೂಲಿಕಾರರು, ವಿಶೇಷವಾಗಿ ಮಹಿಳೆಯರು, ಮಕ್ಕಳು ಚಿತ್ರಹಿಂಸೆ ಅನುಭವಿಸುತ್ತಿರುತ್ತಾರೆ. ಹೊಟ್ಟೆಪಾಡಿಗಾಗಿ ಬೆಂಗಳೂರಿಗೆ ಬರುವ ಇಂತಹವರ ಪ್ರಯಾಣದ ಅನುಕೂಲತೆಗಾಗಿ ಒಂದು ವಿಶೇಷ ರೈಲೊಂದನ್ನು ಆರಂಭಿಸಬೇಕೆಂದು ಒತ್ತಾಯಿಸಲಾಗುತ್ತಿದ್ದು ರೈಲ್ವೆ ಇಲಾಖೆ ನಮ್ಮ ಬೇಡಿಕೆಯನ್ನು ಕಡೆಗಣಿಸುತ್ತಾ ಬಂದಿದೆ ಎಂದು ಆರೋಪಿಸಿದರು. ರೈಲ್ವೆ ಮಂತ್ರಿಗಳು ಕೂಲಿಕಾರರ ಬೇಡಿಕೆಯನ್ನು ಸಹಾನುಭೂತಿಯಿಂದ ಪರಿಗಣಿಸದಿದ್ದರೆ ಮುಂದಿನ ದಿನಗಳಲ್ಲಿ ರೈಲು ತಡೆಯಂತಹ ತೀವ್ರ ಚಳುವಳಿ ನಡೆಸಬೇಕಾಗುವುದು ಎಂದು ಎಚ್ಚರಿಸಿದರು.

ಮನವಿ ಪತ್ರವನ್ನು ಸ್ವೀಕರಿಸಿದ ಬೆಂಗಳೂರು ರೈಲ್ವೆ ವಿಭಾಗೀಯ ಅಧಿಕಾರಿಯವರು ತಕ್ಷಣದಲ್ಲೇ ಕೇಂದ್ರದ ರೈಲ್ವೆ ಬೋರ್ಡ್‌ಗೆ ಮತ್ತು ರೈಲ್ವೆ ಸಚಿವರಿಗೆ ನಿಮ್ಮ ಮನವಿ ಪತ್ರ ಸಲ್ಲಿಸಿ, ಬೇಡಿಕೆಗಳನ್ನು ಈಡೇರಿಸಲು ಒತ್ತಾಯಿಸುತ್ತೇನೆ ಎಂದು ಪ್ರತಿಭಟನಾಕಾರರಿಗೆ ಭರವಸೆ ನೀಡಿದರು.

ಪ್ರತಿಭಟನೆಯ ನೇತೃತ್ವವನ್ನು ಸಂಘದ ಪ್ರಧಾನ ಕಾರ್ಯದರ್ಶಿ ಚಂದ್ರಪ್ಪ ಹೊಸ್ಕೇರಾ, ಮಾದೇ... ವಹಿಸಿದ್ದರು. ಸಿಐಟಿಯು ಹಮಾಲಿ ಕಾರ್ಮಿಕ ಸಂಘದ ಕಾರ್ಯದರ್ಶಿ ಕೆ.ಮಹಾಂತೇಶ, ಡಿವೈಎಫ್‌ಐ ರಾಜ್ಯ ಕಾರ್ಯದರ್ಶಿ ಭರತ್‌ರಾಜ್, ಕಟ್ಟಡ ಕಾರ್ಮಿಕರ ಸಂಘದ ಜಿಲ್ಲಾ ಸಂಚಾಲಕರಾದ ಶಂಕರ್‌ರವರು ಹೋರಾಟಕ್ಕೆ ಬೆಂಬಲ ಸೂಚಿಸಿ ಮಾತನಾಡಿದರು.




ಮಳೆ ನಷ್ಟಕ್ಕೆ ಪರಿಹಾರ, ಅರ್ಹ ಫಲಾನುಭವಿಗಳಿಗೆ ಪಡಿತರಚೀಟಿ, ಉದ್ಯೋಗ ಖಾತ್ರಿ ಯೋಜನೆಯಲ್ಲಿ ದುಡಿದವರಿಗೆ ಶೀಘ್ರ ಕೂಲಿ ವಿತರಣೆಗಾಗಿ ಒತ್ತಾಯಿಸಿ ಸಿಪಿಐ(ಎಂ) ರಾಯಚೂರು ಸ್ಥಳೀಯ ಸಮಿತಿ ನೇತೃತ್ವದಲ್ಲಿ ನಡೆದ ಪ್ರತಿಭಟನೆ



ಕಳಪೆ ಗುಣಮಟ್ಟದ ಆಹಾರ, ವಿದ್ಯಾರ್ಥಿಗಳ ಮೇಲಿನ ದೌರ್ಜನ್ಯ ವಿರೋಧಿಸಿ ದಾವಣಗೆರೆಯ ಸಮಾಜಕಲ್ಯಾಣ ಇಲಾಖೆ ಹಾಸ್ಟೆಲ್ ವಿದ್ಯಾರ್ಥಿಗಳ ಪ್ರತಿಭಟನೆ - ಎಸ್‌ಎಫ್‌ಐ ನೇತೃತ್ವದಲ್ಲಿ



ಡಿ.ಎಡ್. ವಿದ್ಯಾರ್ಥಿಗಳಿಗೆ ಮೌಲ್ಯಮಾಪನದಲ್ಲಿ ಆಗಿರುವ ಅನ್ಯಾಯವನ್ನು ಸರಿಪಡಿಸಲು ಒತ್ತಾಯಿಸಿ ಇತ್ತೀಚೆಗೆ ದಾವಣಗೆರೆಯಲ್ಲಿ ಎಸ್‌ಎಫ್‌ಐ ನೇತೃತ್ವದಲ್ಲಿ ನಡೆದ ಬೃಹತ್ ಪ್ರತಿಭಟನೆಯ ಚಿತ್ರ



ರಾಯಚೂರು ಜಿಲ್ಲೆಯ ದೇವದುರ್ಗದಲ್ಲಿ ನಡೆದ ಅಂಗನವಾಡಿ ನೌಕರರ ಬೃಹತ್ ಪ್ರತಿಭಟನೆ - ನೇಮಕಾತಿ ರದ್ದತಿ ವಿರುದ್ಧ

ಬೆಲೆ ಏರಿಕೆ ವಿರುದ್ಧ ಕಾರ್ಮಿಕರಿಗೆ ಕನಿಷ್ಟ ಕೂಲಿ ಮತ್ತು ಕೆಲಸದ ಭದ್ರತೆಗಾಗಿ ಒತ್ತಾಯಿಸಿ ಸಿಪಿಐ(ಎಂ) ಕುಂದಾಪುರ ತಾಲ್ಲೂಕು ಸಮಿತಿ ನೇತೃತ್ವದಲ್ಲಿ ನಡೆದ ಪ್ರಚಾರಾಂದೋಲನದ ಚಿತ್ರ



ಭಾರತದ ಭವಿಷ್ಯ ಬದಲಿಸಬಲ್ಲ ಮಹಾಮಂಥನ ಈ ಮಹಾಧಿವೇಶನ

ರಾಷ್ಟ್ರದ ಸಂಕೀರ್ಣ ರಾಜಕೀಯ ಸನ್ನಿವೇಶದಲ್ಲಿ ಒಂದು ಕಡೆ ಆಳುವ ಕೂಟವು ಅಧಿಕಾರದಲ್ಲಿ ಉಳಿಯಲು ಬೇಕಾದ ಬೆಂಬಲ ನೀಡುತ್ತಲೇ, ಮತ್ತೊಂದು ಕಡೆ ಜನತೆ ನೀಡಿದ ಭರವಸೆಯಂತೆ ಜನಪರ ಕಾರ್ಯಕ್ರಮ ಜಾರಿ ಮಾಡಿ ಎಂದು ಕಿವಿಹಿಂಡಿ ಒಂದು ರಚನಾತ್ಮಕ ವಿರೋಧ ಪಕ್ಷವಾಗಿ ಕೆಲಸ ಮಾಡಬೇಕಾಗಿರುವ ಪರಿಸ್ಥಿತಿ ಸಿಪಿಐ(ಎಂ)ನದು ಮತ್ತು ಎಡಪಕ್ಷಗಳದ್ದು. 2004ರ ಚುನಾವಣೆಯ ಫಲಿತಾಂಶಗಳ ಮೂಲಕ ಟಿ.ವಿ. ಪತ್ರಿಕೆಗಳು, ಸಮೀಕ್ಷೆ 'ಜನಾಭಿಪ್ರಾಯ' ಸಂಗ್ರಹಗಳನ್ನು ತಲೆಕೆಳಗು ಮಾಡಿ ದೇಶದ ಜನತೆ ಕೊಟ್ಟ ತೀರ್ಪು ಒಂದು ಐತಿಹಾಸಿಕ ಘಟನೆ. ಆ ಮೂಲಕ ಜನತೆ ತಮ್ಮ ಬದುಕಿನ ಸಂಕಷ್ಟಗಳನ್ನು ಹೆಚ್ಚಿಸಿದ ಎನ್‌ಡಿಎ ಸರ್ಕಾರದ ಆರ್ಥಿಕ ನೀತಿಗಳನ್ನು ಉದಾರೀಕರಣ, ಖಾಸಗೀಕರಣ, ಜಾಗತೀಕರಣ ನೀತಿಗಳನ್ನು ಸ್ಪಷ್ಟವಾಗಿ ತಿರಸ್ಕರಿಸಿದ್ದರು.

ಒಂದು ಹೊಸ ರಾಜಕೀಯ ಸನ್ನಿವೇಶದಲ್ಲಿ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರಕ್ಕೆ ಎಡಪಕ್ಷಗಳು ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರಕ್ಕೆ ಎಡಪಕ್ಷಗಳು ಬೆಂಬಲ ನೀಡಬೇಕಾಗಿ ಬಂದ ಸಂದರ್ಭದಲ್ಲಿ ರೂಪುಗೊಂಡಿದ್ದೇ ರಾಷ್ಟ್ರೀಯ ಸಮಾನ ಕನಿಷ್ಠ ಕಾರ್ಯಕ್ರಮ. ಅದರಲ್ಲಿ ಹಲವು ಜನಪರ ಕಾರ್ಯಕ್ರಮದ ಭರವಸೆಗಳು. ಲಾಭದಾಯಕ ಸಾರ್ವಜನಿಕ ಉದ್ದಿಮೆಗಳನ್ನು ಖಾಸಗಿಕರಿಸುವುದಿಲ್ಲ, ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಜಾರಿಗಳು, ಆದಿವಾಸಿಗಳ ಮತ್ತಿತರರಿಗೆ ಅರಣ್ಯ ಭೂಮಿ ಹಕ್ಕು ನೀಡುವ ಕಾಯ್ದೆ, ಮಹಿಳಾ ಮೀಸಲಾತಿ, ಪಡಿತರ ವ್ಯವಸ್ಥೆ ಬಲಗೊಳಿಸಲು ಕ್ರಮ, ಶಿಕ್ಷಣಕ್ಕೆ ಜಿಡಿಪಿಯ ಶೇ.6 ರಷ್ಟು ಹಣ, ಸ್ವತಂತ್ರ ವಿದೇಶಾಂಗ ನೀತಿ... ಇನ್ನು ಏನೇನೋ. ಆದರೆ ಸರ್ಕಾರ ಹೆಜ್ಜೆ ಇಡಲು ಪ್ರಯತ್ನಿಸಿದ್ದೆಲ್ಲ ಅದೇ ಎನ್‌ಡಿಎ ಸರ್ಕಾರದ ಹಾದಿಯಲ್ಲಿ. ಪ್ರತಿರೋಧದ ಪ್ರತಿಭಟನೆ ಹೋರಾಟ ಚಳುವಳಿಗಳ ನಂತರ ಕೆಲವು ಭರವಸೆಗಳ ಜಾರಿ, ಅದು ಅರೆ ಮನಸ್ಸಿನ ಯತ್ನ. ಮಾಡಬೇಕಾದದ್ದು, ಸಾಗಬೇಕಾದ ಹಾದಿ ಇನ್ನೂ ಬಹಳ ಇದೆ.

ಎಡಪಕ್ಷಗಳಿಗೆ ಈಗ ತಾವು ಸಾಗುತ್ತಿರುವ ಹಾದಿಯ ಅವಲೋಕನದ ಸಮಯ. ಭಾರತ ಕಮ್ಯುನಿಸ್ಟ್ ಪಕ್ಷ ಸಿಪಿಐ 20ನೇ ಮಹಾಧಿವೇಶನ ಇದೀಗ ತಾನೇ ಹೈದರಾಬಾದ್‌ನಲ್ಲಿ ಮುಕ್ತಾಯಗೊಂಡಿದೆ. ಇದೀಗ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಸಿಪಿಐ(ಎಂ)ನ 19ನೇ ಮಹಾಧಿವೇಶನ ತಮಿಳುನಾಡಿನ ಕೊಯಮತ್ತೂರಿನಲ್ಲಿ.

ಯುಪಿಎ ಸರ್ಕಾರದ ಸಾಧನೆ-ವೈಫಲ್ಯಗಳದ್ದು ಮಾತ್ರವೇ ಚರ್ಚೆಯ ವಿಷಯವಲ್ಲ. ಕೋಮುವಾದಿ ಶಕ್ತಿಗಳು 2004ರ ಚುನಾವಣೆಯಲ್ಲಿ ಸೋತರೂ ದಿನೇ ದಿನೇ ಬೆಳೆಯುತ್ತಿರುವ ಕೋಮುವಾದಿ ಅಪಾಯಗಳು, ದೇಶದ ಸ್ವತಂತ್ರ ವಿದೇಶಾಂಗ ನೀತಿಗೆ ಬಂದಿರುವ ಅಪಾಯ. ದೇಶದ ಮೇಲೆ ಹೇರಲು ಯತ್ನಿಸಲಾಗುತ್ತಿರುವ ನವ ಉದಾರೀಕರಣ ನೀತಿಗಳು ಅದು ಹೊತ್ತು ತರುವ ಅಪಾಯಗಳು, ರಾಷ್ಟ್ರೀಯ ಅಂತರರಾಷ್ಟ್ರೀಯ ಸನ್ನಿವೇಶಗಳು. ಸಿಪಿಐ(ಎಂ) ಬೆಳವಣಿಗೆ-ಕೊರತೆಗಳು. ಪಕ್ಷದ 18ನೇ ಮಹಾಧಿವೇಶನವು ಜನತೆಯ, ದೇಶದ ಹಿತ ಸಂರಕ್ಷಣೆಯ ನಿಟ್ಟಿನಲ್ಲಿ ಪಕ್ಷದ ಚಳುವಳಿಯ ಬೆಳವಣಿಗೆ ದೃಷ್ಟಿಯಿಂದ ಪಕ್ಷದ ಮೇಲೆ ಹೊರಿಸಿದ ಹೊಣೆ ಏಯ ಅದನ್ನು ಸಮರ್ಥವಾಗಿ ನಿಬಾಯಿಸಲಾಗಿದೆಯೇ? ಇಲ್ಲವೇ? ಏನು ಕೊರತೆಗಳಿವೆ ಅದರಲ್ಲಿ. ಕೊರತೆಗಳನ್ನು ಮೀರಿ ಮುಂದೆ ಹೋಗುವುದು ಹೇಗೆ? ಇಂತಹ ಎಲ್ಲ ವಿಷಯಗಳೂ ಚರ್ಚೆಗೆ ಬರಲಿರುವುದು ಸಿಪಿಐ(ಎಂ)ನ ಮಹಾಧಿವೇಶನದಲ್ಲಿ.

ಮಹಾಧಿವೇಶನದ ಮಹತ್ವ


ಎಷ್ಟೋ ರಾಜಕೀಯ ಪಕ್ಷಗಳಲ್ಲಿ ಅದರ ಉನ್ನತ ಮುಖಂಡರುಗಳು ಹೇಳಿದ್ದೇ ನೀತಿ. ಅವರು ಸಾರಿದ್ದೇ ಪಕ್ಷದ ಧೋರಣೆ ಎಂಬಂತಿರುತ್ತದೆ. ಅಧಿವೇಶನ, ಸಮಿತಿಯಲ್ಲಿ ಚರ್ಚೆ ಎಂಬುದಾಗಿ ಕೆಲವೊಮ್ಮೆ ಕಂಡುಬಂದರೂ ಅದು ಕೇವಲ ಔಪಚಾರಿಕವಾಗಿರುತ್ತದೆ. ತೀರ್ಮಾನದ ಕೀಲಿಕೈಮಾತ್ರ ನಾಯಕರಲ್ಲೇ ಇರುತ್ತದೆ.

ಇವೆಲ್ಲಾ ಬಂಡವಾಳಶಾಹಿ ರಾಜಕೀಯ ಪಕ್ಷಗಳ ಕೆಲಸದ ವಿಧಾನಗಳು. ಅಂತರಿಕ ಪ್ರಜಾಪ್ರಭುತ್ವವಿಲ್ಲದ ಅಥವಾ ಅದು ತೋರಿಕೆಗಾಗಿ ಮಾತ್ರವೇ ಇರುವ ಸ್ಥಿತಿ ಅದು. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಒಂದು ಕಾರ್ಮಿಕ ವರ್ಗದ ಪಕ್ಷ. ದುಡಿಯುವ ವರ್ಗದ ಪಕ್ಷ. ಕ್ರಾಂತಿಕಾರಿ ಕಮ್ಯುನಿಸ್ಟ್ ಪಕ್ಷ. ಅದರ ಸಿದ್ಧಾಂತ ಮತ್ತು ಸಂಘಟನಾ ತತ್ವಗಳಿಗೆ ಮಾರ್ಕ್ಸ್‌ವಾದಿ, ಲೆನಿನ್‌ವಾದಿ ತತ್ವಗಳೇ ಆಧಾರ. ಪ್ರಜಾಪ್ರಭುತ್ವ, ಅತ್ಯುನ್ನತ ಪ್ರಜಾಪ್ರಭುತ್ವ, ಅಂತರಿಕ ಪ್ರಜಾಪ್ರಭುತ್ವ ಯಾವುದೇ ಕ್ರಾಂತಿಕಾರಿ ಪಕ್ಷದ ಒಂದು ಮುಖ್ಯ ಲಕ್ಷಣ.

> ಅಲ್ಲಿ ತಮಿಳುನಾಡಿನ ಕೊಯಮತ್ತೂರಿನಲ್ಲಿ ಸಿಪಿಐ(ಎಂ) ಪಕ್ಷದ 19ನೇ ಮಹಾಧಿವೇಶನದ ಧ್ವಜಾರೋಹಣ ವಾಗಿದೆ. ಇದರೊಂದಿಗೆ ದೇಶದ ಐಕ್ಯತೆ, ಜಾತ್ಯಾತೀತೆಯನ್ನು ಕಾಯ್ದುಕೊಂಡು, ಜನಾಂದೋಲನವನ್ನು ಮುಂದಕ್ಕೊಯ್ಯುವ ದಾರಿಯ ಕುರಿತು ಮಹತ್ವದ ಅನುಭವಗಳ ಚಿಂತನ ಮಂಥನ ಆರಂಭವಾಗಿದೆ.

ಹೋರಾಟ, ಬಲಿಷ್ಟ ಹೋರಾಟವೊಂದೇ. ಇದು ಬಿಟ್ಟು ಬೇರೆ ಅಡ್ಡದಾರಿ ಇಲ್ಲ

ಕೊಯಮತ್ತೂರಿನಲ್ಲಿ ಇದೀಗ ಮಾರ್ಚ್ 29 ರಂದು ಆರಂಭವಾಗಿರುವ 19 ಮಹಾಧಿವೇಶನದಲ್ಲಿ ಚರ್ಚಿತವಾಗುತ್ತಿರುವ ಕರಡು ರಾಜಕೀಯ ನಿರ್ಣಯವನ್ನು ಕೇಂದ್ರ ಸಮಿತಿಯು ಚರ್ಚಿಸಿ ಎರಡು ತಿಂಗಳಿಗೂ ಮೊದಲೇ ಬಿಡುಗಡೆ ಮಾಡಿದೆ. ಈ ಕರಡು ವರದಿಯು ಸಿಪಿಐ(ಎಂ)ನ ಪ್ರತಿಯೊಂದು ತಳಹಂತದ ಶಾಖೆಯ ಮಟ್ಟದಿಂದ ಚರ್ಚಿತವಾಗಿದೆ. ಪಕ್ಷದ ಯಾವುದೇ ಸದಸ್ಯರೂ, ಈ ಕರಡು ನಿರ್ಣಯಕ್ಕೆ ತಿದ್ದುಪಡಿ ಸೂಚಿಸಬಹುದಿತ್ತು. ಈ ಬಾರಿ ಪಕ್ಷದ ಕೇಂದ್ರ ಸಮಿತಿಗೆ ಒಟ್ಟಾರೆ 4,061 ತಿದ್ದುಪಡಿ ಸೂಚನೆಗಳು ಬಂದಿವೆ. 713 ಸಲಹೆಗಳೂ ಬಂದಿವೆ. ಇದಲ್ಲದೆ ಮಹಾಧಿವೇಶನದಲ್ಲಿ ಪಾಲ್ಗೊಳ್ಳುವ ಪ್ರತಿನಿಧಿಗಳೂ ತಿದ್ದುಪಡಿ ಸೂಚಿಸುವ ಹಕ್ಕನ್ನು ಹೊಂದಿರುತ್ತಾರೆ. ಪ್ರಜಾಸತ್ತಾತ್ಮಕವಾದ ವಿಧಾನದಲ್ಲಿ ಪಕ್ಷದ ಸದಸ್ಯತ್ವ ಸಂಖ್ಯೆಗನುಗುಣವಾಗಿ ವಿವಿಧ ರಾಜ್ಯ ಸಮ್ಮೇಳನಗಳಿಂದ ಚುನಾಯಿತರಾಗಿ ಬಂದವರು ಈ ಪ್ರತಿನಿಧಿಗಳು.



ಸಿಪಿಐ(ಎಂ) 19ನೇ ಮಹಾಧಿವೇಶನ ಉದ್ಘಾಟಿಸುತ್ತಿರುವ ಪ್ರಕಾಶ್ ಕಾರಟ್

ಸಂಘರ್ಷದ ಹಾದಿ

ಭಾರತೀಯ ಸಮಾಜದಲ್ಲಿ ಸಮಾಜವಾದವನ್ನು ತರುವುದು ಸಿಪಿಐ(ಎಂ) ಗುರಿಯಾದರೂ ಸಹ ಸಿಪಿಐ(ಎಂ)ನ ಪಕ್ಷದ ತತ್‌ಕ್ಷಣದ ಗುರಿ ಸಮಾಜವಾದವನ್ನು ತರುವುದಲ್ಲ. ಈ ಅಂಶವನ್ನು ಸಿಪಿಐ(ಎಂ) ಪಕ್ಷದ ಕಾರ್ಯಕ್ರಮ ಸ್ಪಷ್ಟವಾಗಿ ಘೋಷಿಸಿದೆ.

ಸಿಪಿಐ(ಎಂ) ಸದ್ಯದ ಗುರಿ ದೇಶದಲ್ಲಿ ಜನತಾ ಪ್ರಜಾಪ್ರಭುತ್ವದ ಕ್ರಾಂತಿಯನ್ನು ಸಾಧಿಸುವುದು. ಈ ಜನತಾ ಪ್ರಜಾಪ್ರಭುತ್ವ ಕ್ರಾಂತಿ ಎಂದರೆ ನಮ್ಮ ದೇಶವನ್ನು ಸಂಪೂರ್ಣವಾಗಿ ತಮ್ಮ ಸುಲಿಗೆಯ ತೆಕ್ಕೆಗೆ ತೆಗೆದುಕೊಳ್ಳಲು ಬಯಸುತ್ತಿರುವ ಸಾಮ್ರಾಜ್ಯಶಾಹಿ ಶಕ್ತಿಗಳನ್ನು ಹಿಮ್ಮೆಟ್ಟಿಸುವುದು. ತಮ್ಮನ್ನು ತೀವ್ರ ಸುಲಿಗೆಗೀಡು ಮಾಡಿರುವ ದೇಶದ ಏಕಸ್ವಾಮ್ಯ ಬಂಡವಾಳಗಾರರು ಮತ್ತು ಭೂಮಾಲಕರ ಹಿಡಿತದಿಂದ ದೇಶದ ದುಡಿಯುವ ವರ್ಗದ ವಿಮೋಚನೆ. ಇದಾಗಬೇಕಾದಲ್ಲಿ ಈಗಿನ ದೊಡ್ಡ ಬಂಡವಾಳಿಗರ ನಾಯಕತ್ವದ ಪ್ರಭುತ್ವದ ಬದಲಿಗೆ ಕಾರ್ಮಿಕ ವರ್ಗದ ನಾಯಕತ್ವದ ಪ್ರಭುತ್ವವು ಸ್ಥಾಪನೆಯಾಗಬೇಕಾಗಿದೆ. ಇದು ಸಿಪಿಐ(ಎಂ) ಕಾರ್ಯಕ್ರಮಾತ್ಮಕ ಕಣ್ನೋಟ.

ಮಹಾಧಿವೇಶನವು ಈ ಗುರಿಯ ಸಾಧನೆಗೆ ಅಗತ್ಯವಾದ ತಂತ್ರವನ್ನು, ನಿರ್ದಿಷ್ಟವಾಗಿ ಹೇಳುವುದಾದರೆ ಮುಂದಿನ ಮೂರು ವರ್ಷಗಳಿಗೆ ಅಗತ್ಯವಾದ ತಾಂತ್ರಿಕ ಧೋರಣೆಯನ್ನು ರೂಪಿಸಿ, ಖಚಿತಗೊಳಿಸುತ್ತದೆ.

ಆಳುವ ವರ್ಗಗಳು ತಮ್ಮ ಶೋಷಣಾಯುಕ್ತ ಈ ವ್ಯವಸ್ಥೆಯನ್ನು ಉಳಿಸಿಕೊಂಡು ತಮ್ಮ ಸುಲಿಗೆಯ ಲಾಭವನ್ನು ಮತ್ತಷ್ಟು ತೀವ್ರಗೊಳಿಸುವ ನಿಟ್ಟಿನಲ್ಲಿ ಸದಾಕಾಲ ಕಾತರಿಸುತ್ತಿರುತ್ತವೆ. ಹೀಗಾಗಿಯೇ ಭಾರತೀಯ ಸಮಾಜದ ವರ್ಗ ಬಲಾಬಲಗಳನ್ನು ಬದಲಿಸಬಲ್ಲ, ವರ್ಗ ಶಕ್ತಿಗಳ ಸ್ಥಾನಗಳನ್ನು ಪಲ್ಲಟಗೊಳಿಸಬಲ್ಲ ಕ್ರಾಂತಿಕಾರಿ ಚಳುವಳಿಯನ್ನು ತುಳಿಯಲು ಪ್ರಯತ್ನಿಸುತ್ತಾರೆ. ಅದಕ್ಕೆ ನಿರಂತರ ಅಡ್ಡಿ ಆತಂಕಗಳನ್ನೇ ತಂದೊಡ್ಡುತ್ತಾರೆ. ಆದ್ದರಿಂದ ಜನತಾ ಪ್ರಜಾಪ್ರಭುತ್ವ ಕ್ರಾಂತಿಯ ಕಡೆಗೆ ಹೆಜ್ಜೆ ಹಾಕುವುದು ಎಂದರೆ ಅದೊಂದು ಅವಿರತವಾದ, ಅತ್ಯಂತ ಕಠಿಣವಾದ ಸಂಘರ್ಷಮಯವಾದ ಹೋರಾಟದ ಹಾದಿ. ಅದು ಆಳುವ ವರ್ಗದ ನೀತಿಗಳನ್ನು ವಿರೋಧಿಸುವ ವರ್ಗ ಹೋರಾಟದ ಹಾದಿ.

ಸುಲಿಗೆಕೋರ ಶಕ್ತಿಗಳ ವಿರುದ್ಧ ಸಂಘರ್ಷ ಸರಿಯಾದ ದಾರಿಯಲ್ಲಿ ಸಾಗಬೇಕೆಂದರೆ ದುಡಿಯುವ ವರ್ಗದ ಐಕ್ಯತೆ ಅತ್ಯಂತ ಅನಿವಾರ್ಯ ಅಗತ್ಯ. ಆದರೆ ಕೋಮುವಾದ ಈ ದುಡಿಯುವ ವರ್ಗದ ಐಕ್ಯತೆಗೆ ಮಾತ್ರವಲ್ಲ, ಒಟ್ಟಾರೆ ದೇಶದ ಐಕ್ಯತೆ ಸಮಗ್ರತೆಗೆ ಮಾರಕವಾದುದು. ಆದ್ದರಿಂದಲೇ ಕೋಮುವಾದಿ ಶಕ್ತಿಗಳ ವಿರುದ್ಧದ ರಾಜಿ ರಹಿತ ಹೋರಾಟ ದುಡಿಯುವ ವರ್ಗದ ಮುಂದಿನ ಬಹುದೊಡ್ಡ ಸವಾಲು.

ಭಾರತದ ಆಳುವ ವರ್ಗಗಳ ಇಂದಿನ ಮತ್ತೊಂದು ತಂತ್ರವೆಂದರೆ ದೇಶದ ರಾಜಕಾರಣವು ಕಾಂಗ್ರೆಸ್ ಮತ್ತು ಬಿಜೆಪಿ ನೇತೃತ್ವದ ಎರಡು ರಾಜಕೀಯ ಬಣಗಳಲ್ಲಿ ಧ್ರುವೀಕರಣಗೊಳ್ಳುವಂತೆ ಮಾಡುವುದು ಮತ್ತು ಆ ಮೂಲಕ ಕಮ್ಯುನಿಸ್ಟ್ ಪಕ್ಷಗಳನ್ನು ಎಡಶಕ್ತಿಗಳನ್ನು ಮೂಲೆ ಗುಂಪು ಮಾಡಲು ಯತ್ನಿಸುವುದು.

ಆದರೆ ಅದು ಆಳುವ ವರ್ಗಗಳು ಅಂದುಕೊಂಡಷ್ಟು ಸುಲಭವಾಗಿಲ್ಲ. ರಾಷ್ಟ್ರದ ರಾಜಕಾರಣದಲ್ಲಿ ದೇಶದ ಜನತೆಯ- ದುಡಿಯು ವರ್ಗದ ಧ್ವನಿಯಾಗಿ ಸಿಪಿಐ(ಎಂ) ಮತ್ತು ಎಡಪಕ್ಷಗಳು ವಹಿಸುತ್ತಿರುವ ಪಾತ್ರವು ಅತ್ಯಂತ ಮಹತ್ತರವಾಗಿದೆ. ಕಳೆದ 3 ವರ್ಷಗಳಲ್ಲಿ ಎಡಪಕ್ಷಗಳು ನಡೆಸಿರುವ ಹೋರಾಟವು ಹಲವು ಪ್ರಮುಖ ನೈಜ ಪ್ರಶ್ನೆಗಳನ್ನು ರಾಷ್ಟ್ರ ರಾಜಕಾರಣದ ಮುಂಚೂಣಿಗೆ ತಂದು ನಿಲ್ಲಿಸಿವೆ.

ಲಾಭದಾಯಕ ಸಾರ್ವಜನಿಕ ಉದ್ದಿಮೆಗಳ ಖಾಸಗೀಕರಣಕ್ಕೆ ವಿರೋಧ, ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ನೇರ ಬಂಡವಾಳಕ್ಕೆ ವಿರೋಧ, ಪಿಂಚಣಿ ಹಣದ ಖಾಸಗೀಕರಣಕ್ಕೆ ವಿರೋಧ, ಶಿಕ್ಷಣದ ಅನುದಾನ ಹೆಚ್ಚಳಕ್ಕೆ ಒತ್ತಾಯ, ಗ್ರಾಮೀಣ ಉದ್ಯೋಗ ಕಾಯ್ದೆ, ಅರಣ್ಯ ಹಕ್ಕು ಕಾಯ್ದೆಗಾಗಿ ಒತ್ತಾಯ ಇಂತಹ ಎಡಪಕ್ಷಗಳ ಧೋರಣೆಗಳು ಜನತೆಯ ಮುಂದೆ ಒಂದು ಮೂರನೇ ಪರ್ಯಾಯ ಧೋರಣೆಗಳನ್ನಿಟ್ಟಿವೆ. ಅತ್ಯಂತ ಅಪಾಯಕಾರಿಯಾದ ಭಾರತ-ಅಮೇರಿಕಾ ನಡುವಿನ ಅಣು ಒಪ್ಪಂದದ ಪ್ರಶ್ನೆಯಂತೂ ಎಡಪಕ್ಷಗಳ ವಿರೋಧದಿಂದಾಗಿ ಇಡೀ ರಾಷ್ಟ್ರದ ಪ್ರಧಾನ ಚರ್ಚೆ ವಿಷಯವಾಗಿದೆ.

ಇದೇ ಹೋರಾಟದ ಹಾದಿಯನ್ನು ಮುಂದಕ್ಕೆ ಒಯ್ದು ಬಲಿಷ್ಠಗೊಳಿಸಬೇಕಾದ ಅಗತ್ಯ ತುರ್ತಾಗಿದೆ. ಹೋರಾಟವಲ್ಲದೇ ಚಳುವಳಿಯ ಮುನ್ನಡೆಗೆ ಬೇರೆ ಯಾವುದೇ ಅಡ್ಡ ಮಾರ್ಗಗಳಿಲ್ಲ. ಸಂಘರ್ಷವೊಂದೇ ದಾರಿ.

ಪಕ್ಷದ ಮುನ್ನಡೆ

ಕಳೆದ ಮೂರು ವರ್ಷಗಳ ಅವಧಿಯಲ್ಲಿ ಪಕ್ಷದ ಚಳುವಳಿ ಹಲವು ಮುನ್ನಡೆಗಳನ್ನು ಸಹ ಸಾಧಿಸಿದೆ. ಈ ಅವಧಿಯಲ್ಲಿ ಪಕ್ಷದ ಸದಸ್ಯತ್ವ 1,14,392 ರಷ್ಟು ಹೆಚ್ಚಳವನ್ನು ದಾಖಲಿಸಿದೆ. ಇದೇ ಸಿಪಿಐ(ಎಂ) ಪಕ್ಷದ ಸದಸ್ಯರು ನಾಯಕತ್ವ ನೀಡುತ್ತಿರುವ ಸಾಮೂಹಿಕ ಮತ್ತು ವರ್ಗ ಸಂಘಟನೆಗಳ ಸದಸ್ಯತ್ವ 1,26,38,196 ರಷ್ಟು ಅಂದರೆ ಸುಮಾರು ಒಂದೂ ಕಾಲು ಕೋಟಿಗಿಂತಲೂ ಹೆಚ್ಚು ಹೆಚ್ಚಾಗಿದೆ.

ಆದರೆ ಪಕ್ಷದ ಬೆಳವಣಿಗೆಯಲ್ಲಿ ಅಸಮಾನತೆಗಳು ಮುಂದುವರಿದಿವೆ. ಪಕ್ಷವು ದುರ್ಬಲವಾಗಿರುವ ರಾಜ್ಯಗಳಲ್ಲಿ ಪಕ್ಷ ಹೆಚ್ಚಿನ ಪ್ರಗತಿಯೇನೂ ಕಂಡಿಲ್ಲ.

ಎಡ ಸರ್ಕಾರಗಳ ಪಾತ್ರ

ಒಂದಾದ ಮೇಲೊಂದರಂತೆ ಕೇಂದ್ರ ಸರ್ಕಾರಗಳೂ ನವ ಉದಾರೀಕರಣ ನೀತಿಗಳನ್ನೇ ಅನುಸರಿಸುತ್ತಾ ರಾಜ್ಯ ಸರ್ಕಾರಗಳೂ ಸಹ ಅದೇ ಜನವಿರೋಧಿ ನೀತಿಗಳನ್ನೇ ಅನುಸರಿಸ ಬೇಕಾದಂತಹ ಒತ್ತಡಗಳನ್ನು ಹೇರುತ್ತಿವೆ.

ಪುಟ 14 ಕ್ಕೆ

ಅಕಾಲಿಕ ಮಳೆ : ಅಪಾರ ಹಾನಿ

ಅಕಾಲಿಕವಾಗಿ ಸುರಿದ ಮಳೆಗೆ ರಾಜ್ಯದಲ್ಲಿ ಬೆಳೆ - ಆಸ್ತಿ ಜೀವಹಾನಿಯಾಗಿದೆ. ನೂರಾರು ಕೋಟಿ ರೂಪಾಯಿಗಳ ನಷ್ಟದ ನಡುವೆ ಕಂಗಾಲಾಗಿ ಬದುಕುತ್ತಿರುವ ಜನರಿಗೆ ಪರಿಹಾರವೆಲ್ಲಿ?

ನಿತ್ಯಾನಂದಸ್ವಾಮಿ

ಸಾಮಾನ್ಯವಾಗಿ ಹೋಳಿ ಹುಣ್ಣಿಮೆಯ ಸುತ್ತಮುತ್ತ ಮಳೆ ಹನಿಗಳು ಉದುರುವುದುಂಟು. ಉತ್ತರ ಕರ್ನಾಟಕದಲ್ಲಿ ಮಳೆ ಹನಿಗಳನ್ನು ಕಾಮನ ಕಣ್ಣೀರು ಎಂದೇ ಕರೆಯಲಾಗುತ್ತದೆ. ಆದರೆ ಈ ಸಲ ಹೋಳಿ ಹುಣ್ಣಿಮೆಯಿಂದ ಆರಂಭಗೊಂಡು ಸುಮಾರು ಒಂದು ವಾರ ಕಾಲ ಸುರಿದ ಅಕಾಲಿಕ ಭಾರೀ ಮಳೆ ಕೃಷಿಕ ಸಮುದಾಯದ ಕಣ್ಣೀರಾಗಿ ಹರಿದಿದೆ. 'ಮಾರ್ಚ್ ತಿಂಗಳ ಮಧ್ಯದಲ್ಲಿ ಇಂತಹ ಮಳೆಯನ್ನು ನಾನು ನನ್ನ ಜೀವಮಾನದಲ್ಲೇ ಕಂಡಿರಲಿಲ್ಲ' ಎಂದು 60 ವರ್ಷ ದಾಟಿದ ವೃದ್ಧರು ಹೇಳುವುದನ್ನು ಕೇಳುವಾಗ ಇದೆಂತಹ ಮಳೆ(!) ಎಂಬ ಆತಂಕ ಉಂಟಾಗುತ್ತದೆ.

ಈ ಅಕಾಲಿಕ ಮಳೆ ಕೇವಲ ಕರ್ನಾಟಕಕ್ಕೆ ಸೀಮಿತವಾಗಿರಲಿಲ್ಲ. ತಮಿಳುನಾಡು, ಕೇರಳ ಮೊದಲಾದ ದಕ್ಷಿಣದ ರಾಜ್ಯಗಳಲ್ಲಿ ಆರ್ಭಟಿಸಿದ ಈ ಮಳೆಯಿಂದಾಗಿ ಅಪಾರಹಾನಿ ಸಂಭವಿಸಿದೆ. ತಮಿಳುನಾಡು ರಾಜ್ಯವೊಂದರಲ್ಲೇ 47,257 ಹೆಕ್ಟೇರ್ ಪ್ರದೇಶದ ಭತ್ತದ ಬೆಳೆ ನಾಶವಾಗಿದೆ. ಸುಮಾರು 30 ಜನ ಸಾವಿಗೀಡಾಗಿದ್ದಾರೆ. 1000 ಕ್ಕೂ ಹೆಚ್ಚು ದನಕರುಗಳು ಪ್ರವಾಹದಲ್ಲಿ ಕೊಚ್ಚಿಹೋಗಿವೆ. ಕೇರಳ ರಾಜ್ಯದಲ್ಲಿ ಪ್ರಾಥಮಿಕ ಅಂದಾಜಿನ ಪ್ರಕಾರ ಸುಮಾರು 28,321 ಹೆಕ್ಟೇರ್ ಪ್ರದೇಶದಲ್ಲಿ ಭತ್ತದ ಬೆಳೆ ಹಾನೀಗೀಡಾಗಿದೆ. ಆಂಧ್ರಪ್ರದೇಶದ ಸುಮಾರು 1 ಲಕ್ಷ ಎಕರೆ ಜಮೀನಿನಲ್ಲಿ ಬೆಳೆ ಹಾನಿಯಾಗಿದೆ ಎಂದು ವರದಿಯಾಗಿದೆ.

ಕರ್ನಾಟಕದಲ್ಲಿ ಬೆಳೆ ಹಾನಿ:

ಕರ್ನಾಟಕದಲ್ಲಿ ಅನಿರೀಕ್ಷಿತವಾಗಿ ಸುರಿದ ಈ ಮಳೆಯಿಂದಾಗಿ ಆಗಿರುವ ಹಾನಿಯನ್ನು ಸರಿಯಾಗಿ ಅಂದಾಜು ಮಾಡಲು ಸರ್ಕಾರಕ್ಕೆ ಇನ್ನೂ ಸಾಧ್ಯವಾಗಿಲ್ಲ. ಒಂದು ಪ್ರಾಥಮಿಕ ಅಂದಾಜಿನ ಪ್ರಕಾರ 56,548 ಎಕರೆ ಪ್ರದೇಶದಲ್ಲಿ ಬೆಳೆ ಹಾನಿಯಾಗಿದ್ದು 10.22 ಕೋಟಿ ರೂಪಾಯಿ ನಷ್ಟ ಸಂಭವಿಸಿದೆ. ಆದರೆ ಕರ್ನಾಟಕ ವಿಧಾನ ಪರಿಷತ್ತಿನಲ್ಲಿ ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕರಾಗಿರುವ ಎಚ್.ಕೆ.ಪಾಟೀಲರ ಪ್ರಕಾರ ಅವಿಭಜಿತ ಧಾರವಾಡ ಜಿಲ್ಲೆಯೊಂದರಲ್ಲೇ ಈ ಅಕಾಲಿಕ ಮಳೆಯಿಂದ 100 ಕೋಟಿ ರೂಪಾಯಿಗಳಷ್ಟು ನಷ್ಟ ಸಂಭವಿಸಿದೆ.

'ನಮ್ಮ ರೈತರ ಬದುಕು ಮಳೆಯೊಂದಿಗಿನ ಜೂಜಾಟ' ಎಂಬುದು ಮತ್ತೊಮ್ಮೆ ಸಾಬೀತಾಗಿದೆ. ಹಿಂಗಾರು ಬೆಳೆ ಇನ್ನೇನು ಕೈಸೇರಿದು ಎಂಬ ನಿರೀಕ್ಷೆಯಲ್ಲಿದ್ದ ರೈತರಿಗೆ ಆಘಾತವಾಗಿದೆ. ಕೈಗೆ ಬಂದ ತುತ್ತು ಜಾರಿ ಮಣ್ಣು ಪಾಲಾದ ಸ್ಥಿತಿ ಅವರದಾಗಿದೆ. ಆಳೆತ್ತರ ಬೆಳೆದು ನಿಂತು ಸೂರ್ಯಕಾಂತಿ, ಕೊೖಲಿಗೆ ಕಾದಿದ್ದ ಜೋಳದ ತೆನೆಗಳ ಮಳೆಯ ರಭಸಕ್ಕೆ ನೆಲಕಚ್ಚಿವೆ. ಇನ್ನೂ ಬಿಡಿಸದೆ ಉಳಿದ ಅಚ್ಚ ಬಿಳಿ ಹತ್ತಿಯೆಲ್ಲ ಕಪ್ಪು ಬಣ್ಣಕ್ಕೆ ತಿರುಗಿದೆ. ತುಸು ಬಿಸಿಲಿಗೆ ಒಣಗಿದ ಮೇಲೆ ರಾಶಿ ಮಾಡಿದರಾಯಿತು ಎಂದು ಅದೆಷ್ಟೋ ರೈತರು ಕಿತ್ತು ರಾಶಿ ಹಾಕಿದ್ದ ಗೋಧಿ, ಗೋವಿನ ಜೋಳದ ತೆನೆಗಳೆಲ್ಲ ಮಳೆಗೆ ಸಿಕ್ಕು ಹಾನಿಗೀಡಾಗಿವೆ. ಕೆಲವು ಕಡೆ ಕೊಚ್ಚಿಕೊಂಡೂ ಹೋಗಿವೆ. ತೆನೆಗಟ್ಟಿದ ಬಿಳಿ ಜೋಳ, ಗೋಧಿ ಕಪ್ಪನೆಯ ಬಣ್ಣಕ್ಕೆ ತಿರುಗಿದ್ದು ಮಾರುಕಟ್ಟೆಯಲ್ಲಿ ಅರ್ಧ ಬೆಲೆಗೂ ಮಾರಾಟವಾಗದಂತಾಗಿದೆ.



ನೆಲಕಚ್ಚಿ ಮಣ್ಣು ಪಾಲಾದ ಗೋಧಿ

ಕರಾವಳಿ, ಮಲೆನಾಡು ಜಿಲ್ಲೆಗಳಲ್ಲಿ ಮಳೆರಾಯನ ಆರ್ಭಟದಿಂದಾಗಿ ಮೆಣಸು, ಮಾವು, ನೆಲಗಡಲೆ(ಶೇಂಗಾ), ಭತ್ತದ ಬೆಳೆಗಳಿಗೆ ವಿಪರೀತ ಹಾನಿಯಾಗಿವೆ. ಒಣಗಲು ಹಾಕಿದ ಅಡಿಕೆ ಮಳೆಯ ನೀರಿನಿಂದ ಕೊಳೆಯಲಾರಂಭಿಸಿದೆ. ಬೆಳೆಗಾರರ ಉತ್ತಮ ಫಸಲಿನ ಕನಸು ನುಚ್ಚುನೂರಾಗಿದೆ. ಕೋಲಾರ, ಶಿವಮೊಗ್ಗ ಮೊದಲಾದ ಜಿಲ್ಲೆಗಳಲ್ಲಿ ಮಾವು ಬೆಳೆಯು ತೀವ್ರವಾಗಿ ಹಾನಿಗೀಡಾಗಿವೆ. ಬಯಲು ಪ್ರದೇಶದ ಜಿಲ್ಲೆಗಳಲ್ಲಿ ಜೋಳ, ಗೋಧಿ, ಕಡ್ಲೆ, ಈರುಳ್ಳಿ, ಸೂರ್ಯಕಾಂತಿ, ದಾಳಿಂಬೆ, ಕಲ್ಲಂಗಡಿ, ಟೊಮೊಟೋ ಮೊದಲಾದ ಹಲವಾರು ಬಗೆಯ ಬೆಳೆಗಳು ನಷ್ಟಕ್ಕೀಡಾಗಿವೆ. ವಿಜಾಪುರ, ಬಾಗಲಕೋಟೆ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಸುಮಾರು 265 ಕೋಟಿ ರೂ. ಬೆಲೆಯ ದ್ರಾಕ್ಷಿ ಬೆಳೆ ಹಾನಿಯಾದ ವರದಿಯಿದೆ.

ಜೀವಹಾನಿ - ಆಸ್ತಿಪಾಸ್ತಿ :

ಧಾರಕಾರವಾಗಿ ಸುರಿದ ಈ ಮಳೆಯಿಂದಾಗಿ ಅಪಾರ ಬೆಳೆಹಾನಿಯ ಜೊತೆಯಲ್ಲಿ ಸುಮಾರು 30 ರಷ್ಟು ಜನ ಪ್ರಾಣವನ್ನೂ ಕಳೆದುಕೊಂಡಿದ್ದಾರೆ. ನೂರಾರು ಜನ ಗಾಯಗೊಂಡಿದ್ದಾರೆ. ಮನೆಗಳು ಕುಸಿದು ಬಿದ್ದು ಕೆಲವು ಸಾವನ್ನಪ್ಪಿದ್ದಾರೆ. ಇನ್ನು ಕೆಲವರು ಸಿಡಿಲುಬಡಿದು ಮೃತರಾಗಿದ್ದಾರೆ. ಕೆಲವರು ನೀರಿನಲ್ಲಿ ಕೊಚ್ಚಿಹೋಗಿ ಪ್ರಾಣ ಕಳೆದುಕೊಂಡ ಹೃದಯವಿದ್ರಾವಕ ಘಟನೆಗಳೂ ಸಂಭವಿಸಿವೆ.

ಮನುಷ್ಯರನ್ನು ಮಾತ್ರವಲ್ಲ, ಪೂರ್ವ ಸೂಚನೆ ನೀಡದೆ ಬಂದ ಈ ಮಳೆ ಸಾವಿರಾರು ದನಕರುಗಳನ್ನು ಕುರಿಗಳನ್ನೂ ಬಲಿತೆಗೆದುಕೊಂಡಿದೆ. ಸಾವಿರಾರು ಮನೆಗಳು ಸಂಪೂರ್ಣವಾಗಿ ಹಾನಿಗೀಡಾಗಿದ್ದು, ಅಷ್ಟೇ ಸಂಖ್ಯೆಯ ಮನೆಗಳು ಭಾಗಶಃ ಹಾನಿಗೀಡಾಗಿವೆ. ಧಾರವಾಡ ಜಿಲ್ಲೆಯ ನವಲಗುಂದ ತಾಲ್ಲೂಕಿನ ಭದ್ರಾಪುರ ಸೇತುವೆ ಕುಸಿದು ಗದಗ ಮತ್ತು ಕೊಪ್ಪಳ ಜಿಲ್ಲೆಗಳನ್ನು ಸಂಪರ್ಕಿಸುವ ಮಾರ್ಗ ಕಡಿದುಹೋಗಿದೆ. ಉಡುಪಿ ಜಿಲ್ಲೆಯಲ್ಲಿ ಕಟ್‌ಪಾಡಿ ಬಳಿ ಕಿಂಡಿ ಅಣೆಕಟ್ಟು ಯೋಜನೆಗಾಗಿ ಕಟ್ಟಲಾಗಿದ್ದ ತಾತ್ಕಾಲಿಕ ತಡೆ ಗೋಡೆ ಕುಸಿದಿದ್ದು ನದಿ ನೀರು ನುಗ್ಗಿ ಲಕ್ಷಾಂತರ ರೂ. ಹಾನಿಯಾಗಿದೆ. ವಿಶ್ವಪ್ರಸಿದ್ಧ ಹಂಪಿಯ ಕಮಲ್ ಮಹಲ್ ಆವರಣ ಗೋಡೆ ಕುಸಿದು ಬಿದ್ದಿದೆ. ಗುಲ್ಬರ್ಗಾ-ಯಾದಗಿರಿ ರಸ್ತೆ ತೀವ್ರ ಹಾನಿಗೆ ಒಳಗಾಗಿದೆ. ಶಿವಮೊಗ್ಗ ಜಿಲ್ಲೆಯ ವಿವಿದೆಡೆ ರಸ್ತೆ, ಸೇತುವೆಗಳಂತಹ ಮೂಲ ಸೌಕರ್ಯಗಳಿಗೆ ಧಕ್ಕೆಯಾಗಿದೆ. ಬೇರೆ ಬೇರೆ ಜಿಲ್ಲೆಗಳಲ್ಲಿನ ತಗ್ಗು ಪ್ರದೇಶಗಳಲ್ಲಿ ಗ್ರಾಮಗಳು, ಮನೆಗಳು ಜಲಾವೃತಗೊಂಡಿವೆ.

ಘೋಷಣೆಯಾಗದ ಪರಿಹಾರ

ಭಾರಿ ಮಳೆಯಿಂದ ಮೃತಪಟ್ಟವರ ಕುಟುಂಬಗಳಿಗೆ ತಲಾ ಒಂದು ಲಕ್ಷ ರೂಪಾಯಿ ಪರಿಹಾರ ನೀಡುವಂತೆ ರಾಜ್ಯಪಾಲ ರಾಮೇಶ್ವರ ಠಾಕೂರ್ ಸೂಚಿಸಿದ್ದಾರೆ. ರಾಜ್ಯದ 176 ತಾಲ್ಲಾಕುಗಳ ಪೈಕಿ 164 ತಾಲ್ಲೂಕುಗಳಲ್ಲಿ ಅಧಿಕ ಮಳೆಯಾಗಿದ್ದು ನೂರು ವರ್ಷಗಳ ದಾಖಲೆಗಳನ್ನು ಪರಿಶೀಲಿಸಿದರೆ ಈ ಮಾರ್ಚ್ ತಿಂಗಳಲ್ಲಿ ಅತಿ ಹೆಚ್ಚು ಮಳೆ ಬಿದ್ದಿದೆ ಎನ್ನಲಾಗಿದೆ. ಈ ಮಳೆಯಿಂದಾಗಿ ಆಗಿರುವ ಹಾನಿಯೂ ಅಪಾರವಾಗಿದೆ. ಆದರೆ ಸರ್ಕಾರದಿಂದ ಬೆಳೆ ಹಾನಿ, ಆಸ್ತಿ ಹಾನಿಗೆ ಯಾವುದೇ ಪರಿಹಾರ ಘೋಷಣೆ ಸಹ ಇದುವರೆಗೆ ಆಗಿರುವುದಿಲ್ಲ.

ರಾಜ್ಯದ ಅತಿವೃಷ್ಟಿ ಸ್ಥಿತಿ ಬಗ್ಗೆ ಕೇಂದ್ರ ಸರ್ಕಾರಕ್ಕೆ ವರದಿ ಸಲ್ಲಿಸಲಾಗಿದೆ. ಕೇಂದ್ರ ಸರ್ಕಾರದಿಂದ ಯಾವುದೇ ನೆರವು ಹರಿದುಬರಲಿಲ್ಲ. ಕೇಂದ್ರ ಸರ್ಕಾರದ ಸಾಲ ಮನ್ನಾ ಯೋಜನೆಯಿಂದ ರೈತರು ಸ್ವಲ್ಪ ಮಟ್ಟಿಗೆ ಉಸಿರಾಡುವಂತಾಗಿತ್ತು. ಸಾಲ ಮನ್ನಾ ಯೋಜನೆಯನ್ನು ಇನ್ನಷ್ಟು ವಿಸ್ತರಿಸಿ ದುಸ್ಥಿತಿಯಲ್ಲಿರುವ ಆದಷ್ಟು ಹೆಚ್ಚು ರೈತರಿಗೆ ಅದರ ಪ್ರಯೋಜನ ದೊರೆಯುವಂತೆ ಮಾಡುವ ಅಗತ್ಯವಿತ್ತು. ಈಗ ಅಕಾಲಿಕ ಮಳೆಯಿಂದ ರೈತರು ಮತ್ತೆ ಸಂಕಷ್ಟಕ್ಕೆ ಒಳಗಾಗಿದ್ದಾರೆ.



ಹಾಳಾದ ದ್ರಾಕ್ಷಿ

ಮಳೆಯಿಂದ ಹಾನಿಗೀಡಾದ ರೈತರಿಗೆ ತುರ್ತಾಗಿ ಸಾಲದ ನೆರವು ನೀಡಲು ರಾಷ್ಟ್ರೀಕೃತ ಬ್ಯಾಂಕುಗಳು ಮುಂದಾಗಿರುವುದು ಸ್ವಾಗತಾರ್ಹ. ಭಾರತೀಯ ರಿಸರ್ವ್ ಬ್ಯಾಂಕಿನ ಆದೇಶದ ಮೇರೆಗೆ ಈ ಬ್ಯಾಂಕುಗಳು ಈಕ್ರಮಕೈಗೊಳ್ಳಲು ಮುಂದಾಗಿವೆ. ಹಾನಿಗೀಡಾದ ರೈತರ ಹೊಸ ಸಾಲಕ್ಕೆ ಯಾವುದೇ ಭದ್ರತೆ ಪಡೆಯದೆ ತುರ್ತುಸಾಲ ನೀಡಬೇಕೆಂದು ಬೆಂಗಳೂರಿನಲ್ಲಿ ಇತ್ತೀಚೆಗೆ ನಡೆದ ಬ್ಯಾಂಕುಗಳ ಉನ್ನತಾಧಿಕಾರಿಗಳ ಸಭೆ ನಿರ್ಧರಿಸಿದೆ. ಈ ತೀರ್ಮಾನವೂ ಶ್ಲಾಘನೀಯವಾಗಿದೆ. ಆದರೆ ಬೆಳೆ ಹಾನಿಗೊಳಗಾದ ರೈತರಿಗೆ ಬೇಕಾಗಿರುವುದು ಸಾಲಕ್ಕಿಂತ ಮುಖ್ಯವಾಗಿ ಪರಿಹಾರ. ರಾಜ್ಯ ಸರ್ಕಾರ ತುರ್ತಾಗಿ ಮಾಡಬೇಕಾದ ಕೆಲಸವಿದು.

ಪ್ರವಾಹ ಪೀಡಿತ ಪ್ರದೇಶಗಳ ವೀಕ್ಷಣೆಗೆಂದು ಗದಗ ಜಿಲ್ಲೆಯ ನರಗುಂದಕ್ಕೆ ರಾಜ್ಯಪಾಲರ ಸಲಹೆಗಾರ ತಾರಕನ್ ಅವರು ಭೇಟಿ ನೀಡಿದಾಗ ರೈತರು ಅವರಿಗೆ ದಿಗ್ಬಂಧನ ಹಾಕಿದ್ದರು. ಕೊಳೆತ ಪೈರನ್ನು ಪ್ರದರ್ಶಿಸಿ ತಮ್ಮ ಆಕ್ರೋಶ ವ್ಯಕ್ತಪಡಿಸಿದ್ದರು. ಶೀಘ್ರ ಪರಿಹಾರಕ್ಕಾಗಿ ಒತ್ತಾಯಿಸಿದ್ದರು. ರಾಜ್ಯದಲ್ಲಿ ಒಂದು ಚುನಾಯಿತ ಸರ್ಕಾರ ಇಲ್ಲದಿರುವುದು ಸಂತ್ರಸ್ತರ ಸಂಕಷ್ಟಗಳನ್ನು ಹೆಚ್ಚಿಸಿದೆ.

ಕೇರಳದ ಸಿಪಿಐ(ಎಂ) ನೇತೃತ್ವದ ಎಡರಂಗ ಸರ್ಕಾರ ಬೆಳೆ ನಷ್ಟವಾದ ಪ್ರತಿ ಒಂದು ಹೆಕ್ಟೇರ್ ಪ್ರದೇಶಕ್ಕೆ 10 ಸಾವಿರ ರೂಪಾಯಿ ಪರಿಹಾರ ಘೋಷಿಸಿದೆ. ಮುಖ್ಯ ಮಂತ್ರಿ ಅಚ್ಯುತಾನಂದನ್ ಅವರ ಪ್ರಕಾರ ಇದಕ್ಕಾಗಿ 25 ಕೋಟಿ ರೂಪಾಯಿಗಳು ಬೇಕಾಗಲಿದ್ದು ರಾಜ್ಯ ಸರ್ಕಾರ ಈಗಾಗಲೇ 12 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿದೆ. ತಮಿಳುನಾಡಿನ ಡಿ.ಎಂ.ಕೆ. ಸರ್ಕಾರ ಪ್ರತಿ ಹೆಕ್ಟೇರ್ ಬೆಳೆ ಹಾನಿಗೆ ರೂ. 7,500 ಪರಿಹಾರವನ್ನು ಘೋಷಿಸಿದೆ. ಆದರೆ ಕರ್ನಾಟಕದಲ್ಲಿ ಸರ್ಕಾರ ಇದುವರೆಗೆ ಪರಿಹಾರದ ಬಗ್ಗೆ ಬಾಯಿ ಬಿಟ್ಟಿಲ್ಲ.

ಅಕಾಲಿಕ ಮಳೆಗೆ ಕಾರಣವೇನು?

ಮಾರ್ಚ್ ತಿಂಗಳಲ್ಲೇ ಹೀಗೇಕೆ ಮಳೆ ಬಂತು ಎಂಬ ಪ್ರಶ್ನೆ ಎಲ್ಲರನ್ನೂ ಕಾಡುತ್ತಿರುವುದು ಆಶ್ಚರ್ಯದ ಸಂಗತಿಯಲ್ಲ. ಜ್ಯೋತಿಷ್ಯದಿಂದ ಪರಿಹಾರ ಬಯಸುವವರಿಗೆ 'ಗ್ರಹದೋಷ' ಎಂಬ ಸಿದ್ಧ ಉತ್ತರ ದೊರಕುತ್ತದೆ. ಆದರೆ ವೈಜ್ಞಾನಿಕವಾಗಿಯ ಈ ಬೆಳವಣಿಗೆಯನ್ನು ಹೇಗೆ ಕಾಣಲಾಗುತ್ತದೆ?

ಈ ಬೆಳವಣಿಗೆ ಹವಾಮಾನ ಬದಲಾವಣೆಯ ಸ್ಪಷ್ಟ ಸೂಚನೆಯಾಗಿದೆ ಎಂದು ಕೊಚ್ಚಿ ವಿಶ್ವವಿದ್ಯಾಲಯದ ಸಾಗರ ವಿಜ್ಞಾನ ವಿಭಾಗದ ಮುಖ್ಯಸ್ಥ ಡಾ. ಸಿ.ಕೆ.ರಾಜನ್ ಹೇಳಿದ್ದಾರೆ. ಸಮುದ್ರದ ಉಷ್ಣತೆ ಏರಿದ ಪರಿಣಾಮವಾಗಿ ವಾಯುಭಾರ ಕುಸಿಯುತ್ತದೆ. ಜೊತೆಗೆ ಮೋಡ ರಚನೆಯಾಗುತ್ತದೆ. ಸಮುದ್ರದಲ್ಲಿ ವಾಯುಭಾರ ಕಡಿಮೆಯಾದಾಗ ಮಳೆ ಸುರಿಯುತ್ತದೆ. ಬಂಗಾಳಕೊಲ್ಲಿ ಮತ್ತು ಅರಬ್ಬೀ ಸಮುದ್ರದಲ್ಲಿ ವಾಯುಭಾರ ಕುಸಿತ ಉಂಟಾದ ಪರಿಣಾಮವಾಗಿ ಈ ಅಕಾಲಿಕ ಮಳೆ ಸುರಿಯುವಂತಾಗಿದೆ.

ಶಾಶ್ವತ ಪರಿಹಾರ ಕ್ರಮಗಳಿಗೇಕೆ ವಿಳಂಬ

ಕಳೆದ ಸೆಪ್ಟೆಂಬರ್ ತಿಂಗಳಲ್ಲಿ ಇದೇ ರೀತಿ ಮುಗಿಲು ಹರಿದಂತೆ ಮಳೆ ಸುರಿದು ಉತ್ತರ ಕರ್ನಾಟಕದಲ್ಲಿ ಪ್ರವಾಹ ಸ್ಥಿತಿ ಉಂಟಾಗಿತ್ತು. ಅದರಲ್ಲೂ ಬರಗಾಲಕ್ಕೆ ಹೆಸರುವಾಸಿಯಾದ ಗದಗ ಜಿಲ್ಲೆಯ ಗಡಿ ಭಾಗದ ಗ್ರಾಮಗಳು ಪ್ರವಾಹದಲ್ಲಿ ಮುಳುಗಿಹೋಗಿದ್ದವು. ಮಲಪ್ರಭಾ ಮತ್ತು ಬೆಣ್ಣೆ ಹಳ್ಳಕ್ಕೆ ಬಂದ ಮಹಾಪುರದಿಂದಾಗಿ 25 ಕ್ಕೂ ಹೆಚ್ಚು ಗ್ರಾಮಗಳು ಜಲಾವೃತವಾಗಿ, ಮನೆಗಳಲ್ಲಿದ್ದ ಆಹಾರಧಾನ್ಯಗಳು, ದನಕರುಗಳು ಕೊಚ್ಚಿಹೋಗಿದ್ದವು. ನಡುಗಡ್ಡೆಯಲ್ಲಿ ಸಿಕ್ಕಿಹಾಕಿಕೊಂಡ ಜನರನ್ನು ಹೆಲಿಕಾಪ್ಟರ್ ಸಹಾಯದಿಂದ ಪಾಲು ಮಾಡಲಾಗಿತ್ತು. ಸಂತ್ರಸ್ತರಿಗೆ ಸೂಕ್ತ ಪರಿಹಾರ, ಪುನರ್ವಸತಿ ಕಲ್ಪಿಸದೆ ಜಿಲ್ಲಾಡಳಿತ ತೀವ್ರ ಟೀಕೆಗೆ ಒಳಗಾಗಿತ್ತು. ಆ ಸಂದರ್ಭದಲ್ಲಿ ಹೆಚ್ಚು ಹಾನಿಗೊಳಗಾದ ರೋಣ ತಾಲ್ಲೂಕಿನ 9 ಹಾಗೂ ನರಗುಂದ ತಾಲ್ಲೂಕಿನ 3 ಗ್ರಾಮಗಳನ್ನು ಸ್ಥಳಾಂತರ ಮಾಡಲು ನಿರ್ಧರಿಸಲಾಗಿತ್ತು. ಆ ಗ್ರಾಮಗಳ ಜನರು ತಮ್ಮ ಒಪ್ಪಿಗೆಯನ್ನು ನೀಡಿದ್ದರು. ಆದರೆ ಇದುವರೆಗೆ ಆ ಗ್ರಾಮಗಳ ಸ್ಥಳಾಂತರ ಮಾಡದೆ ಇರುವುದರಿಂದ ಈಗ ಮತ್ತೆ ಅದೇ ಪರಿಸ್ಥಿತಿ ಮರುಕಳಿಸಿದೆ. ಇದರಿಂದಾಗಿ ಜನರಿಗೆ ಸರ್ಕಾರ ಎಂಬ ಒಂದು ವ್ಯವಸ್ಥೆಯ ಮೇಲಿನ ವಿಶ್ವಾಸ ಹೊರಟುಹೋಗುವಂತಾಗಿದೆ. ಅಂದು ಮುಂಗಾರಿನ ಅತಿವೃಷ್ಟಿ ಸಂದರ್ಭದಲ್ಲಿ ಜನಪ್ರತಿನಿಧಿಗಳಿದ್ದಾಗಲೇ ಅಧಿಕಾರಿಗಳು ಸರಿಯಾಗಿ ಸ್ಪಂದಿಸಿರಲಿಲ್ಲ. ಈಗ ರಾಷ್ಟ್ರಪತಿ ಆಡಳಿತದಲ್ಲಿ ಅಕಾಲಿಕ ಮಳೆಯಾಗಲಿ, ಭೂಕಂಪವೇ ಸಂಭವಿಸಲಿ, ಸ್ಪಂದಿಸುವವರು ಯಾರಿದ್ದಾರೆ?

ಜನ ಸಂಘಟನೆ, ಜನ ಚಳುವಳಿ ಮಾತ್ರವೇ ಇಂತಹ ಎಲ್ಲ ಸಂದರ್ಭಗಳಲ್ಲಿ ಜನಹಿತರಕ್ಷಣೆಗೆ ಉಳಿದಿರುವ ಒಂದೇ ದಾರಿ ಎಂಬುದನ್ನು ನಾವು ನೀವೆಲ್ಲರೂ ಮನಗಾಣಬೇಕಾಗಿದೆ.

ಅಳಂದ ಗಲಭೆ : ಕೋಮುವಾದಿಗಳ ಕೊಳ್ಳಿಗೆ ಪೊಲೀಸರ ಪೆಟ್ರೋಲ್

ಹಲವು ವರ್ಷಗಳಿಂದಲೂ ನೆಲೆಯೂರಲು ಯತ್ನಿಸುತ್ತಿರುವ ಕೋಮುವಾದಿಗಳು ಗಲಭೆ ಎಬ್ಬಿಸಲು ಮಸೀದಿ-ದರ್ಗಾಗಳ ಮೇಲೆ ಧಾಳಿ ನಡೆಸಿದ್ದಾರೆ, ಬಸ್ ಸುಟ್ಟಿದ್ದಾರೆ. ಇಂತಹ ಕ್ರಿಮಿನಲ್‌ಗಳಿಗೆ ಪೊಲೀಸ್ ಅಧಿಕಾರಿಗಳೇ ರಕ್ಷಣೆ ನೀಡಿದ್ದಾರೆ. ಮುಸ್ಲಿಮರ ತಾಳ್ಮೆ, ಸೌಹಾರ್ದ ಭಾವವು ಹೋಳಿ ದಿನದಂದು ರಕ್ತದೋಕುಳಿ ಆಗದಂತೆ ತಡೆದಿದೆ.

ಮಾರ್ಚ್22ರ ಹೋಳಿ ಹುಣ್ಣಿಮೆ ಅಂದು ಪೋಲೀಸರ ಸಮ್ಮುಖದಲ್ಲೇ ಆಳಂದದಲ್ಲಿ ಬಿಜೆಪಿ-ಆರ್‌ಎಸ್‌ಎಸ್‌ನವರು ಬಣ್ಣ ದೋಕುಳಿಯ ಬದಲು ರಕ್ತದೋಕುಳಿಯ ಹಬ್ಬ ಆಚರಿಸಬೇಕೆಂದು ಯೋಜನೆಯೊಂದು ರೂಪಿಸಿತ್ತು. ಇದಕ್ಕಾಗಿ ಅಲ್ಲಿನ ಮುಸ್ಲಿಮರನ್ನು ಪ್ರಚೋದಿಸಲು ಅಂದು ಆಳಂದದ ಹಲವಾರು ದರ್ಗಾ ಮಸೀದಿಗಳ ಮೇಲೆ ಅವರು ಧಾಳಿ ನಡೆಸಿದರು. ಆದರೆ, ಶಾಂತಿಪ್ರಿಯ ಆಳಂದದ ಮುಸ್ಲಿಂ ಬಾಂಧವರು ಅಷ್ಟೆಲ್ಲಾ ಆದರೂ, ಅತ್ಯಂತ ತಾಳ್ಮೆಯಿಂದ ಇದ್ದುಕೊಂಡು ಪ್ರಜಾತಾಂತ್ರಿಕ- ಕಾನೂನಿನ ಹಾದಿ ಹಿಡಿದರು. ಇದರ ಬಗ್ಗೆ ಪೋಲೀಸರಿಗೆ ತಿಳಿಸಿದರು. ಇಂತಹ ಕೋಮುವಾದಿಗಳ ದಾಳಿಗೆ ಪ್ರತಿ ದಾಳಿ ಮಾಡಕೂಡದೆಂದು ಮುಸ್ಲಿಂ ಯುವಕರಿಗೆ ಅವರ ಹಿರಿಯರು ಬುದ್ಧಿ ಹೇಳಿದರು. ಇದರಿಂದಾಗಿ ಆಳಂದದ ಜನತೆಗೆ ಬಣ್ಣದ ಓಕುಳಿಯ ಬದಲು ರಕ್ತದ ಹೋಕುಳಿಯಾಗುವುದನ್ನು ತಪ್ಪಿದೆ.

ನಡೆದದ್ದು ಹೀಗೆ : ಕಳೆದ ಎರಡು ಹೋಳಿ ಹುಣ್ಣಿಮೆಯಿಂದಲೂ ಆಳಂದಲ್ಲಿರುವ 'ಚೆಡ್ಡಿಗಳು' ಏನಾದರೂ ಕಿತಾಪತಿ ಮಾಡಿ ಕೋಮುಗಲಭೆಗಳನ್ನು ಮಾಡಲು ಯತ್ನಿಸುತ್ತಿದ್ದಾರೆ. ದರ್ಗಾ, ಮಸೀದಿಗಳ ಮೇಲೆ ಸಣ್ಣ ಪುಟ್ಟ ದಾಳಿಗಳನ್ನು ಮಾಡುತ್ತಾ ಬಂದಿದ್ದಾರೆ. ಹೀಗಾಗಿ 'ಈ ವರ್ಷದ ಹೋಳಿ ಹುಣ್ಣಿಮೆಯ ದಿನ ಕೂಡ ಅಂತಹ ದಾಳಿ ನಮ್ಮ ಮೇಲೆ ನಡೆಯುವ ಸಂಭವವಿದೆ. ನಮ್ಮೆಲ್ಲ ದರ್ಗಾ ಮಸೀದಿ ಮತ್ತಿತರ ಪ್ರಾರ್ಥನಾ ಸ್ಥಳಗಳಿಗೆ ಸೂಕ್ತ ರಕ್ಷಣೆ ಬಂದೋಬಸ್ತ್ ಮಾಡಬೇಕೆಂದು' ಮುಸ್ಲಿಂ ಸಮಾಜದ ಮುಖಂಡರು ಡಿ.ವೈ.ಎಸ್.ಪಿ. ಎಸ್.ಆರ್.ರಾಠೋಡ್‌ರವರಿಗೆ 3 ದಿವಸಗಳ ಮೊದಲೇ ಮನವಿ ಮಾಡಿದ್ದಾರೆ. ಅದಕ್ಕೆ ರಾಠೋಡ್‌ರವರು, 'ನೀವು ಯಾವುದೇ ರೀತಿಯ ಗಾಬರಿಪಡಬೇಡಿರಿ, ನಿಮಗೆ ರಕ್ಷಣೆ ಕೊಡುವುದು ನನ್ನ ಜವಾಬ್ದಾರಿ' ಎಂದು ಭರವಸೆ ನೀಡಿದ್ದಾರೆ. ಹೀಗಾಗಿ 22.03.2008ರ ಹೋಳಿ ಹಬ್ಬದ ದಿವಸ ಮುಸ್ಲಿಂ ಸಮಾಜದ ಎಲ್ಲಾ ಮುಖಂಡರು ತಮ್ಮ ತಮ್ಮ ಮನೆಗಳಲ್ಲಿ ನಿರಾತಂಕವಾಗಿ ಉಳಿದುಕೊಂಡಿದ್ದಾರೆ. ಅಂದಿನ ಮಧ್ಯಾಹ್ನ 3 ಗಂಟೆಗೆ, ಡಾಕುಲಮಜ್ಜೀದ ಎದುರಿಗೆ ಜಮಾಯಿಸಿದ ಗುಂಪೊಂದು, ಮಜ್ಜೀದ್ ಮುಖ್ಯ ಗೋಡೆಗೆ ಬಣ್ಣ ಎರಚಿ, ಒಳಗೆ ನುಗ್ಗಿ ಅಲ್ಲೆಲ್ಲಾ ಬಣ್ಣ ಚೆಲ್ಲಿ ಅಲ್ಲಿರುವ ಹಿರಿಯರಿಗೆ ಹೆದರಿಸಿದ್ದಾರೆ. ಈ ಎಲ್ಲಾ ಘಟನೆ ನಡೆಯುವಾಗ ಪೋಲೀಸ್ ವ್ಯಾನ್ ಮಜ್ಜಿದ್ ಎದುರಿಗೆ ನಿಂತಿತ್ತು. ಈ ಘಟನೆ ತಡೆಯಲು ಅವರು ಕಿಂಚಿತ್ತು ಯತ್ನಿಸಲಿಲ್ಲ. ಅಲ್ಲಿಂದ ಮುಂದೆ ಇನ್ನೊಂದು ಗುಂಪು ಜಹಾಂಗೀರ ಶಾಹಿ ಮಜ್ಜಿದ್ ಮೇಲೆ ಕಲ್ಲು ತೂರಾಟ ನಡೆಸಿದ್ದಾರೆ. ಅಲ್ಲಿಯ ಪೋಲೀಸರ ಎದುರಿಗೇನೇ ಬಣ್ಣ ಎರಚಿದ್ದಾರೆ. ಮಜ್ಜೀದ್‌ನ ಗೇಟ್ ಮುರಿದಿದ್ದಾರೆ ಕಿಡಕಿಯ ಜಾಲರಿ ಮುರಿದಿದ್ದಾರೆ. ನಂತರ ಅದೇ ಗುಂಪು ಔದ್‌ಹುಸೇನ್ ದರ್ಗಾದ ಮೇಲೆ ದಾಳಿ ಮಾಡಿ ಒಳನುಗ್ಗಿ ಬಣ್ಣ ಚೆಲ್ಲಿದ್ದರಲ್ಲದೆ ದರ್ಗಾದ ಎಲೆಕ್ಟ್ರಿಸಿಟಿ ಮೀಟರ್ ಜಖಂಗೊಳಿಸಿದ್ದಾರೆ.

ಈ ಸುದ್ದಿಯನ್ನು ಮುಸ್ಲಿಂ ಬಾಂಧವರ ಮುಖಂಡರಿಗೆ ಫೋನ್ ಮೂಲಕ ಅಲ್ಲಿನ ಮೌಲ್ವಿಗಳು ತಿಳಿಸಿದ್ದಾರೆ. ಇದನ್ನರಿತ ಅವರು ಧಾವಿಸಿ ಬಂದು ಮತ್ತೆ ಡಿವೈಎಸ್‌ಪಿ ರಾಠೋಡ್‌ರವರಿಗೆ ಭೇಟಿಯಾಗಿ ತಮ್ಮ ಕಳವಳ ವ್ಯಕ್ತಪಡಿಸಿದ್ದಾರೆ. ರಾಠೋಡ್‌ರವರು, ಮುಸ್ಲಿಂ ಮುಖಂಡರನ್ನು ತಮ್ಮ ಜೊತೆಗೆ ಇಟ್ಟುಕೊಂಡು ಅವರನ್ನು ಸಮಾಧಾನಪಡಿಸಲು ಯತ್ನಿಸಿದ್ದಾರೆ. ಕಿಡಿಗೇಡಿಗಳನ್ನು ಕೂಡಲೇ ಬಂಧೀಸುತ್ತೇನೆಂದು ಹೇಳಿದ್ದಾರೆ. ಇನ್ನೊಂದೆಡೆ ಅದೇ ಕಿಡಿಗೇಡಿಗಳು, ಬಸ್ ಸ್ಟ್ಯಾಂಡ್‌ನಿಂದ ಕೆಲವೇ ಮೀಟರ್ ದೂರದಲ್ಲಿ ಬರುತ್ತಿದ್ದ ಕೆಎಸ್‌ಆರ್‌ಟಿಸಿ ಬಸ್ಸಿಗೆ ಬೆಂಕಿ ಹಚ್ಚಿ ಸುಟ್ಟು ಕರಕಲಾಗಿ ಮಾಡಿದ್ದಾರೆ. ಅದಲ್ಲದೇ ಮಹಾರಾಷ್ಟ್ರದ ಇನ್ನೊಂದು ಬಸ್ಸಿಗೆ ಕೂಡಾ ಬೆಂಕಿ ಹಚ್ಚಿದ್ದಾರೆ. ಆದರೆ ಅಷ್ಟರಲ್ಲಿ ಬಂದ ಅಗ್ನಿಶಾಮಕ ದಳದವರು ಅರ್ಧ ಸುಟ್ಟು ಬಸ್ಸಿನ ಬೆಂಕಿ ಆರಿಸಿದ್ದಾರೆ.

ಕೋಮುವಾದಿ ಕಿಡಿಗೇಡಿಗಳು, ಇಷ್ಟೆಲ್ಲಾ ಮಾಡಿದರೂ ತೃಪ್ತಿಪಡದೆ, ಬಣ್ಣದ ಬ್ಯಾರಲ್‌ಗಳನ್ನು ಟ್ರಾಕ್ಟರ್‌ಗಳಲ್ಲಿಟ್ಟು ಕೇಕೇ ಹಾಕುತ್ತ ಮುಸ್ಲಿಂ ಓಣಿಗಳಲ್ಲಿ ಭಯದ ವಾತಾವರಣ ಮೂಡಿಸಲು ರಾತ್ರಿ 7.30 ರವರೆಗೆ ತಮ್ಮ 'ಕಚಡಾ' ಸಂಸ್ಕೃತಿ ಪ್ರದರ್ಶಿಸಿದ್ದಾರೆ.

ಇಷ್ಟಕ್ಕೆಲ್ಲಾ ಯಾರು ಕಾರಣ ?: ಆಳಂದ ಘಟನೆಯಲ್ಲಿ ಇಂತಹ ಕೋಮು ಗಲಭೆ ನಡೆಸಲು ಸುಮಾರು 4-5 ವರ್ಷಗಳಿಂದ ಅಲ್ಲಿನ


ಸುಟ್ಟ ಬಸ್

ಆರ್‌ಎಸ್‌ಎಸ್ ಶತ ಪ್ರಯತ್ನ ನಡೆಸುತ್ತಿದೆ. ಅದರ ಮುಖಾಂತರ ಆಳಂದ ಭಾಗದಲ್ಲಿ ರಾಜಕೀಯ ನೆಲೆ ಸ್ಥಾಪಿಸಲು ಸಂಘ ಪರಿವಾರವು ಪರಿಪರಿಯಾಗಿ ಹಗಲು-ರಾತ್ರಿ ಕೆಲಸ ಮಾಡುತ್ತಿದೆ. ಈ ಹಿಂದೆ ಕೂಡ ಗಡಿ ಒಂದು ಮಸೀದಿ ಜಾಗದ ಬಗ್ಗೆ ದೊಡ್ಡರಾದ್ಯಂತ ಎಬ್ಬಿಸಿ ಭಾರಿ ಪ್ರಮಾಣದ ಕೋಮುದಳ್ಳುರಿಗೆ ಯತ್ನಿಸಲಾಗಿತ್ತು. ಆದರೆ ಸಿಪಿಐ(ಎಂ) ಮತ್ತಿತರ ಧರ್ಮ ನಿರಪೇಕ್ಷ ಶಕ್ತಿಗಳ ಸಮಯೋಚಿತ ಮಧ್ಯಪ್ರವೇಶದಿಂದಾಗಿ ಹಿಂದೂ-ಮುಸ್ಲಿಂ ಬಾಂಧವ್ಯಕ್ಕೆ ಧಕ್ಕೆ ತರದಂತೆ ನೋಡಿಕೊಳ್ಳಲಾಗಿತ್ತು.

ಆದರೆ ಈ ಸಲದ ಸಂದರ್ಭವೇ ಬೇರೆಯಾಗಿದೆ. ಬಿಜೆಪಿಯ ಕರ್ನಾಟಕದಲ್ಲಿ ಸ್ವಂತ ಬಲದ ಮೇಲೆ ಅಧಿಕಾರಕ್ಕೆ ಬರಲು, ಏನೆಲ್ಲಾ ಮಾಡಲು ಯೋಜನೆ ರೂಪಿಸಿದೆ. ಅದರ ಭಾಗವಾಗಿ, ಬರುವ ವಿಧಾನ ಸಭೆ ಚುನಾವಣೆಯ ಎದುರಿಗೆ, ರಾಜ್ಯಾದ್ಯಂತ ಹಲವಾರು ಕಡೆಗಳಲ್ಲಿ ಕೋಮು ಹಿಂಸಾಚಾರಕ್ಕೆ ಇಳಿಯುತ್ತಿದೆ. ಅದರ ಭಾಗವಾಗಿ, ಆಳಂದದಲ್ಲಿ ಬಿಜೆಪಿಯು ತನ್ನ ನೆಲೆ ಸ್ಥಾಪಿಸಿ ಚುನಾವಣೆ ಗೆಲ್ಲಲು ಈ ಆಟ ಹೂಡಿದೆ. ಆದರೆ, ಆಳಂದ ತಾಲ್ಲೂಕು ಒಂದು ವಿಶಿಷ್ಟ ಪ್ರಾದೇಶಿಕ ಲಕ್ಷಣ ಹೊಂದಿದೆ. ಒಂದುಕಡೆ ಅದು ಗುಲ್ಬರ್ಗಾ ತಾಲ್ಲೂಕಿಗೆ ಹತ್ತಿಕೊಂಡಿದೆ. ಇನ್ನೊಂದೆಡೆ ಅಫ್ಜಲ್‌ಪುರ ತಾಲ್ಲೂಕು ಇನ್ನೂ ಎರಡು ಕಡೆಗೆ ಮಹಾರಾಷ್ಟ್ರದ ಗಡಿಗೆ ಹೊಂದಿಕೊಂಡಿದೆ. ಈ ತಾಲ್ಲೂಕು ಜಮೀನ್ದಾರಿ ಶಕ್ತಿಗಳ ಬಿಗಿ ಹಿಡಿತದಲ್ಲಿರುವ ಒಂದು ಪ್ರದೇಶವಾದರೂ ಅಲ್ಲಿ ಹಲವಾರು ವರ್ಷಗಳಿಂದ ಒಂದು ಪ್ರಗತಿಪರ ಅಂಶ ಅಲ್ಲಿನ ವಿದ್ಯಾವಂತರಲ್ಲಿ ಬೆಳೆದು ಉಳಿದುಕೊಂಡು ಬಂದಿದೆ. ಹೀಗಾಗಿ ಈ ಪ್ರದೇಶದಲ್ಲಿ ಇಲ್ಲಿಯವರೆಗೂ ಚೆಡ್ಡಿಗಳಿಗೆ ಬಾಲ ಬಿಚ್ಚಲು ಬಿಟ್ಟಿಲ್ಲ.

ಆದರೆ ಈ ಸಲದ ಚುನಾವಣೆಯಲ್ಲಿ ಗೆಲ್ಲಲು ಬಿಜೆಪಿ-ಆರ್‌ಎಸ್‌ಎಸ್‌ನ ಭಾರಿ ತಯಾರಿಯ ಭಾಗವಾಗಿ, ಬಿಜೆಪಿಯ ಮಾಜಿ ಮಂತ್ರಿ ರೇವು ನಾಯಕನ ಜಾತಿಯ ಬಂಟ ಎಸ್.ಆರ್. ರಾಠೋಡ ಎಂಬಾತನನ್ನು ಡಿವೈಎಸ್‌ಪಿ ಯಾಗಿ ವರ್ಗ ಮಾಡಿಸಿಕೊಂಡಿದ್ದಾರೆ. ಆತನ ಬೆಂಬಲದಿಂದಲೇ ಇಲ್ಲಿ ಕೋಮುವಾದಿ ಬಿಜೆಪಿ-ಆರ್‌ಎಸ್‌ಎಸ್ ಗಲಭೆ ನಡೆಸುತ್ತಿವೆ. ಗುಲ್ಬರ್ಗಾ ಜಿಲ್ಲೆಯಲ್ಲಿ ಸರ್ವೆ ಸಾಮಾನ್ಯವಾಗಿ, ಹೋಳಿ ಹಬ್ಬ ಅಂದರೆ ಬಣ್ಣ ಹಾಕುವುದು ಬೆಳಿಗ್ಗೆಯಿಂದ ಮಧ್ಯಾಹ್ನ 1 ಗಂಟೆಯವರೆಗೆ ಮಾತ್ರ. ಆದರೆ ಆಳಂದ ಘಟನಾದಲ್ಲಿ ಬೆಳಿಗ್ಗೆಯಿಂದ ಹಲವಾರು ಚಕ್ಕಡಿ, ಟ್ರಾಕ್ಟರ್‌ಗಳಲ್ಲಿ, ಗುಂಪುಗಳಲ್ಲಿ ಪಟ್ಟಣದಾದ್ಯಂತ ರಾತ್ರಿ 7.30 ರವರೆಗೆ ಬಣ್ಣ ಆಡಿದ್ದಾರೆ. ಎಲ್ಲಾ ಪೋಲೀಸರು ಮತ್ತು ತಹಶೀಲ್ದಾರ್‌ರವರು ಪಟ್ಟಣದಾದ್ಯಂತ 'ಗಲಭೆಕೋರರ' ಜೊತೆಗೆ ಇದ್ದಾರೆ. ಎಲ್ಲಾ ಘಟನೆಗಳನ್ನು ವೀಕ್ಷಿಸಿದ್ದಾರೆ. ಆದರೆ ಘಟನೆಯ ನಂತರ 3 ಕೇಸುಗಳನ್ನು ದಾಖಲಿಸಿದ್ದಾರೆ. 1. ಒಂದು ಮಸೀದಿ ಮೇಲೆ ಬಣ್ಣ ಹಾಕಿದ್ದು, 2. ಬಸ್ಸು ಸುಟ್ಟಿದ್ದು, 3. ಕಲ್ಲು ತೂರಾಟ

ಘಟನೆಯ ಬಗ್ಗೆ ಕೂಡಲೇ ಯಾರನ್ನೂ ಬಂಧಿಸಿಲ್ಲ. ಡಿವೈಎಸ್‌ಪಿ ರಾಠೋಡ್ ಮರುದಿನ ನಡೆಸಿದ ತನ್ನ ಕುತಂತ್ರದಲ್ಲಿ, ಗಲಭೆಯ ಸಮಯದಲ್ಲಿ ಅವನ ಜೊತೆಗೆ ಸಹಾಯಕ್ಕಾಗಿ ಇದ್ದ ಮುಸ್ಲಿಂ ಮುಖಂಡರ ಮೇಲೆ ಕೇಸು ದಾಖಲಿಸಿ ಅವರನ್ನು ಜೈಲಿಗೆ ಕಳುಹಿಸಿದ್ದಾನೆ. ಒಟ್ಟು 67 ಜನ ಬಂಧಿತರಲ್ಲಿ 37 ಬಂಧಿತರು ಮುಸ್ಲಿಮರಿದ್ದಾರೆ. ಬಿಜೆಪಿ-ಆರ್‌ಎಸ್‌ಎಸ್‌ಗೆ ಸೇರಿದ ಯಾವುದೇ ಗಲಭೆಕೋರರನ್ನು ಬಂಧಿಸಿಲ್ಲ ಬದಲಾಗಿ ಸಂಬಂಧಪಡದ ಕೆಲ ಮುಗ್ಧ ಹಿಂದೂ ಹುಡುಗರನ್ನು ಮಾತ್ರ ಬಂಧಿಸಲಾಗಿದೆ. ಇದಲ್ಲದೆ ನಿಜವಾಗಿ ರಾಜಾರೋಷವಾಗಿ ಗಲಭೆಯ ಮುಂಚೂಣಿಯಲ್ಲಿದ್ದ 8 ರಿಂದ 10 ಸಂಘ ಪರಿವಾರಿ ಪುಂಡರ ಮೇಲೆ ಕೇಸು ಹಾಕಿಲ್ಲ, ಬಂಧನವೂ ಮಾಡಿಲ್ಲ.

ಎಲ್ಲ ಘಟನೆಗಳ ಬಗ್ಗೆ, ದರ್ಗಾ ಮಜ್ಜಿದ್‌ಗಳ ಮೇಲೆ ನಡೆದ ದಾಳಿಯ ಬಗ್ಗೆ ಮತ್ತು ನಿಜವಾದ ಅಪರಾಧಿಗಳ ಬಗ್ಗೆ ದೂರು ಸಲ್ಲಿಸಲು, ಆಯಾ ಮಜ್ಜಿದ್ ದರ್ಗಾದ ಮೌಲ್ವಿಗಳು ಪೋಲೀಸ್ ಸ್ಟೇಷನ್‌ಗೆ ಹೋದರೂ ಅಲ್ಲಿನ ಸೆಂಟ್ರಿ ಅವರಿಗೆ ಒಳಗೆ ಬಿಟ್ಟಿಲ್ಲ!

ಆಳಂದ ಗಲಭೆಯ ಮಾರನೇ ದಿವಸ ಅಲ್ಲಿಗೆ ಭೇಟಿ ಕೊಟ್ಟ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಕಾಂ:ಮಾರುತಿ ಮಾನ್ಪಡೆಯವರ ನೇತೃತ್ವದ ನಿಯೋಗವು ತಹಶೀಲ್ದಾರ್, ಡಿವೈಎಸ್‌ಪಿ, ಹಿಂದೂ-ಮುಸ್ಲಿಂ ಮುಖಂಡರಿಗೆ ಮತ್ತು ಡಾಕುಲ ಮಜ್ಜಿದ್, ಜಹಾಂಗೀರ್‌ಶಾಹಿ ಮಜ್ಜಿದ್ ಹಾಗೂ ಧಾಹುಸೇನ್ ದರ್ಗಾಕ್ಕೆ ಭೇಟಿ ನೀಡಿ ಎಲ್ಲ ವಿವರಗಳನ್ನು ಪಡೆಯಲಾಯಿತು. ಈ ನಿಯೋಗವು ಆಳಂದದಲ್ಲಿರುವುದನ್ನು ತಿಳಿದು ಹಲವಾರು ಮುಸ್ಲಿಂ ಮತ್ತು ಮುಸ್ಲಿಮೇತರ ಹಿರಿಯರು ತಮ್ಮ ಓಣಿಗಳಿಗೆ ಕರೆದುಕೊಂಡು ಹೋಗಿ ಘಟನೆಯ ವಿವರಗಳನ್ನು ನೀಡಿದರು. ನಂತರ ಆಳಂದದಲ್ಲಿಯೇ ಒಂದು ಪತ್ರಿಕಾಗೋಷ್ಠಿ ನಡೆಸಿ ಘಟನೆಗೆ ಕಾರಣರಾದ ಅಪರಾಧಗಳಿಗೆ ಮತ್ತು ಇದಕ್ಕೆ ಸಹಾಯ ನೀಡಿದ ಪೋಲೀಸ್ ಅಧಿಕಾರಿಗಳ ಮೇಲೆ ಕ್ರಮ ಜರುಗಿಸಲು ಆಗ್ರಹಿಸಲಾಯಿತು.

■ ಗಂಗಾ

ಮಾಜಿ ಶಾಸಕರು, ಹಾಲಿ ಆಕಾಂಕ್ಷಿಗಳ ಶಾಂತಿ ಸಂದೇಶ!

ಆಳಂದ ಕೋಮುಗಲಭೆಯ ಬಗ್ಗೆ ಹಲವಾರು ಪತ್ರಿಕೆಗಳು ಮುಖಪುಟದ ಸುದ್ದಿ ಪ್ರಕಟಿಸಿದವು. ಇಂತಹ ಘಟನೆಯ ಬಗ್ಗೆ ಪ್ರಜಾತಂತ್ರದಲ್ಲಿ, ಧರ್ಮ ನಿರಪೇಕ್ಷತೆಯಲ್ಲಿ ವಿಶ್ವಾಸವುಳ್ಳ ಪ್ರತಿಯೊಂದು ರಾಜಕೀಯ ಪಕ್ಷ, ಸಂಘಟನೆ ಮತ್ತು ವ್ಯಕ್ತಿಗಳು, ಸ್ಪಂದಿಸುವುದು ಅವರ ಕರ್ತವ್ಯ. ಘಟನೆಯ ಬಗ್ಗೆ ಒಂದು ವಾರ ಕಳೆದರೂ ಯಾವುದೇ ಬಂಡವಾಳಶಾಹಿ ಪಕ್ಷಗಳು ಪ್ರತಿಕ್ರಿಯೆ ನೀಡದೇ ಇರುವುದು ನಾಚಿಕೆಗೇಡಿನ ಕೆಲಸವಾಗಿದೆ. ಆಳಂದದ ಹಿಂದಿನ ಶಾಸಕರಾದ ಬಿ.ಆರ್.ಪಾಟೀಲ್‌ರಾಗಲಿ, ಸುಭಾಶ್ ಗುತ್ತೇದಾರರಾಗಲಿ ಆಳಂದದಲ್ಲಿ ಹಿಂದೂ ಕೋಮುವಾದಿಗಳ ಮತ್ತು ಅವರಿಗೆ ಸಹಾಯ ನೀಡುತ್ತಿರುವ ಪೋಲೀಸರ ವಿರುದ್ಧ ಚಕಾರ ಎತ್ತಿಲ್ಲ. ಕೇವಲ ಎಲ್ಲರೂ ಶಾಂತಿ ಕಾಪಾಡಬೇಕು ,ಎಂಬ ಫರ್ಮಾನು ಹೊರಡಿಸಿದ್ದಾರೆ.

ಈ ರೀತಿಯಾಗಿ ಇಂದು ಕೋಮುವಾದದ ವಿರುದ್ಧ ನಿರ್ಣಾಯಕ ಮತ್ತು ರಾಜಿ ರಹಿತ ಹೋರಾಟದ ಜವಾಬ್ದಾರಿ ಕೇವಲ ಎಡಶಕ್ತಿಗಳಿಂದ ಮಾತ್ರವೇ ಸಾಧ್ಯವಿದೆ ಎಂದು ಆಳಂದದ ನೂರಾರು ಮುಸ್ಲಿಂ ಹಿರಿಯರು, ಜನಸಾಮಾನ್ಯರು ಅಲ್ಲಿಗೆ ಭೇಟಿ ನೀಡಿದ ಸಿಪಿಐ(ಎಂ) ನಿಯೋಗಕ್ಕೆ ಹೇಳಿದ್ದಾರೆ.

ಜನಶಕ್ತಿ ಕನ್ನಡ ವಾರಪತ್ರಿಕೆ

ಏಪ್ರಿಲ್ 06, 2008



ಕಾಯಕದಲ್ಲಿ ನಿರತನಾದರೆ ಗುರುದರ್ಶನವಾದರೂ ಮರೆಯಬೇಕು
ಕಾಯಕದಲ್ಲಿ ನಿರತನಾದರೆ ಲಿಂಗಪೂಜೆಯಾದರೂ ಮರೆಯಬೇಕು.
ಕಾಯಕದಲ್ಲಿ ನಿರತನಾದರೆ ಜಂಗಮ ಮುಂದಿದ್ದರೂ ಹಂಗು ಹರಿಯಬೇಕು..... ಎಂಬ ನುಲಿಯ ಚಂದಯ್ಯನ

ಕಡಲಿ ಕಾಳುಗಳು ಭರ್ತಿ ತುಂಬಿಕೊಂಡು ಪೊಗದಸ್ತಾಗಿ ಹಾಲು ತುಂಬಿಕೊಂಡದ್ದೆ ತಡ ನಸುಕಿನಲ್ಲಿ ಹೊಲದತ್ತ ಹೊರಡುತ್ತಾರೆ. ಸುಲಿಗಾಯಿ ಮಾರಾಟದ ಸೀಜನ್ ಶುರುವಾಗುವುದೇ ತಡ ಇವರದೇ ಆದ ವಿಶಿಷ್ಟ ದಿನಚರಿ ಸುರುವಾಗುತ್ತದೆ. ಸೂರ್ಯ ಇನ್ನು ಭರ್ತಿ ನಿದ್ದೆಯಲ್ಲಿರುವಾಗಲೇ ಅಂದರೆ ನಸುಕಿನ 4 ಅಥವಾ 5ರ ಜಾವಕ್ಕೆ ಎದ್ದವರೇ ಪ್ರಾತರ್ವಿಧಿಗಳನ್ನು ಮುಗಿಸುತ್ತಾರೆ. ಸರಿಯಾಗಿ 4.30ಕ್ಕೆ ನಿಗದಿತ ಚಹಾ ಹೋಟೆಲಿಗೆ ಇವರೆಲ್ಲರಿಗೂ ಲಗ್ಗೆಯಿಟ್ಟು ನಾಸ್ಟಾ, ಚಹಾ ಮುಗಿಸಿ ಮೊದಲೇ ಠರಾಯಿಸಿದ ಟಾಂಗಾ, ಆಟೋರಿಕ್ಷಾ ಏನಾದರೂ ಸರಿ ಹತ್ತಿಬಿಡುತ್ತಾರೆ.

ಹೋರಾಟದ ನಡೆಗೊಂದು ಕಾರ್ಯಪಡೆ

ವಚನವನ್ನು ಬದುಕಿ ತೋರಿಸುವ ಮಹಿಳೆಯರು ನಮ್ಮ ನಡುವೆ ಇವತ್ತಿಗೂ ಇದ್ದಾರೆ ಮತ್ತು ಅಂಥವರು ಯಾವತ್ತಿಗೂ ಇರುತ್ತಾರೆ ಎಂಬುದು ಹೆಮ್ಮೆ ಪಡಬೇಕಾದ ಸಂಗತಿ. ಜನವಾದಿ ಮಹಿಳಾ ಸಂಘಟನೆಯ ಗುಲ್ಬರ್ಗಾ ಜಿಲ್ಲಾ ಸಮಿತಿಯ ಪದಾಧಿಕಾರಿಗಳಲ್ಲೊಬ್ಬರಾದ ಚಂದಮ್ಮ ಎಂಬುವವರು ಈ ಎರಡು ತಿಂಗಳಿಂದ ಕಾಣಿಸಿಕೊಳ್ಳಲೇ ಇಲ್ಲ. ಈ ಅವಧಿಯಲ್ಲಿ ನಡೆದ ಕಾರ್ಯಕ್ರಮ, ಮೀಟಿಂಗ್, ಹೋರಾಟ ಇತ್ಯಾದಿ ಯಾವ ಸಂದರ್ಭದಲ್ಲಿಯೂ ಅವರು ಒದಗಿಬರಲೇ ಇಲ್ಲ. ಸಂಘಟನೆಯ ಶಿಸ್ತು ಮತ್ತು ಬದ್ಧತೆಯನ್ನು ಕಾಪಿಟ್ಟುಕೊಂಡೇ ಬಂದಿರುವ ಇವರು ಇದ್ದಕ್ಕಿದ್ದಂತೆ ಗಾಯಬ್ ಆಗುವುದೆಂದರೆ ನಮ್ಮೆಲ್ಲರಿಗೂ ಆಶ್ಚರ್ಯವಾಯಿತು. ಕೊನೆಗೊಂದು ದಿನ ಅವರ ಮನೆಗೆ ಹೋಗಿ ಘೇರಾವ್ ಹಾಕಿಯೇಬಿಟ್ಟೆವು. ಆಗ ಕಾಯಕಧೀರತೆಯ ಒಂದು ಸಂಪುಟವೇ ತೆರೆದುಕೊಂಡಿತು.

ಉದ್ಯೋಗಗಳೂ 'ಗಾಯಬ್'

ಇತ್ತೀಚೆಗೆ ರಸ್ತೆ ಮತ್ತು ಕಟ್ಟಡ ಕಾಮಗಾರಿಗಳಲ್ಲಿ ಯಂತ್ರಗಳನ್ನು ಹೆಚ್ಚಿನ ಮಟ್ಟದಲ್ಲಿ ಬಳಸುತ್ತಿರುವುದರಿಂದ ನಗರ ಪ್ರದೇಶದ ದುಡಿಯುವ ಮಹಿಳೆಯರು ಕೆಲಸವಿಲ್ಲದೆ ದಯನೀಯ ಸ್ಥಿತಿಯನ್ನು ಎದುರಿಸುತ್ತಿದ್ದಾರೆ. ಆಧುನಿಕ ಯಂತ್ರೋಪಕರಣಗಳ ಬಳಕೆಯಿಂದಾಗಿ ಮನೆಯ ಕೆಲಸಗಳಲ್ಲೂ ಕಡಿತವಾಗುತ್ತಿದೆ. ಹೀಗಾಗಿ ನಗರ ಕೇಂದ್ರಿತ ದುಡಿಯುವ ಮಹಿಳೆಯರು ತೀವ್ರವಾದ ಆರ್ಥಿಕ ಸಂಕಷ್ಟಗಳನ್ನು ಎದುರಿಸುತ್ತಿದ್ದಾರೆ. ಜಾಗತೀಕರಣದ ಹಾವಳಿಯಲ್ಲಿ ವಿಸ್ತರಿಸಿಕೊಂಡಿರುವ ಮುಕ್ತ ಮಾರುಕಟ್ಟೆ ದೇಶೀಯ ಉದ್ಯಮ ಮತ್ತು ಅಲ್ಲಿ ಲಭ್ಯವಾಗುತ್ತಿದ್ದ ಕೆಲಸಗಳನ್ನು ಕಸಿದುಕೊಂಡಿರುವ ಪರಿಣಾಮವಾಗಿಯೇ ಇಂದು ಎಲ್ಲ ವಿಭಾಗದ ಕಾರ್ಮಿಕರು ಕಂಗಾಲಾಗಿದ್ದಾರೆ. ಇದರ ನೇರವಾದ ಬಿಸಿ ನಗರಪ್ರದೇಶದ ಕಾರ್ಮಿಕರಿಗೆ ತಟ್ಟುತಿದ್ದು ಅವರು ಪರ್ಯಾಯ ವ್ಯವಸ್ಥೆಗಾಗಿ ತಡಕಾಡುತ್ತಿದ್ದಾರೆ. ಮುಕ್ತ ಮಾರುಕಟ್ಟೆಯನ್ನು ನಿಯಂತ್ರಿಸಲೂ ಆಗದೆ ಮಾನವ ಸಂಪನ್ಮೂಲ ಅಭಿವೃದ್ಧಿಗಾಗಿ ಪರ್ಯಾಯ ಮಾರ್ಗೋಪಾಯಗಳನ್ನು ನಿರ್ಮಿಸಲು ಆಗದ ಸರಕಾರ ಕೈಕಟ್ಟಿ ಕುಳಿತಿರುವುದು ವಿಪರ್ಯಾಸವೇ ಸರಿ. ಇಂಥ ಅತಂತ್ರ ಸ್ಥಿತಿಯಲ್ಲಿ ಕಾರ್ಮಿಕರು ತಮಗೆ ಕೈ ಎಟುಕಬಹುದಾದ ಪರ್ಯಾಯ ದುಡಿಮೆ ಕ್ಷೇತ್ರಗಳನ್ನು ಗುರುತಿಸಿಕೊಳ್ಳುತ್ತಿರುವುದು ಮೆಚ್ಚಬೇಕಾದ ಸಂಗತಿಯಾದರೂ ಅಂಥವುಗಳ ಸಫಲತೆ ಕುರಿತು ಆತಂಕವಂತೂ ಇದ್ದೇ ಇದೆ.

ಸೀಜನ್ ಮಾರುಕಟ್ಟೆ ಎಂಬ 'ಗಂಜಿ ವ್ಯವಸ್ಥೆ'

ಗುಲ್ಬರ್ಗಾ ನಗರದ ಸ್ಲಂ ಪ್ರದೇಶದಲ್ಲಿರುವ ನೂರಾರು ಮಹಿಳೆಯರು ಸೀಜನ್ ಮಾರುಕಟ್ಟೆಗಳನ್ನು ಹಿಡಿದುಕೊಂಡು ತಮ್ಮ ವರ್ಷದ ಗಂಜಿಗಾಗಿ ಪುಟ್ಟ ವ್ಯವಸ್ಥೆ ಮಾಡಿಕೊಂಡದ್ದು ಹೀಗಿದೆ. ಗುಲ್ಬರ್ಗಾ ಪ್ರದೇಶ ಕಡಲಿ ಮತ್ತು ತೊಗರಿ ಬೆಳೆಗಾಗಿ ಹೆಸರುವಾಸಿಯಾಗಿದೆ. ಈ ಭಾಗದ ಎರೆಮಣ್ಣಿನ ಮಸಾರಿ ಭೂಮಿಯಲ್ಲಿ ತೊಗರಿ, ಕಡಲಿ, ಜೋಳ, ಹೆಸರು, ಉದ್ದುಗಳು ಸೊಕ್ಕಿ ಬೆಳೆಯುತ್ತವೆ. ಎ1 ಕ್ವಾಲಿಟಿಯ ಮಾಲು ಇಲ್ಲಿ ಬೆಳೆಯುತ್ತದೆ. ಅಂತೆಯೇ ಈ ಭಾಗದಲ್ಲಿ ಹಸಿಕಡಲಿಕಾಳುಗಳನ್ನು ಜನರು ತುಂಬಾ ಪ್ರೀತಿಯಿಂದ ತಿನ್ನುತ್ತಾರೆ. ಈಗ ಹತ್ತು ವರ್ಷಗಳ ಹಿಂದೆ ಇಂಥ ಹಸಿ ಕಡಲಿಕಾಯಿಯನ್ನು ಹೊಲವಿದ್ದವರು, ಅದೂ ತಮ್ಮ ಹೊಲದಲ್ಲಿ ಬೆಳೆದಿದ್ದರೆ ಒಂದೆರಡು ದಂಟು (ಎಸಳು) ತಂದು ತಿನ್ನುತ್ತಿದ್ದರು. ಇತ್ತೀಚಿನ ದಿನಗಳಲ್ಲಿ ನಗರದಲ್ಲಿ ಈ ಸುಲಿಗಾಯಿಗೆ ದೊಡ್ಡ ಬೇಡಿಕೆಯಿದೆ. ಏಕೆಂದರೆ ಇದನ್ನು ತಿನ್ನುವವರ ಸಂಖ್ಯೆ ಹೆಚ್ಚಾಗಿದೆ. ನಗರದ ಮಂದಿಗೆ ಸುಲಿಗಾಯಿ ತಿನ್ನುವ ಚಟ ಹಚ್ಚಿದವರೇ ಈ ಸ್ಲಂ ಏರಿಯಾದ ಮಹಿಳೆಯರು ಎಂದರೆ ತಪ್ಪಾಗಲಿಕ್ಕಿಲ್ಲ.

ಮಹಿಳಾ ಟೋಳಿ ಮಾಡಿಕೊಂಡು

ಮಹಿಳಾ ಟೋಳಿ ಮಾಡಿಕೊಂಡು ಬೇರಾವ ಕೆಲಸಗಳು ದೊರೆಯದಿರುವ ಸಂದರ್ಭದಲ್ಲಿ ಈ ಕಾರ್ಮಿಕ ಮಹಿಳೆಯರು ಗುಲ್ಬರ್ಗಾ ಸುತ್ತಲಿನ ಕಡಲಿ ಹೊಲಗಳನ್ನು ಒಂದು ಸಲ ಸರ್ವೆ ಮಾಡಿಕೊಂಡು ಬರುತ್ತಾರೆ. ಹತ್ತು, ಹದಿನೈದು ಅಥವಾ ಇಪ್ಪತ್ತು ಜನರಂತೆ ಒಂದೊಂದು ಟೋಳಿ (ಗುಂಪು) ಮಾಡಿಕೊಂಡು ಇವರೆಲ್ಲ ಒಂದೊಂದು ಕಡಲಿ ಹೊಲವನ್ನು ಅಂದಾಜು ನೋಡಿ ಖರೀದಿಸುತ್ತಾರೆ. ಹೊಲದ ಮಾಲಿಕನಿಗೆ ನೂರಿನ್ನೂರು ರೂಪಾಯಿ ಬಯಾನ (ಮುಂಗಡ ಹಣ) ಕೊಟ್ಟು ಬೆಳೆಯನ್ನು ಖರೀದಿಸುತ್ತಾರೆ. ಕಡಲಿ ಕಾಳುಗಳು ಭರ್ತಿ ತುಂಬಿಕೊಂಡು ಪೊಗದಸ್ತಾಗಿ ಹಾಲು ತುಂಬಿಕೊಂಡದ್ದೆ ತಡ ನಸುಕಿನಲ್ಲಿ ಹೊಲದತ್ತ ಹೊರಡುತ್ತಾರೆ. ಸುಲಿಗಾಯಿ ಮಾರಾಟದ ಸೀಜನ್ ಶುರುವಾಗುವುದೇ ತಡ ಇವರದೇ ಆದ ವಿಶಿಷ್ಟ ದಿನಚರಿ ಸುರುವಾಗುತ್ತದೆ. ಸೂರ್ಯ ಇನ್ನು ಭರ್ತಿ ನಿದ್ದೆಯಲ್ಲಿರುವಾಗಲೇ ಅಂದರೆ ನಸುಕಿನ 4 ಅಥವಾ 5ರ ಜಾವಕ್ಕೆ ಎದ್ದವರೇ ಪ್ರಾತರ್ವಿಧಿಗಳನ್ನು ಮುಗಿಸುತ್ತಾರೆ. ಸರಿಯಾಗಿ 4.30ಕ್ಕೆ ನಿಗದಿತ ಚಹಾ ಹೋಟೆಲಿಗೆ ಇವರೆಲ್ಲರಿಗೂ ಲಗ್ಗೆಯಿಟ್ಟು ನಾಸ್ಟಾ, ಚಹಾ ಮುಗಿಸಿ ಮೊದಲೇ ಠರಾಯಿಸಿದ ಟಾಂಗಾ, ಆಟೋರಿಕ್ಷಾ ಏನಾದರೂ ಸರಿ ಹತ್ತಿಬಿಡುತ್ತಾರೆ. ರಾಜಾಪೂರ, ಕುಸನೂರ, ಕಪನೂರ, ಉಪಳಾಂವ ಹೀಗೆ ಗುಲ್ಬರ್ಗಾದ ಹತ್ತಿಪ್ಪತ್ತು ಹರದಾರಿ ಫಾಸಲೆಯಲ್ಲಿರುವ ಹೊಲಕ್ಕೆ ಹೋಗುತ್ತಾರೆ. ಅಲ್ಲಿ ಟೊಂಕಕ್ಕೆ ಸೆರಗು ಕಟ್ಟಿ ನಿಂತರೆಂದರೆ ಚುಮು ಚುಮು ನಸುಕಿಗೂ ಬೆವರೊಡೆಯಬೇಕು. ಅಷ್ಟು ಸ್ಪೀಡಾಗಿ ಕಡಲಿದಂಟು ಕಿತ್ತು ಕಿತ್ತು ಹಾಕುತ್ತಾರೆ. ಅವರಲ್ಲಿಯೇ ಇಬ್ಬರು ಮಹಿಳೆಯರು ಕಿತ್ತಿರುವ ಬೆಳೆಯನ್ನು ಸೂಡು ಕಟ್ಟುವ, ಹೊರೆ ಬಿಗಿಯುವ ಕೆಲಸ ಮಾಡುತ್ತಾರೆ. ಅಷ್ಟರಲ್ಲಿ ಬಿಡಿ ಮಾರಾಟಗಾರ್ತಿಯರು ದಂಡುದಂಡಾಗಿ ಹೊಲದತ್ತ ಹರಿದುಬರುತ್ತಾರೆ. ಗುತ್ತಿಗೆ ಮಾರಾಟಗಾರರಾಗಿರುವ ಈ ಮಹಿಳೆಯರ ಪೈಕಿ ಒಬ್ಬಳು ಒಂದು ಅಂದಾಜಿನ ಪ್ರಕಾರ ಕಡಲಿ ಹೊರೆಯನ್ನು ಕಟ್ಟಿ ನಿಗದಿತ ಬೆಲೆಗೆ ಬಟಾವಡೆ ಮಾಡುತ್ತಾಳೆ. ಇನ್ನೊಬ್ಬಳು ಗಿರಾಕಿಗಳಿಂದ ದುಡ್ಡು ಪಡೆದುಕೊಳ್ಳುತ್ತಾಳೆ. ಫ್ಯಾಕ್ಟರಿಯೋಪಾದಿಯಲ್ಲಿ ನಡೆಯುವ ಈ ವ್ಯಾಪಾರ ಹತ್ತು ಗಂಟೆ ಬಾರಿಸುವಷ್ಟರಲ್ಲಿ ಮುಗಿಯುತ್ತದೆ. ಬಿಡಿ ಗಿರಾಕಿಗಳು ಮುಗಿಯುತ್ತಿದ್ದಂತೆ ಗುತ್ತಿಗೆದಾರ ಮಹಿಳೆಯರು ತಾವು ಮಾರಾಟ ಮಾಡಲೆಂದು ತಮಗೆಷ್ಟು ಬೆಳೆ ಕಿತ್ತುಕೊಂಡು ಹೊರೆ ಕಟ್ಟಿಕೊಳ್ಳುತ್ತಾರೆ. ಆನಂತರ ಕೈ ಮುಖ ತೊಳೆದುಕೊಂಡು ಮನೆಯಿಂದ ತಂದಿರುವ ಬುತ್ತಿಗಂಟು ಬಿಚ್ಚಿಕೊಂಡು ಅಲ್ಲಿಯೇ ಮುಂಜಾನೆಯ ಊಟ ಮುಗಿಸುತ್ತಾರೆ.

ಮಾರುಕಟ್ಟೆಗೆ

ಆನಂತರ ತಾವು ತೆಗೆದುಕೊಂಡು ಹೋಗಿದ್ದ ಟಾಂಗಾ, ಟಂಟಂಗಳಲ್ಲಿ ಮಾಲನ್ನು ಹೊತ್ತುಕೊಂಡು ಸೂಪರ್ ಮಾರ್ಕೆಟಿಗೆ ಬರುತ್ತಾರೆ. ಅಲ್ಲಿ ಆಯಕಟ್ಟಿನ ಸ್ಥಳದಲ್ಲಿ ಕುಳಿತು ಗಂಟಲು ಬಿರಿಯುವಂತೆ ಸ್ವಯಂ ಜಾಹಿರಾತು ಮಾಡಿ ಸೂರ್ಯ ಮುಳುಗುವಷ್ಟರಲ್ಲಿ ಸುಲಿಗಾಯಿ ಮಾರಿಕೊಳ್ಳುತ್ತಾರೆ. ದಿನಕ್ಕೆ ಏನಿಲ್ಲವೆಂದರೂ ಖರ್ಚು ಹೋಗಿ ತಲಾ 200, 400 ರೂಪಾಯಿಗಳಷ್ಟು ಲಾಭ ಗಿಟ್ಟಿಸಿಕೊಳ್ಳುತ್ತಾರೆ! ಇದರೊಟ್ಟಿಗೆ ಗುತ್ತಿಗೆ ಮಾರಾಟ ಮಾಡಿರುವ ಆದಾಯವೂ ಪ್ರತ್ಯೇಕವಾಗಿ ಸೇರಿಕೊಳ್ಳುತ್ತದೆ. ಹೊಲದಲ್ಲಿ ಬೆಳೆ ಮುಗಿದಂತೆ ಮತ್ತೊಂದು ಹೊಲ, ಇನ್ನೊಂದು ಹೊಸ ಗುತ್ತಿಗೆ ಪಡೆಯುತ್ತಲೇ ಹೋಗಿ ಎರಡು ತಿಂಗಳ ಅವಧಿಯಲ್ಲಿ ಒಂದೊಂದು ಟೋಳಿ (ಗುಂಪು) ಕನಿಷ್ಠವೆಂದರೂ 5 ರಿಂದ 10 ಲಕ್ಷದ ವಹಿವಾಟು ಮಾಡುತ್ತದೆ. ಗುಲ್ಬರ್ಗಾ ನಗರವೊಂದರಲ್ಲೇ ಕೇಂದ್ರೀಕೃತವಾಗಿರುವ ಗುಂಪುಗಳೇ ಈ ಸಲದ ಸೀಜನ್‌ನಲ್ಲಿ ಹತ್ತಿರ ಹತ್ತಿರವೆಂದರೂ ಕೋಟಿಗೂ ಮೀರಿ ವಹಿವಾಟು ಮಾಡಿವೆ. ಉಳಿದ ತಾಲ್ಲೂಕು, ಹೋಬಳಿ ಪ್ರದೇಶದಲ್ಲಿಯೂ ಸುಲಿಗಾಯಿ ಮಾರಾಟಗಾರರು ಇದ್ದಾರೆ. ಈ ದಂಧೆಯಲ್ಲಿ ಮಹಿಳೆಯರೇ ಪ್ರಧಾನವಾಗಿದ್ದು ಒಟ್ಟು ವಹಿವಾಟನ್ನು ತೀರ ಅನಕ್ಷರಸ್ತ ಮಹಿಳೆಯರು ನಿಭಾಯಿಸುತ್ತಿರುವುದೇ ಗಮನಾರ್ಹ. ನಸುಕಿನಲ್ಲಿಯೇ ಮನೆ ಕೆಲಸವೂ ಮುಗಿಸಿ ಮತ್ತೆ ರಾತ್ರಿ ರೊಟ್ಟಿ ತಟ್ಟಲು ಅವರು ಹಾಜರಾಗುತ್ತಿದ್ದದ್ದು ಅವರ ಅಸೀಮ ಶಕ್ತಿಗೆ ದ್ಯೋತಕವಾಗಿದೆ.

ಕಲಿತವರಲ್ಲ.. ಆದರೆ

ಇವರ್ಯಾರೂ ಕಲಿತವರಲ್ಲ. ಬರವಣಿಗೆ ಇವರಿಂದ ಗಜದೂರ. ಆದರೂ ತಮ್ಮ ಸ್ಮೃತಿಯಲ್ಲೆ ಲೆಕ್ಕ ಮಾಡುವ ಪರಿ. ಹೊಲ ಅಳೆಯುವ ರೀತಿ, ಮಾಲಿಗೆ ಬೆಲೆ ನಿಗದಿಪಡಿಸುವ ಅಂದಾಜು. ಹೊಲದ ಮಾಲೀಕನೊಂದಿಗೆ ವ್ಯವಹಾರ ಕುದುರಿಸಿಕೊಳ್ಳುವ ಚಾಣಾಕ್ಷತನ ಇವೆಲ್ಲ ಎಂಥವರಿಗಾದರೂ ದಂಗುಬಡಿಸುತ್ತವೆ. ಮ್ಯಾನೆಜ್‌ಮೆಂಟ್ ಕಾಲೇಜಿನ ವಿದ್ಯಾರ್ಥಿಗಳು ಇವರಿಂದ ಪಾಠ ಹೇಳಿಸಿಕೊಳ್ಳಬೇಕು ಎಂಬಷ್ಟು ವ್ಯವಹಾರ ಕೌಶಲ್ಯ ಅವರ ಬಳಿಯಿದೆ. ಒಂದು ಉದಾಹರಣೆಯನ್ನು ನೋಡುವುದಾದರೆ ಈ ಸಲದ ವಹಿವಾಟಿನಲ್ಲಿ ಒಬ್ಬ ಹೊಲದ ಮಾಲೀಕ ಒಂದು ಗುಂಪಿಗೆ 15,000 ಸಾವಿರಕ್ಕೆ ಹೊಲವನ್ನು ಗುತ್ತಿಗೆ ನೀಡಿದನಂತೆ ಆಮಿಷಕ್ಕೆ ಬಲಿಯಾದ ಆತ ಅದೇ ಹೊಲವನ್ನು ಇನ್ನೊಂದು ಗುಂಪಿಗೆ 20,000 ಸಾವಿರಕ್ಕೆ ವಾಗ್ದಾನ ಮಾಡಿದನಂತೆ. ಮರುದಿನ ಎರಡೂ ಗುಂಪಿನವರು ಬೆಳೆ ಕಿತ್ತಲು ಹೊಲಕ್ಕೆ ಹೋದಾಗಲೇ ಮಾಲೀಕನ ಮೋಸ ಗೊತ್ತಾಗಿದೆ. ಎರಡೂ ಗುಂಪಿನಿಂದ ಮುಂಗಡ ಪಡೆದಿರುವ ಮಾಲೀಕನಾದರೂ ಅನಪಡ್ ಗಮ್ಮಾರರಂತಿರುವ ಈ ಮಹಿಳೆಯರು ಪರಸ್ಪರ ತಮ್ಮಲ್ಲಿಯೇ ಕಚ್ಚಾಡುತ್ತಾರೆ. ತನಗೆ ಮಾತ್ರ ದುಪ್ಪಟ್ಟು ಲಾಭವಾದೀತೆಂದು ನಿರೀಕ್ಷಿಸಿದ್ದಾನೆ. ಆದರೆ ಜನವಾದಿ ಹೋರಾಟದ ಸಂಘಟಿತ ನಡೆಯಲ್ಲಿ ಪಳಗಿದ ಈ ಮಹಿಳೆಯರು ಆತನ ನಿರೀಕ್ಷೆಯನ್ನು ಸುಳ್ಳು ಮಾಡಿದ್ದಾರೆ. ಅವರು ಪರಸ್ಪರ ಒಗ್ಗಟ್ಟಾಗಿ ಬೇ ಇಮಾನ್ ಸೌದಾ ಮಾಡಿದ ಮಾಲೀಕನ ವಿರುದ್ಧ ತಿರುಗಿಬಿದ್ದು ಬುದ್ಧಿ ಕಲಿಸಿದ್ದಾರೆ. ಎರಡೂ ಗುಂಪಿನವರು ತಲಾ ಅರ್ಧ ಅರ್ಧ ಬೆಳೆಯನ್ನು ಹಂಚಿಕೊಂಡು ತಾವು ಪಡೆದುಕೊಂಡಷ್ಟು ಮಾಲಿಗೆ ಹಣಕೊಟ್ಟು ಮಾಲೀಕನಿಗೆ ಚಳ್ಳೆಹಣ್ಣು ತಿನಿಸಿರುವುದಲ್ಲದೆ ಹೀಗೆ ಮೋಸ ಮಾಡಿದ್ದಕ್ಕಾಗಿ ಅವನಿಗೆ ಕೊಡುವ ಹಣದಲ್ಲಿ ಕಡಿತ ಮಾಡಿದ್ದಾರೆ. ಇನ್ನೊಮ್ಮೆ ದುಡಿಯುವ ಬಡವರೊಂದಿಗೆ ಈ ರೀತಿ ವ್ಯವಹರಿಸಲಾಗದಂತೆ ತಾಕೀತು ಮಾಡಿದ್ದಾರೆ. ಇಂಥ ಹತ್ತಾರು ವ್ಯಾವಹಾರಿಕ ಪಟ್ಟುಗಳು ಅವರ ಅನುಭವದ ಕಣಜದಲ್ಲಿವೆ.

ರಾತ್ರಂಬ ರಾತ್ರಿಯನ್ನೂ ಹಗಲು ಮಾಡಿ

ಸೂಪರ್ ಮಾರ್ಕೆಟ್ ಅಥವಾ ಇತರ ಸ್ಥಳಗಳಲ್ಲಿ ಮಾರಾಟ ಮಾಡುವಾಗ ಪೊಲೀಸರ ಕಿರುಕುಳ, ಅಪಾಪೋಲಿ ಗಂಡಸರ ಕಿರುಕುಳ, ಹೊಲದ ಮಾಲೀಕರ ದರ್ಪ ಈ ಮುಂತಾದವುಗಳೊಂದಿಗೆ ಏಗಬೇಕಾದ ಅವರ ಶ್ರಮಶಕ್ತಿ ಸಣ್ಣದಲ್ಲ. ರಾತ್ರಂಬ ರಾತ್ರಿಯನ್ನು ಹಗಲು ಮಾಡಿ ದುಡಿಯುವ ಈ ಕೆಲಸವೂ ಹಗುರವೇನಲ್ಲ. ಕಡಲಿಯ ಹುಳಿಯು ಕೈ ಮೈಗೆಲ್ಲ ಹತ್ತಿ ಶರೀರವೆಂಬ ಶರೀರ ಹುಳತು ಹೋಗಿರುವುದು ಉಂಟು. ನವೆಂಬರ್, ಡಿಸೆಂಬರ್‌ಗಳ ಜವಾನಿ ಚಳಿಯಲ್ಲಿ ಎಳ್ಳಮಾವಸೆಯ ಕಾಳಕತ್ತಲಲ್ಲಿ ಕಡಲಿದಂಟು ಕಿತ್ತುವುದೆಂದರೆ ಅದು ಯಮಯಾತನೆ. ಆದರೂ ಹಿಡಿಯಷ್ಟು ಹಣ ಜಮಾಯಿಸುವ ಉಮೇದು ಅವರಿಂದ ಈ ಕಷ್ಟದ ಕೆಲಸ ಮಾಡಿಸಿದೆ. ಇಂಥ ಗುಂಪಿನ ನಾಯಕಿಯಾಗಿರುವ ಚಂದಮ್ಮ ಎರಡು ತಿಂಗಳ ದಣಿವರಿಯದ ದುಡಿತದಲ್ಲಿ ಕಾಯಕಧೀರತೆಯನ್ನು ಮೆರೆದಿದ್ದಾರೆ. ನಮ್ಮ ಕಾಯಕಜೀವಿ ಮಹಿಳೆಯರ ಕಷ್ಟಮಯ ಪರಿಶ್ರಮದ ಗಾಥೆ ಕೇಳಿದಾಗ ನಮಗೆಲ್ಲ ಅವರಿಗೆ ಪ್ರಣಾಮಗಳನ್ನು ಸಲ್ಲಿಸುವುದು ಮಾತ್ರ ಸಾಧ್ಯವಾಗಿತ್ತು. ಎರಡು ತಿಂಗಳ ಈ ದುಡಿಮೆಯೂ ಜಾಗತೀಕರಣ ವಿರುದ್ಧದ ಹೋರಾಟದ ನಡೆಯಾಗಿಯೇ ತಾತ್ಪೂರ್ತಿಕವಾಗಿ ಕಾಣಿಸಿತ್ತು.

ಜನಶಕ್ತಿ ಕನ್ನಡ ವಾರಪತ್ರಿಕೆ

ಮದ್ರಸಾವೊಂದರ ಬಗ್ಗೆ ಇಲ್ಲಸಲ್ಲದ ಅಪಪ್ರಚಾರ


ಎಸ್.ಹೆಚ್.ಗುಲ್ವಾಡಿ

ಮುಂದಿನ ಒಂದು ತಿಂಗಳೊಳಗಾಗಿ ರಾಜ್ಯದಲ್ಲಿರುವ ಮದ್ರಸಾಗಳನ್ನು ಸರಕಾರವು ಮುಚ್ಚುವ ಪ್ರಯತ್ನ ಮಾಡದೇ ಇದ್ದಲ್ಲಿ ಶ್ರೀ ರಾಮಸೇನೆಯ ಕಾರ್ಯಕರ್ತರು ಆ ಕೆಲಸ ಮಾಡಬೇಕಾದೀತು ಎಂದು ಬೆಂಗಳೂರಿನಲ್ಲಿ ಶ್ರೀರಾಮ ಸೇನೆಯ ಮುಖಂಡ ಪ್ರಮೋದ್ ಮುತಾಲಿಕ್ ಹೇಳಿಕೆ ನೀಡಿದ 20 ದಿನಗಳ ನಂತರ ಇದೀಗ ಹಾಸನದ ಸಂಘ ಪರಿವಾರದ ವ್ಯಕ್ತಿಗಳು ಹಾಸನ ಜಿಲ್ಲೆಯ ಮದ್ರಸಾಗಳನ್ನು ಮುಚ್ಚಿಸಲು ಜಿಲ್ಲಾಡಳಿತಕ್ಕೆ 10 ದಿನದ ಗಡುವು ನೀಡಿರುವುದನ್ನು ಗಮನಿಸಿದರೆ ಸಂಘ ಪರಿವಾರ ಮುಂದಿನ ಚುನಾವಣೆಯ ಪೂರ್ವ ತಯಾರಿಯ ಮತ್ತು ಮೋದಿಯ ಗುಜರಾತ್ ನಿರ್ಮಾಣದ ಪಣ ಈಡೇರಿಸುವ ಕಾರ್ಯಕ್ರಮಗಳ ಮುಂದುವರೆದ ಭಾಗವಾಗಿ ಸಮಾಜದಲ್ಲಿ ಅಶಾಂತಿಯ ವಾತಾವರಣ ನಿರ್ಮಿಸಲು ಸಜ್ಜಾಗುತ್ತಿದೆ.

ಒಳಗೊಳಗೇ ಸಂತೋಷ

ಇತ್ತೀಚೆಗಂತೂ ಯಾವುದೇ ಪುರಾವೆಗಳಿಲ್ಲದೆ ಸಿಒಡಿ ಅಧಿಕಾರಿಗಳು ರಾಜ್ಯಾದ್ಯಂತ ಟೋಪಿ ಧರಿಸಿರುವ, ಗಡ್ಡ ಬಿಟ್ಟಿರುವ ಮತ್ತು ಉರ್ದು ಅಥವಾ ಅರೆಬಿಕ್ ಭಾಷೆಯಲ್ಲಿರುವ ಪ್ರಾರ್ಥನೆಯ ಪುಸ್ತಕಗಳನ್ನು ಕೊಂಡಿರುವ ಮುಸ್ಲಿಂ ಯುವಕರನ್ನು ಬಂಧಿಸುವುದು ಸಂಘ ಪರಿವಾರದವರಿಗೆ ಒಳಗೊಳಗೆ ಸಂತೋಷವಾದರೆ ಹೊರಗಡೆ ಅಶಾಂತಿಗೆ ಕಾರಣವಾಗಿರುವುದಲ್ಲದೆ ಬಿಜೆಪಿಗೆ ಬರಲಿರುವ ವಿಧಾನಸಭಾ ಚುನಾವಣೆಗೆ "ಟಾನಿಕ್" ಆಗಿ ಪರಿಣಮಿಸಿದೆ.

ಬೆಂಗಳೂರಿನಲ್ಲಿ ಬಂಧಿತನಾದ ಯಾಹ್ಯಾಕುಟ್ಟಿಗೆ ಹಾಸನದ ಇಸ್ಲಾಮಿಕ್ ಅರೆಬಿಕ್ ಕಾಲೇಜ್ ಮನ್ಸೂರದ ಪ್ರಾಂಶುಪಾಲರ ಮೊಬೈಲ್‌ನಿಂದ ಕರೆ ಹೋಗಿರುವ ಮತ್ತು ಕರೆ ಸ್ವೀಕರಿಸಿರುವ ಬಗ್ಗೆ ಮಾಹಿತಿ ಕಲೆಹಾಕಲು ಸಿಒಡಿ ಪೊಲೀಸರು ಕಾಲೇಜಿಗೆ ಭೇಟಿ ನೀಡಿದ್ದಲ್ಲದೆ, ಕಾಲೇಜಿನ ಪ್ರಾಂಶುಪಾಲರಾದ ಮುನಾವರ್ ಪಾಷಾರಲ್ಲಿ ಈ ಬಗ್ಗೆ ವಿಚಾರಿಸಿ ಸಮರ್ಪಕ ಉತ್ತರ ಪಡೆದುಕೊಂಡಿದ್ದಾರೆ. ಅಲ್ಲದೆ ಸಿಒಡಿ ಅಧಿಕಾರಿಯು ಒಂದು ಭಾವಚಿತ್ರ ತೋರಿಸಿ ಆತನ ಬಗ್ಗೆ ಏನಾದರೂ ಗೊತ್ತಾ ಎಂದು ಕೇಳಿದ್ದಾರಲ್ಲದೆ ಅಲ್ಲಿರುವ ಹೊರ ರಾಜ್ಯದ, ಹೊರ ಜಿಲ್ಲೆಯ ವಿದ್ಯಾರ್ಥಿ ಗಳಿಗೂ ಫೋಟೋ ತೋರಿಸಿ ವಿಚಾರಿಸಿದ್ದಾರೆ. ಆದರೆ ಪ್ರಾಂಶುಪಾಲರು ಮತ್ತು ವಿದ್ಯಾರ್ಥಿಗಳು ಆ ಭಾವಚಿತ್ರದಲ್ಲಿರುವ ವ್ಯಕ್ತಿಯಾಗಲಿ, ಆ ಬಗ್ಗೆ ಬೇರೆ ಯಾವುದೇ ಮಾಹಿತಿಯಾಗಲಿ ತಮಗೆ ತಿಳಿದಿಲ್ಲ ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಪ್ರಾಂಶುಪಾಲರು ತಾವೇ ಆ ಭಾವಚಿತ್ರದ ಒಂದು ಪ್ರತಿಯನ್ನು ಪಡೆದು ಅಂತಹ ವ್ಯಕ್ತಿಯ ಬಗ್ಗೆ ಮಾಹಿತಿ ಇದ್ದರೆ ಖುದ್ದಾಗಿ ತಿಳಿಸುತ್ತೇನೆ ಎಂದೂ ಹೇಳಿದ್ದಾರಲ್ಲದೆ, ಈ ಬಗ್ಗೆ ಸಂಪೂರ್ಣ ಸಹಕಾರ ನೀಡುವುದಾಗಿ ಭರವಸೆ ನೀಡಿದ ನಂತರ ಸಿಒಡಿ ಅಧಿಕಾರಿಗಳು



ಪ್ರಾಂಶುಪಾಲರ ಬಯೋಡೇಟ ಸಮೇತ ವಾಪಾಸು ಹೊರಟರು.

ಕೇವಲ ಒಬ್ಬ ಸಿಒಡಿ ಅಧಿಕಾರಿ ಅರೇಬಿಕ್ ಕಾಲೇಜಿನ ಪ್ರಾಂಶುಪಾಲರೊಂದಿಗೆ ಫೋಟೋದಲ್ಲಿರುವ ವ್ಯಕ್ತಿಯ ಪರಿಚಯ ಇದೆಯಾ ಎಂದು ಕೇಳಿದ್ದೇ ಇಲ್ಲಿನ ಮಾಧ್ಯಮಗಳಲ್ಲಿ ವರ್ಣರಂಜಿತ ಸುದ್ದಿಯಾಗಲು ಕಾರಣ ವಾಯಿತಲ್ಲದೆ ಇಡೀ ಸಮಾಜ ಈ ಸಂಸ್ಥೆಯನ್ನು ಅನುಮಾನದಿಂದ ನೋಡುವಂತಾಗಿದೆ.

ಮುಸ್ಲಿಮರೆಲ್ಲಾ ಭಯೋತ್ಪಾದಕರು, ಮದರಸಾಗಳೆಲ್ಲಾ ಭಯೋತ್ಪಾದನಾ ಕೇಂದ್ರಗಳು ಎಂದು ಜನರನ್ನು ನಂಬಿಸಲು ಯತ್ನಿಸುತ್ತಿರುವ ಸಂಘ ಪರಿವಾರದ ಪ್ರಯತ್ನ ಮುಗ್ದರಿಗೆ ಎಷ್ಟು ಹಿಂಸೆ ನೀಡಬಹುದು. ಎಂತಹ ಆಂತಕ, ಅಪಮಾನ ಸೃಷ್ಟಿಸಬಹುದು.

ಸಂಘ ಪರಿವಾರವಂತೂ ಕೋಮುಗಲಬೆಗೆ ಆಹಾರ ಸಿಕ್ಕಿದಂತಾಗಿ ಕೂಡಲೇ ಹಾಸನ, ಸಕಲೇಶಪುರ ಮತ್ತು ಆಲೂರಿನಲ್ಲಿ ಪ್ರತಿಭಟನೆ ನಡೆಸಿ ಅಲ್ಪಸಂಖ್ಯಾತರ ವಿರುದ್ಧ ಮತ್ತು ಅರೇಬಿಕ್ ಕಾಲೇಜಿನ ವಿರುದ್ಧ ಸಮರ ಸಾರಿದರಲ್ಲದೆ, ಆಲೂರು ಬಂದ್ ಸಹ ನಡೆದು ಜನಜೀವನ ಅಸ್ತವ್ಯಸ್ತಗೊಳಿಸಿ ಅಲ್ಪಸಂಖ್ಯಾತರಲ್ಲಿ ಭಯ ಹುಟ್ಟುಹಾಕಿದರು. ಈ ಮಧ್ಯೆ ಜಿಲ್ಲಾಕೇಂದ್ರದಲ್ಲಿ ಪತ್ರಿಕಾಗೋಷ್ಠಿ ನಡೆಸಿದ ಸಂಘ ಪರಿವಾರದವರು ಕಾಲೇಜಿನ ಬಗ್ಗೆ ಮತ್ತು ಪ್ರಾಂಶುಪಾಲರ ಬಗ್ಗೆ ಇಲ್ಲಸಲ್ಲದ ಆರೋಪ ಮಾಡಿದ್ದಲ್ಲದೆ ಕಾಲೇಜಿನ ನೆಲಮಾಳಿಗೆಯಲ್ಲಿ ಭಯೋತ್ಪಾದಕ ಚಟುವಟಿಕೆಗೆ ಬೇಕಾಗುವ ಶಸ್ತ್ರಾಸ್ತ್ರಗಳು ಇವೆ ಎಂದು ತಾವೇ ಖುದ್ದಾಗಿ ನೋಡಿ ಬಂದವರಂತೆ ಸುಳ್ಳಿನ ಸರಮಾಲೆಯನ್ನು ಹರಿಯಬಿಟ್ಟರು. ಮುಂದಿನ ಹತ್ತು ದಿನಗಳಲ್ಲಿ ಕಾಲೇಜು ಮುಚ್ಚಿಸದಿದ್ದರೆ ಉಗ್ರ (?) ಹೋರಾಟ ಮಾಡುವುದಾಗಿ ಘೋಷಿಸಿದರು.

ಸಿಪಿಐ(ಎಂ) ನಿಯೋಗ ಭೇಟಿ

ಈ ಹಿಂದಿನ 'ಜನಶಕ್ತಿ' ವಾರಪತ್ರಿಕೆಯಲ್ಲಿ ಪ್ರಕಟವಾದ 'ನೋಟ'ದಲ್ಲಿ ಖ್ಯಾತ ವಿಚಾರವಾದಿ ಡಾ.ಜಿ.ಭಾಸ್ಕರ್ ಮಯ್ಯ ರವರು ಹೇಳಿದಂತೆ ಮಾಧ್ಯಮದಲ್ಲಿ ಪ್ರಕಟವಾಗಬೇಕಾದ ಪ್ರಮುಖ ವಿಷಯಗಳು, ಸುದ್ದಿಯಾಗಬೇಕಾದ ಜನಸಾಮಾನ್ಯರ ಸಮಸ್ಯೆಗಳು, ಪ್ರತಿಭಟನೆಗಳು ಸುದ್ದಿಯಾಗುವುದೇ ಇಲ್ಲ. ಆದರೆ 'ಇಲಿ ಹೋಯಿತು' ಎನ್ನುವ ಸುದ್ದಿ 'ಹುಲಿ ಹೋಯಿತು' ಎನ್ನುವಷ್ಟರ ಮಟ್ಟಿಗೆ ವರ್ಣರಂಜಿತವಾಗಿ ಪ್ರಕಟವಾಗುತ್ತದೆ. ಆದರೆ ಇದರಿಂದಾಗುವ ಪರಿಣಾಮಗಳು ಮಾತ್ರ ಭಯಂಕರ ಎಂದು ಮಾಧ್ಯಮಗಳು ಅರ್ಥೈಸಿಕೊಳ್ಳಬೇಕಾಗಿದೆ.

ಈ ಎಲ್ಲಾ ಮಾಧ್ಯಮಗಳ ವರದಿಗಳೂ ಮತ್ತು ಸಂಘ ಪರಿವಾರದ ಪ್ರತಿಭಟನೆಗಳ ನಡುವೆ 'ಕಣ್ಣಾರೆ ಕಂಡರೂ ಪರಾಂಬರಿಸಿ ನೋಡು" ಎನ್ನುವ ಗಾದೆ ಎಷ್ಟು ಸತ್ಯವೋ ಆ ಸತ್ಯವನ್ನು ಅರಿಯಲು ಸಿಪಿಐ(ಎಂ)ನ ಸ್ಥಳೀಯ ಸಮಿತಿ ಸದಸ್ಯರಾದ ಕಾಂ.ಧರ್ಮೇಶ್, ಕಾಂ.ಮಂಜುನಾಥ್, ಕಾಂ.ಶಾವಲ್ ಹಮೀದ್ ಮತ್ತು ಕಾಂ.ಲಿಂಗರಾಜುರವರು ಇಲ್ಲಿನ ಪ್ರಗತಿಪರ ಸಂಘಟನೆಗಳ ಸದಸ್ಯರೊಂದಿಗೆ ಕಾಲೇಜಿಗೆ ಭೇಟಿ ನೀಡಿ ಕಾಲೇಜಿನ ಸಂಪೂರ್ಣ ಪರಿಸರ ವೀಕ್ಷಿಸಿ [illegible] ಈ ಬಗ್ಗೆ [illegible]

ಪ್ರಾಂಶುಪಾಲರಾದ ಮುನಾವರ್ ಪಾಷಾರವರಲ್ಲಿ ಮಾಧ್ಯಮದಲ್ಲಿ ಪ್ರಕಟವಾಗಿರುವ ವಿಷಯಗಳ ಬಗ್ಗೆ ಮತ್ತು ಸಂಘ ಪರಿವಾರದ ಆರೋಪಗಳ ಬಗ್ಗೆ ವಿಚಾರಿಸಿದಾಗ ಸಾವಧಾನವಾಗಿ ಉತ್ತರಿಸುತ್ತಾ "ಇತ್ತೀಚೆಗೆ ಸಿಒಡಿ ವಿಭಾಗದ ಕೇವಲ ಒಬ್ಬ ಅಧಿಕಾರಿ ಮಾತ್ರ ನನ್ನನ್ನು ಭೇಟಿಯಾಗಿ ದೂರವಾಣಿ ಕರೆ ಬಗ್ಗೆ ಮತ್ತು ಫೋಟೋದ ಬಗ್ಗೆ ವಿಚಾರಿಸಿದ್ದಾರೆ ಅಷ್ಟೆ. ನನ್ನ ಮೊಬೈಲ್‌ಗೆ ಕರೆ ಬಂದಿರುವುದು ಸತ್ಯ. ಇದು ಶಿಕ್ಷಣ ಸಂಸ್ಥೆಯಾಗಿದ್ದು ಸಂಸ್ಥೆಯ ಜಾಹಿರಾತು ನೀಡುವಾಗ ನನ್ನ ಮೊಬೈಲ್ ನಂಬರ್ ನೀಡಲಾಗಿದೆ. ಅಲ್ಲದೆ ಶಾಲೆಯಲ್ಲಿ ಸೀಟು ಕೇಳುವ ಸಲುವಾಗಿ ಹಲವಾರು ಕರೆಗಳು ಬಂದಿರುತ್ತವೆ ಹಾಗೂ ಅದಕ್ಕೆ ಕೆಲವು ಸಂದರ್ಭದಲ್ಲಿ ನಾನೇ ಕರೆ ಮಾಡಿ ಉತ್ತರ ನೀಡಿರುವುದೂ ಉಂಟು. ಸಿಒಡಿ ಪೊಲೀಸರು ಕೇಳಲಾದ ಎಲ್ಲಾ ಪ್ರಶ್ನೆಗಳಿಗೂ ಸಹಕಾರ ನೀಡಿದ್ದೇನೆ. ಮುಂದೆಯೂ ಸಹಕಾರ ನೀಡುತ್ತೇನೆ ಎಂದು ತಿಳಿಸಿದ್ದೇನೆ. ಆದರೆ



ಇಲ್ಲಿ ಎಲ್ಲರಂತೆ ಓದು

ಮಾರನೇ ದಿನಪತ್ರಿಕೆಯಲ್ಲಿ ಸಂಪೂರ್ಣವಾಗಿ ಭಿನ್ನವಾಗಿ ವರದಿ ಪ್ರಕಟಿಸಲ್ಪಟ್ಟಿರುವುದರಿಂದ ನಮ್ಮ ವಿದ್ಯಾಸಂಸ್ಥೆಯನ್ನು ಸಮಾಜ ಅನುಮಾನದಿಂದ ನೋಡುವಂತಾಗಿದೆಯಲ್ಲದೆ ನಮ್ಮ ಸಮುದಾಯಕ್ಕೂ ನೋವಾಗಿದೆ" ಎಂದು ವಿಷಾದದಿಂದ ನುಡಿದರು. ಈ ಸಂಸ್ಥೆ ಉತ್ತಮ ನಾಗರಿಕನಾಗಲು ಎಲ್ಲ ವಿಧ್ಯೆಯನ್ನು ನೀಡುತ್ತಿದೆ. ನಾನು ಮಸ್ಕತ್, ದುಬೈ, ಅಬುದಾಬಿಯಲ್ಲಿ ಕಾರ್ಯ ನಿರ್ವಹಿಸಿ ಬಂದಿದ್ದರೂ ನಮ್ಮ ದೇಶದ ಸಂಸ್ಕೃತಿಯನ್ನು ಜಗತ್ತಿಗೆ ಮಾದರಿಯಾಗಿಸಬೇಕು ಎನ್ನುವುದು ನನ್ನ ವೈಯಕ್ತಿಕ ಗುರಿ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ನೆಲಮಾಳಿಗೆಯಲ್ಲಿ

ಸಂಘ ಪರಿವಾರದವರು ನೆಲಮಾಳಿಗೆಯಲ್ಲಿ ಶಸ್ತ್ರ ಇದೆ ಎನ್ನುವ ಆಪಾದನೆ ಬಗ್ಗೆ ವಿಚಾರಿಸಿದಾಗ ಇಲ್ಲಿರುವ ಸುಮಾರು 235 ವಿದ್ಯಾರ್ಥಿಗಳೂ ಸೇರಿದಂತೆ ಸಿಬ್ಬಂದಿಗಳಿಗಾಗಿ ಸುಮಾರು 20 ಸ್ನಾನಗ್ರಹ 40 ಶೌಚಾಲಯಗಳು ವಿನೂತನವಾಗಿ, ಆಧುನಿಕವಾಗಿ ನೆಲ ಅಂತಸ್ತಿನಲ್ಲಿ ನಿರ್ಮಿಸಲಾಗಿದೆ. ಅಲ್ಲಿ ಕೇವಲ ಪ್ಲಾಸ್ಟಿಕ್ ಬಕೆಟ್, ಟಬ್ ಬಿಟ್ಟರೆ ಬೇರೆ ಏನೂ ಕಾಣಸುವುದಿಲ್ಲ. ಇದರ ಮೇಲ್ಭಾಗದಲ್ಲಿ ಪ್ರಾರ್ಥನೆಗೂ ಮುಂಚೆ 'ವುಝೂ' ಮಾಡುವ ಕಾರ್ಯಕ್ಕೆ ನೂರಾರು ನಲ್ಲಿ ನೀರಿನ ವ್ಯವಸ್ಥೆಯನ್ನು ಸೋಲಾರ್ ವ್ಯವಸ್ಥೆಯೊಂದಿಗೆ ನಿರ್ಮಿಸಿರುವುದು ವಿಶೇಷ.

ಕೇವಲ ವಿದ್ಯಾ ಬೋದನೆ ಮಾಡುತ್ತಿದ್ದ ಈ ಸಂಸ್ಥೆ ಕಳೆದ ತಿಂಗಳು ತನ್ನ ವಿಶಾಲವಾದ ಕ್ಯಾಂಪಸ್‌ನ ಆವರಣದಲ್ಲಿ ಸಂಸ್ಥೆಯ ವಿದ್ಯಾರ್ಥಿಗಳಿಗೆ ಮತ್ತು ಸಾರ್ವಜನಿಕರಿಗೆ ಅನುಕೂಲವಾಗುವಂತೆ ಒಂದು ಆಸ್ಪತ್ರೆಯನ್ನು ತೆರೆದಿತ್ತು. ಇಲ್ಲಿ ಚಿಕಿತ್ಸೆಗಾಗಿ ಬರುವ ರೋಗಿಯಿಂದ ಕೇವಲ ಹತ್ತು ರೂಪಾಯಿಯನ್ನು ಪಡೆಯಲಾಗುತ್ತಿದೆ. ಈ ಕಾರಣದಿಂದಾಗಿ ಆಸ್ಪತ್ರೆ ಉದ್ಘಾಟನೆಗೊಂಡು ಒಂದು ತಿಂಗಳೊಳಗಾಗಿ ಸುತ್ತಮುತ್ತಲಿನ 19 ಹಳ್ಳಿಯ ಸುಮಾರು 1500 ಜನರು ಚಿಕಿತ್ಸೆ ಪಡೆದುಕೊಂಡಿದ್ದು ಆಸ್ಪತ್ರೆಯ ಹೊರ ಮತ್ತು ಒಳರೋಗಿ ವಿಭಾಗದ ದಾಖಲಾತಿ ನೋಡಿದಾಗ 1230ಕ್ಕೂ ಮಿಕ್ಕಿ ಮುಸ್ಲಿಮೇತರರು ಚಿಕಿತ್ಸೆ ಪಡೆದಿರುವುದು ಕಂಡುಬರುತ್ತದೆ.

ಈ ಸಂಸ್ಥೆ ಮೇಲಿರುವ ಆರೋಪದ ಬಗ್ಗೆ ಇಲ್ಲಿನ ಪತ್ರಿಕೆಯವರು ಜಿಲ್ಲಾ ಎಸ್‌ಪಿ

ಪುಟ 12 ಕ್ಕೆ

ಕಾಲೇಜಿನದು ಬಹುಮುಖ ಕೊಡುಗೆ

ಹಾಸನ, ಸಕಲೇಶಪುರ ಹೆದ್ದಾರಿಯ ಆಲೂರಿನಲ್ಲಿ 40 ಎಕರೆ ವಿಸ್ತೀರ್ಣದ ಸುಂದರ ಪರಿಸರದಲ್ಲಿ ಕಳೆದ 25 ವರ್ಷಗಳಿಂದ ಈ ಕಾಲೇಜು ನಡೆಯುತ್ತಿದ್ದು, ಇಲ್ಲಿ ವಿದ್ಯೆ ಪಡೆದ ವಿದ್ಯಾರ್ಥಿಗಳು ಸಮಾಜದ ವಿವಿಧ ಕ್ಷೇತ್ರದಲ್ಲಿ ಗೌರವಯುತವಾಗಿ ಸೇವೆ ಸಲ್ಲಿಸಿರುವ ಬಗ್ಗೆ ದಾಖಲೆಯಿದೆ. ಇದರಲ್ಲಿ ಮುಖ್ಯವಾಗಿ ಇಂಜಿನಿಯರ್‌ಗಳು, ವೈದ್ಯರುಗಳಲ್ಲದೆ ಅನೇಕರು ಉದ್ಯಮಿಗಳೂ ಆಗಿ ಸಮಾಜದ ಮುಖ್ಯವಾಹಿನಿಯಲ್ಲಿ ಗುರುತಿಸಿ ಕೊಂಡಿದ್ದಾರೆ. ಈ ವಿದ್ಯಾಸಂಸ್ಥೆ ವಿದ್ಯಾಭ್ಯಾಸ ವಿಭಾಗದಲ್ಲಿ ತಾಲ್ಲೂಕು ಮತ್ತು ಜಿಲ್ಲಾಮಟ್ಟದ ಹಲವಾರು ಪ್ರಶಸ್ತಿಗಳನ್ನು ಪಡೆದಿದೆಯಲ್ಲದೆ, ಮಕ್ಕಳ ಪ್ರತಿಭೆಯ ವೇದಿಕೆಯಿಂದ ಪ್ರತಿಭಾ ಕಾರಂಜಿಯಲ್ಲಿ ಸಹಾ ಹಲವಾರು ಪ್ರಶಸ್ತಿಗಳನ್ನು ತನ್ನ ಮುಡಿಗೇರಿಸಿಕೊಂಡಿದೆ. ಈ ವಿದ್ಯಾಸಂಸ್ಥೆಯಲ್ಲಿ ಉರ್ದು, ಅರೆಬಿಕ್ ಜೊತೆ ಕನ್ನಡ ಕಡ್ಡಾಯ ಮಾಡಿರುವುದರಿಂದ ಮಧ್ಯಪ್ರದೇಶ ಅಥವಾ ಬಿಹಾರದ ವಿದ್ಯಾರ್ಥಿಗಳು [illegible] ಪ್ರತಿಭಟನೆಗಿಳಿದ ಕರ್ನಾಟಕ ರಕ್ಷಣಾ ವೇದಿಕೆ ಸಂಘಟನೆಯ ಕಾರ್ಯಕರ್ತರು ಒಮ್ಮೆ ಯೋಚಿಸುವುದು ಒಳಿತು.

ಪ್ರಸ್ತುತ 235 ವಿದ್ಯಾರ್ಥಿಗಳು ಇಲ್ಲಿ ವ್ಯಾಸಂಗ ಮಾಡುತ್ತಿದ್ದು ಕೇವಲ 9 ವಿದ್ಯಾರ್ಥಿಗಳು ಮಾತ್ರ ಹೊರರಾಜ್ಯದವರಾಗಿದ್ದಾರೆ. 5ರಿಂದ 10ನೇ ತರಗತಿಯವರೆಗೆ ವಿದ್ಯಾರ್ಜನೆ ನೀಡುತ್ತಿರುವ ಈ ಸಂಸ್ಥೆಯಲ್ಲಿ ರಾಜ್ಯ ಪಠ್ಯಕ್ರಮ (ಕರ್ನಾಟಕ ಸಿಲೆಬಸ್)ದಲ್ಲಿ ಬೋಧನೆ ಮಾಡುತ್ತಿದ್ದು ಸಮಾಜದಲ್ಲಿ ಉತ್ತಮ ನಾಗರಿಕನಾಗಲು ಇಲ್ಲಿನ ವಿದ್ಯಾರ್ಥಿಗಳಿಗೆ ಎಲ್ಲಾ ವಿದ್ಯೆಯನ್ನು ನೀಡುತ್ತಿದೆಯಲ್ಲದೆ, ಈ ವರ್ಷದ ಗಣರಾಜ್ಯೋತ್ಸವ ಸಮಾರಂಭದಲ್ಲಿ ಪ್ರದರ್ಶಿಸಿದ 'ಗಾಂಧಿ ಮರಳಿ ಬಂದರು' ಎನ್ನುವ ನಾಟಕ ಸಾರ್ವಜನಿಕರಿಂದ ಶಿಕ್ಷಣ ಸಂಸ್ಥೆಗಳಿಂದ, ಶಿಕ್ಷಣಾಧಿಕಾರಿಗಳಿಂದ ಮುಕ್ತ ಪ್ರಶಂಸೆಗೆ ಪಾತ್ರವಾಗಿದೆಯಲ್ಲದೆ ಕ್ರೀಡಾಕೂಟದಲ್ಲೂ ಹಲವಾರು ಜಿಲ್ಲಾಮಟ್ಟದ ಪ್ರಶಸ್ತಿಗಳನ್ನು ತನ್ನದಾಗಿಸಿಕೊಂಡು ಸಂಸ್ಥೆಯ ಹಿರಿಮೆ [illegible]ಸಿಕೊಂಡಿರುವ ಬಗ್ಗೆ [illegible]ಲೆಗಳು ಇಲ್ಲಿ ಕಾಣಸಿಗುತ್ತವೆ.

ಕನ್ನಡಿ



ಕೆ.ಎಸ್.ವಿಮಲ

ಕುಟುಂಬಗಳೊಳಗೆ ಮಹಿಳೆಯ ಮೇಲೆ ನಡೆಯುವ ದೌರ್ಜನ್ಯಗಳ ವಿರುದ್ಧ ರಕ್ಷಣೆ ನೀಡುವ ಕಾಯ್ದೆಯಲ್ಲೇನಿದೆ?

'ಬಾರೇ' ಅಂದರೂ ದೌರ್ಜನ್ಯವಂತೆ ಹೌದೆ?

ಭಾಗ 2

ಕೌಟುಂಬಿಕ ದೌರ್ಜನ್ಯ ವಿರೋಧಿ ಕಾನೂನಿನ ಒಳಗೇನಿದೆ?

ಈ ಕಾನೂನು ಹಿಂಸೆಯನ್ನು ಕೇವಲ ಕಣ್ಣಿಗೆ ಕಾಣುವ ಗಾಯ, ಗುರುತುಗಳಿಂದ ಗುರುತಿಸದೇ, ಮಾನಸಿಕವಾಗಿ ಅನುಭವಿಸುವ ಕಿರಿಕಿರಿಗಳನ್ನು ಗುರುತರ ಹಿಂಸೆಯೆಂದು ಪರಿಗಣಿಸುತ್ತದೆ. ಹೊಡೆತ ಮಾತ್ರ ಹಿಂಸೆಯಲ್ಲ, ಬೈಗಳೂ ಹಿಂಸೆಯ ಭಾಗವೇ. ಹಾಗೆಯೇ ಹೆಂಡತಿಯೆಂದ ಮಾತ್ರಕ್ಕೆ ಗಂಡನ ಕಾಮತೃಷೆ ತಣಿಸುವ ಲೈಂಗಿಕ ಗೊಂಬೆ ಎಂದು ಭಾವಿಸಿದರೆ ಅದೂ ಹಿಂಸೆಯೇ ಎಂದು ವ್ಯಾಖ್ಯಾನಿಸಿದೆ.

ಈ ಕಾನೂನು ಪ್ರತಿವಾದಿಯ ಜೊತೆ ಗಂಡ-ಹೆಂಡತಿಯು ಅಥವಾ ಕೌಟುಂಬಿಕ ಸಂಬಂಧದಲ್ಲಿ ಬದುಕಿದ ಬದುಕುತ್ತಿರುವ ಯಾವುದೇ ಮಹಿಳೆ ದೌರ್ಜನ್ಯ ಕ್ಕೊಳಗಾದಾಗ ನೆರವಿಗೆ ಬರುತ್ತದೆ.

ಈ ಕಾನೂನಿನಡಿ ಮಹಿಳೆಯರಿಗೆ ಮಾತ್ರವೇ ದೂರು ದಾಖಲಿಸಲು ಅವಕಾಶವಿದೆ.

ಕುಟುಂಬದ ಯಾವುದೇ ವಯಸ್ಕ ಪುರುಷ ಅಥವಾ ಆತನ ಸಂಬಂಧಿಗಳು(ಮಹಿಳೆಯರು ಸೇರಿದಂತೆ) ಈ ದೂರಿನ ವ್ಯಾಪ್ತಿಗೆ ಸೇರಬಹುದು.

ಕಾನೂನು ಕೊಡುವ ಇತರ ಸೌಲಭ್ಯಗಳು:

ತೊಂದರೆಗೊಳಗಾದ ಮಹಿಳೆಗೆ ಸಹಾಯ ನೀಡಲು

1) ರಕ್ಷಣಾಧಿಕಾರಿ
2) ಸೇವಾಕರ್ತರು
3) ಪೋಲೀಸ್ ಅಧಿಕಾರಿ
4) ಜ್ಯುಡಿಷಿಯಲ್ ಮ್ಯಾಜಿಸ್ಟ್ರೇಟ್ ಅಥವಾ ಪ್ರಥಮ ದರ್ಜೆ ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್

ದೂರು ದಾಖಲಿಸುವ ವಿಧಾನ

ರಕ್ಷಣಾಧಿಕಾರಿ ಅಥವಾ ಸೇವಾಕರ್ತರಿಗೆ ದೂರವಾಣಿ ಮುಖಾಂತರ ಹೀಗೆ ಯಾವುದೇ ಮುಖಾಂತರವೂ ಸುದ್ದಿ ಮುಟ್ಟಿಸಬಹುದು ಅಥವಾ ವಿಷಯ ತಿಳಿದ ಯಾರೂ ಕೂಡ ದೂರು ನೀಡಬಹುದು. ಹಾಗೆ ದೂರು ನೀಡಿದವರ ಮೇಲೆ ಯಾವುದೇ ಬಾಧ್ಯತೆಗಳನ್ನು ಹೊರಿಸಲಾಗುವುದಿಲ್ಲ. ಇಂತಹ ಪ್ರಕರಣದ ದೂರನ್ನು ಸ್ವೀಕರಿಸಿದ ತಕ್ಷಣ-ಪೋಲೀಸ್ ಅಧಿಕಾರಿ, ರಕ್ಷಣಾ ಅಧಿಕಾರಿ, ಸೇವಾಕರ್ತ, ಅಥವಾ ಮ್ಯಾಜಿಸ್ಟ್ರೇಟ್, ದೌರ್ಜನ್ಯಕ್ಕೊಳಗಾದ ಮಹಿಳೆಗೆ ಅವಳಿಗೆ ಈ ಕಾನೂನಿನಡಿಯಲ್ಲಿ ಇರುವ ರಕ್ಷಣಾ ಆದೇಶ, ಆರ್ಥಿಕಪರಿಹಾರ, ಕಸ್ಟಡಿ ಆದೇಶ, ವಾಸದ ಹಕ್ಕು ಪರಿಹಾರದ ಆದೇಶ ಮುಂತಾದ ಹಕ್ಕುಅಧಿಕಾರದ ಮಾಹಿತಿ ನೀಡಬೇಕು.

ಸೇವಾಕರ್ತ ಮತ್ತು ರಕ್ಷಣಾ ಅಧಿಕಾರಿಯ ಸಹಕಾರವಿರುವುದನ್ನು ತಿಳಿಸಬೇಕು.

ಈ ಕಾನೂನಿನಡಿಯಲ್ಲಿ ಸಿಗುವ ಪರಿಹಾರಗಳು:

1 ರಕ್ಷಣಾ ಆದೇಶ:

ಪ್ರತಿವಾದಿಯು 1. ಹಿಂಸೆ ಮಾಡದಂತೆ ತಡೆಯುವ,

2. ಹಿಂಸೆಗೆ ಸಹಾಯ ಮಾಡದಂತೆ ತಡೆಯುವ

3. ಮಹಿಳೆಯರು ಉದ್ಯೋಗ ಮಾಡುವ ಸ್ಥಳಕ್ಕೆ ಅಥವಾ ಮಗುವಿನ ಶಾಲೆಗೆ ಪ್ರವೇಶಿಸದಂತೆ ತಡೆಯುವ

4. ಅವಳ ಅಥವಾ ಅವರಿಬ್ಬರ ಜಂಟಿ ಹೆಸರಿನಲ್ಲಿರುವ ಆಸ್ತಿಯನ್ನು ಕಾಪಾಡುವ ಆದೇಶಗಳನ್ನೂ ನೀಡುತ್ತದೆ.

2. ವಾಸದ ಹಕ್ಕು:

ಮದುವೆಯಾಗಿ ಅಥವಾ ಆ ಸಂಬಂಧದಲ್ಲಿ ವಾಸಿಸಿದ್ದ ಮನೆಯಲ್ಲಿ ವಾಸಿಸುವುದು. ತೊಂದರೆ ಕೊಡುವ ವ್ಯಕ್ತಿಯನ್ನು ಮನೆಯಿಂದ ಹೊರ ಹಾಕುವುದು, ಆ ವ್ಯಕ್ತಿಗೆ ಅಥವಾ ಅವನ ಸಂಬಂಧಿಗಳಿಗೆ ಮಹಿಳೆ ವಾಸಿಸುವ ಭಾಗಕ್ಕೆ ಕಾಲಿಡದಂತೆ ತಡೆಯುವುದು

ಮಹಿಳೆಗೆ ಅಗತ್ಯವಿರುವ ವಾಸದ ಪರ್ಯಾಯ ಸ್ಥಳವನ್ನು ಹುಡುಕಿಕೊಡುವಂತೆ, ಬಾಡಿಗೆ ಮನೆ ಮಾಡಿಕೊಡುವಂತೆ ಆದೇಶ

3. ಆರ್ಥಿಕ ಪರಿಹಾರ: ದೌರ್ಜನ್ಯಕ್ಕೊಳಗಾದ ಮಹಿಳೆಗೆ

ಆದ ಖರ್ಚು-ವೆಚ್ಚ
ಆದ ನಷ್ಟ
ವೈದ್ಯಕೀಯ ವೆಚ್ಚ
ಆಸ್ತಿ ನಷ್ಟ

ಅವಳು ಮತ್ತು ಅವಳ ಮಕ್ಕಳಿಗೆ ಜೀವನಾಂಶ-(ಪ್ರತಿವಾದಿಯ ಮಾಲಿಕರಿಗೆ ತೊಂದರೆಗೊಳಗಾದ ಮಹಿಳೆಗೆ ನೇರವಾಗಿ ನ್ಯಾಯಾಲಯ ನಿಗದಿಪಡಿಸಿದ ಹಣ ಸಂದಾಯ ಮಾಡುವಂತೆ ಅಥವಾ ನ್ಯಾಯಾಲಯದಲ್ಲಿ ಠೇವಣಿ ಇಡುವಂತೆ ಆದೇಶಿಸಬಹುದು.

ನ್ಯಾಯಾಲಯವು -ಪ್ರಕರಣವು ಕಾಯ್ದಿರಿಸಲ್ಪಟ್ಟಂತೆಯೇ

ಮಕ್ಕಳ ಸುಪರ್ದಿಯನ್ನು ಮಹಿಳೆಗೆ ನೀಡಿ ಆದೇಶಿಸಬಹುದು ಮಕ್ಕಳ ಹಿತಕ್ಕೆ ಮಾರಕವಾಗುವುದಾದಲ್ಲಿ ಪ್ರತಿವಾದಿಯು ಅವರನ್ನು ಭೇಟಿ ಮಾಡದಂತೆ ತಡೆಯುವ ಆದೇಶ ನೀಡಬಹುದು.

ಉಳಿದ ಪರಿಹಾರಗಳ ಆದೇಶ ಕಾಯ್ದಿರಿಸಿರುವಾಗಲೇ ಕೌಟುಂಬಿಕ ದೌರ್ಜನ್ಯದ ಕಾರಣದಿಂದ ಉಂಟಾದ, ನಷ್ಟ, ಗಾಯ, ಮಾನಸಿಕ ಹಿಂಸೆ, ಭಾವನಾತ್ಮಕ ಪ್ರಕ್ಷುಬ್ಧತೆಗಳಿಗೆ ಪರಿಹಾರ ನೀಡುವಂತೆ ಆದೇಶಿಸಬಹುದು.

ಇವುಗಳ ಜೊತೆ ದೌರ್ಜನ್ಯ ಮುಂದುವರೆಯದಂತೆ ತಡೆಯುವ ಭಾಗವಾಗಿ

1. ಅವಳ ಕೆಲಸದ/ವಾಸದ ಸ್ಥಳದಿಂದ ದೂರವಿರುವಂತೆ ಆದೇಶಿಸುವುದು

2. ಅವಳನ್ನು ಭೇಟಿಯಾಗದಂತೆ ನಿರ್ಬಂಧಿಸುವುದು

3. ದೂರವಾಣಿ, ಪತ್ರ ಇ-ಮೇಲ್ ಇತ್ಯಾದಿಗಳ ಮೂಲಕ ಸಂಪರ್ಕಿಸದಂತೆ ನಿರ್ದೇಶಿಸುವುದು

4. ಮದುವೆಗೆ ಸಂಬಂಧಿಸಿದಂತಹ ಯಾವುದೇ ಪ್ರಸ್ತಾಪ ಮಾಡದಂತೆ ಆದೇಶ

5. ಮಕ್ಕಳು ಇರುವ ಯಾವುದೇ ಸ್ಥಳಕ್ಕೆ ಪ್ರವೇಶಿಸದಂತೆ ನಿರ್ಬಂಧಿಸುವುದು

6. ಅವರ/(ಪ್ರತಿವಾದಿ) ಬಳಿ ಇರಬಹುದಾದ ಯಾವುದೇ ಶಸ್ತ್ರಾಸ್ತ್ರಗಳನ್ನು ಒಪ್ಪಿಸುವಂತೆ ಮತ್ತು ಮುಂದೆ ಖರೀದಿಸಲಾರದಂತೆ ನಿರ್ದೇಶಿಸುವುದು.

7. ಈ ಹಿಂದೆ ದೌರ್ಜನ್ಯಕ್ಕೆ ಪ್ರೇರೇಪಣೆ ನೀಡಿರಬಹುದಾದ ಕುಡಿತ ಮತ್ತಿತರ ವ್ಯಸನದ ಔಷಧಗಳನ್ನು ಸೇವಿಸದಂತೆ ಆದೇಶಿಸುವುದು.

8. ಮತ್ತು ಮಹಿಳೆಯ ಹಾಗೂ ಅವಳ ಮಕ್ಕಳ ಸುರಕ್ಷತೆಗೆ ಭಂಗ ತರುವ ಯಾವುದೇ ಕ್ರಿಯೆ ಎಸಗದಂತೆ ವಿಶೇಷ ಆದೇಶಗಳನ್ನು ನ್ಯಾಯಾಲಯ ಹೊರಡಿಸಬಹುದು.

ದೂರು ಪರಿಹಾರ ಮಾಡುವ ನ್ಯಾಯಾಲಯ ಯಾವುದು?

-ದೌರ್ಜನ್ಯಕ್ಕೊಳಗಾದ ಮಹಿಳೆ- ಸಾಮಾನ್ಯವಾಗಿ ಅಥವಾ ತಾತ್ಕಾಲಿಕವಾಗಿ ವಾಸಿಸುವ, ಉದ್ಯೋಗ ಮಾಡುವ ಅಥವಾ ಉದ್ಯಮದಲ್ಲಿ ತೊಡಗಿರುವ ಸ್ಥಳ.

-ಪ್ರತಿವಾದಿ ವಾಸಿಸುವ, ಉದ್ಯೋಗ ಮಾಡುವ, ವ್ಯಾಪಾರ ವ್ಯವಹಾರ ಮಾಡುವ ಸ್ಥಳ.

-ಹಿಂಸೆ ನಡೆದ ಜಾಗ -ಹೀಗೆ ಈ ಯಾವುದೇ ಪ್ರದೇಶದ ವ್ಯಾಪ್ತಿಗೆ ಬರುವ ಜ್ಯೂಡಿಷಿಯಲ್ ಮ್ಯಾಜಿಸ್ಟ್ರೇಟ್ ನ್ಯಾಯಾಲಯ ಅಥವಾ ಪ್ರಥಮ ದರ್ಜೆ/ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್ ಕೋರ್ಟಿಗೆ ಆದೇಶ ನೀಡುವ ಅಧಿಕಾರವಿದೆ.

- ತೊಂದರೆಗೊಳಗಾದ ವ್ಯಕ್ತಿ, ರಕ್ಷಣಾ ಅಧಿಕಾರಿ ಅಥವಾ ಅವರ ಪರವಾಗಿ ಯಾರೂ ಕೂಡ ದೂರು ದಾಖಲಿಸಬಹುದು.

-ದೂರು ಸ್ವೀಕರಿಸಿದ 3 ದಿನಗಳೊಳಗೆ ಮ್ಯಾಜಿಸ್ಟ್ರೇಟ್‌ರವರು ಪ್ರತಿವಾದಿಗೆ ಮೊದಲ ಹೇಳಿಕೆ (ಹಿಯರಿಂಗ್) ಗೆ ಕರೆ ನೀಡಬೇಕು.

-ತುರ್ತು ಸಂದರ್ಭದಲ್ಲಿ ಏಕ ಪಕ್ಷೀಯ ಆದೇಶ ನೀಡಲು ಅವಕಾಶವಿದೆ.

- ಹೇಳಿಕೆಯ ಕರೆಯ ಆದೇಶವು ಪ್ರತಿವಾದಿಗೆ 2 ದಿನಗಳೊಳಗೆ ಕಡ್ಡಾಯವಾಗಿ ತಲುಪಲೇ ಬೇಕು.

-ಮ್ಯಾಜಿಸ್ಟ್ರೇಟ್‌ರವರು ಶಿಕ್ಷಣಾ ಅಧಿಕಾರಿ ಅಥವಾ ಸೇವಾಕರ್ತರಿಗೆ ಕೌಟುಂಬಿಕ ಘಟನೆ ವರದಿ (Domesticincident report-DIR) ನೀಡುವಂತೆ ಆದೇಶಿಸಬಹುದು. ಏಕಪಕ್ಷೀಯ ಆದೇಶಕ್ಕೆ ಈ ವರದಿಯನ್ನು ಬಳಸಬಹುದು.

-ಪ್ರಕರಣದ ಯಾವುದೇ ಹಂತದಲ್ಲಿ ಮಧ್ಯಸ್ಥಿಕೆಗೆ/ (counciling) -ಆದೇಶಿಸಬಹುದು. (ಇಬ್ಬರಿಗೂ ಅಥವಾ ಅಗತ್ಯ ಎನಿಸಿದ ಒಬ್ಬರಿಗಾದರೂ)

-ಯಾವುದೇ ಹಂತದಲ್ಲಿಯೂ ಯಾವುದೇ ಮಹಿಳಾ ಪರ ತಜ್ಞರ (ಮಹಿಳೆಯರಿಗೆ ಆದ್ಯತೆ) ಸಹಕಾರ ಪಡೆಯಬಹುದು.

-ಮ್ಯಾಜಿಸ್ಟ್ರೇಟರು ಅಥವಾ ಸಂಬಂಧಪಟ್ಟ ವ್ಯಕ್ತಿಗಳು ಬಯಸಿದಲ್ಲಿ ವಿಚಾರಣೆಯನ್ನು ಕ್ಯಾಮೆರಾದಲ್ಲಿ ದಾಖಲಿಸಬಹುದು. (ಆದರೆ ತೆರೆದ ನ್ಯಾಯಾಲಯದಲ್ಲಲ್ಲ)

-ನ್ಯಾಯದ ಹೆಜ್ಜೆಗಳು ಎಷ್ಟು ಶೀಘ್ರ?

-ದೂರು ದಾಖಲಿಸಿದ ತಕ್ಷಣ ಮಧ್ಯಂತರ ಪರಿಹಾರ (ತುರ್ತಿನ ಸಂದರ್ಭದಲ್ಲಿ)

-ಪ್ರತಿವಾದಿಗೆ ಸೂಚನೆ ಕಳಿಸಿ-ಅವನಿಂದ ಹೇಳಿಕೆ ಪಡೆದ ತಕ್ಷಣ ಮಧ್ಯಂತರ ಪರಿಹಾರ (ಎರಡು ದಿನಗಳ ಕಾಲಾವಕಾಶದಲ್ಲಿ)

- ಪ್ರಕರಣ ದಾಖಲಾದ 60 ದಿನಗಳೊಳಗೆ ಅಂತಿಮ ಆದೇಶ ಹೊರಬೀಳುವುದರೊಂದಿಗೆ ಮುಕ್ತಾಯ ವಾಗಬೇಕು.

ಸರ್ಕಾರದ ಪಾತ್ರ :

ಇದು ಒಂದು ಮಹಿಳೆಯರಿಗೆ ಸಕಾಲದಲ್ಲಿ ನೆರವಿಗೆ ಬರಬಹುದಾದ ಕಾನೂನು: ಸರ್ಕಾರಗಳು ಇದರ ಪರಿಣಾಮಕಾರಿ ಜಾರಿಗೆ ಗಂಭೀರ ಕ್ರಮ ವಹಿಸಬೇಕೆನ್ನುವ ಆಗ್ರಹವೂ ಇದರಲ್ಲಿದೆ. ಜಿಲ್ಲಾ ಮಟ್ಟ ಅಥವಾ ಅಗತ್ಯವಿರುವ ಭೌಗೋಳಿಕ ವ್ಯಾಪ್ತಿಯಲ್ಲಿ ರಕ್ಷಣಾ ಅಧಿಕಾರಿಗಳನ್ನು ನೇಮಿಸುವ ಕರ್ತವ್ಯ ರಾಜ್ಯ ಸರ್ಕಾರದ್ದಾಗುತ್ತದೆ. ಹಾಗೆ ನೇಮಿಸಲ್ಪಟ್ಟ ಅಧಿಕಾರಿಗಳು ಕರ್ತವ್ಯ ಲೋಪ ಎಸಗಿದಲ್ಲಿ ಒಂದು ವರ್ಷದವರೆಗಿನ ಜೈಲು ವಾಸ ಅಥವಾ 20,000 ದಂಡ ಅಥವಾ ಎರಡು ವರ್ಷ ಶಿಕ್ಷೆ ವಿಧಿಸುವ ಅವಕಾಶವಿದೆ. ಅಲ್ಲದೇ ಪ್ರತಿವಾದಿಯು ನ್ಯಾಯಾಲಯದ ಆದೇಶವನ್ನು ಧಿಕ್ಕರಿಸಿದಲ್ಲಿ ಅವರಿಗೂ ಕೂಡ ಈ ಶಿಕ್ಷೆ ಅನ್ವಯವಾಗುತ್ತದೆ.

ಕರ್ನಾಟಕ ರಾಜ್ಯದಲ್ಲಿ ಈ ಕಾನೂನು ಜಾರಿಯಾಗಿದ್ದು, ಸಮಗ್ರ ಶಿಶು ಅಭಿವೃದ್ಧಿ ಯೋಜನೆ (ಐ.ಸಿ.ಡಿ.ಎಸ್)ಯ ಯೋಜನಾ ಅಧಿಕಾರಿಗಳು ರಕ್ಷಣಾ ಅಧಿಕಾರಿಗಳಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಜಿಲ್ಲೆಗಳಲ್ಲಿ ಅವರನ್ನು ಸಂಪರ್ಕಿಸುವ ಮೂಲಕ ಕಾನೂನಿನ ಪ್ರಯೋಜನ ಪಡೆಯಬಹುದು.

ಈ ಎಲ್ಲ ಮಾಹಿತಿಗಳ ನಂತರ ಕೊನೆಯ ಸಾಲಿನ ಟಿಪ್ಪಣಿ-ಬಹಳ ಪರಿಶ್ರಮದಿಂದ ಬಂದ ಈ ಕಾನೂನು ಮಹಿಳೆಯರ ಮೇಲಿನ ದೌರ್ಜನ್ಯಕ್ಕೆ ತಡೆಯಾಗಿ ಒಂದು ದಿನ ದೌರ್ಜನ್ಯ ರಹಿತ ವಿಶ್ವದ ನಿರ್ಮಾಣಕ್ಕೆ ಸಹಕಾರಿಯಾಗುವಂತಾಗಬೇಕು. ಜಾರಿಗೆ ಒಂದು ವರ್ಷವಾಗುವುದರೊಳಗೆ ಕಾನೂನಿನ ಪುನರ್ ವಿಮರ್ಶೆ ಮಾಡುವ ಪ್ರಸ್ತಾಪ ಅಲ್ಲಲ್ಲಿ ಕೇಳಿ ಬಂದಿದೆ. ಪ್ರಪಂಚ ಮಹಿಳೆಯರ ರೋಧನಕ್ಕೆ ಬಹಳ ಕಾಲ ಕಿವುಡೇ ಇದ್ದರೂ ಈಗ ಮೈಯೆಲ್ಲ ಕಣ್ಣಾಗಿ-ಸಹಸ್ರಾಕ್ಷಿಯಾಗಿ ಕಾವಲಿದೆ. ಒಂದು ಸಣ್ಣ ತಪ್ಪು ಯೋಚನೆಯೂ ಕನ್ನಡಿಯೊಳಗೆ ಒಡಕಲು ಬಿಂಬಕ್ಕೆಡೆ ಮಾಡಿಬಿಡಬಹುದು. ಹಾಗಾಗದಿರಲಿ.

ಮದ್ರಸಾದ ಬಗ್ಗೆ ಅಪಪ್ರಚಾರ....

ಪುಟ 6 ರಿಂದ

ಶರತ್ ಚಂದ್ರರವರನ್ನು ಮಾತನಾಡಿಸಿದಾಗ [illegible] ಕರೆಗೆ ಸಂಬಂಧಪಟ್ಟಂತೆ ಸಿಒಡಿ [illegible] ಕಾಲೇಜಿನ ಪ್ರಾಂಶುಪಾಲರಿಂದ [illegible] ಕಾಲೇಜಿನಲ್ಲಿ ಯಾವುದೇ [illegible] ನಡೆಯುತ್ತಿರುವ ಬಗ್ಗೆ ಮಾಹಿತಿ ಇಲ್ಲ. ಮಾಧ್ಯಮಗಳ ವರದಿಗಳು ನಿರಾಧಾರ ಎಂದೂ ತಿಳಿಸಿದರು.

ಕರ್ನಾಟಕದಲ್ಲಿ ಭಯೋತ್ಪಾದನೆ ನೆಪದಲ್ಲಿ ಮಾಧ್ಯಮಗಳು ಮುಸ್ಲಿಂ ಸಮುದಾಯವನ್ನು ಅವಮಾನಿಸುವ ಪ್ರಕ್ರಿಯೆ ನಿರಂತರವಾಗಿ ನಡೆಯುತ್ತಿದೆ.

ಆರೋಪಿಗಳ ಬಗ್ಗೆ ಸಾಕ್ಷಿಯೂ ದೊರೆತು ಅವು ಸಾಬೀತಾದರೆ ಅದನ್ನು ಬಹಿರಂಗಪಡಿಸುವುದು ಸಂಬಂಧಪಟ್ಟ ಅಧಿಕಾರಿಗಳ ಕರ್ತವ್ಯ. ಆದರೆ ಅದನ್ನು ಬಿಟ್ಟು ಅಮಾಯಕರನ್ನು ಬಂಧಿಸಿ ಅವರ ಮೇಲೆ ಆರೋಪ ಹೊರಿಸಿ ಮಾಧ್ಯಮಗಳ ಮೂಲಕ ಅವಮಾನಪಡಿಸುವುದು ಎಷ್ಟು ಸರಿ? ಮತ್ತು ಯಾವ ಸಂಘಟನೆಗಳನ್ನು ಸಂತೋಷಪಡಿಸಲಿಕ್ಕಾಗಿ ಎನ್ನುವುದನ್ನು ಮಾಧ್ಯಮದವರೇ ತಿಳಿಸಬೇಕು.

ಇಷ್ಟೆಲ್ಲಾ ಘಟನೆಗಳು ನಡೆದರೂ ಸರಕಾರ ಮಾತ್ರ "ಜಾಣ ಕುರುಡ, ಕಿವುಡ, ಮೂಗ" ಎನ್ನುವ ಮೂರು ಪಾತ್ರಗಳನ್ನು ಏಕಕಾಲದಲ್ಲಿ ಮಾಡುತ್ತಿದ್ದು ಕರ್ನಾಟಕವೂ ಮೋದಿಯ ಗುಜರಾತ್ ಆಗುವುದನ್ನು ತಡೆಗಟ್ಟಲು ರಾಜ್ಯದ ಪ್ರಗತಿಪರರು, ಜಾತ್ಯಾತೀತ ಶಕ್ತಿಗಳು ಪ್ರಜಾಸತ್ತಾತ್ಮಕ ಚಳುವಳಿಯನ್ನು ಬಲಿಷ್ಠಗೊಳಿಸಿ ಜನಜಾಗೃತಿ ಮೂಡಿಸಿ ಕೋಮುವಾದಿಗಳ ವಿರುದ್ಧ ಒಗ್ಗಟ್ಟು ಪ್ರದರ್ಶನ ಮಾಡುವ ತುರ್ತು ಅಗತ್ಯದ ಬಗ್ಗೆ ಗಮನಹರಿಸಬೇಕಾಗಿದೆ.

ಅಧಿಕಾರಿಗಳ ಬಾಯಿಗೆ ಬೆಣ್ಣೆ - ನೌಕರರ ಕಣ್ಣಿಗೆ ಸುಣ್ಣ

6ನೇ ವೇತನ ಆಯೋಗದ ಶಿಫಾರಸ್ಸು

ಕರ್ನಾಟಕದ ಮಂಡ್ಯ ಜಿಲ್ಲೆಯವರಾಗಿರುವ ಜಸ್ಟಿಸ್ ಶ್ರೀ ಕೃಷ್ಣ ಅವರ ಅಧ್ಯಕ್ಷತೆಯ ಕೇಂದ್ರ ಸರ್ಕಾರಿ ನೌಕರರ ವೇತನ ಪರಿಷ್ಕರಣೆಗಾಗಿ ನೇಮಕವಾಗಿದ್ದ 6ನೇ ವೇತನ ಆಯೋಗದ ವರದಿಯನ್ನು 24-03-2008ರಂದು ಕೇಂದ್ರ ಹಣಕಾಸು ಮಂತ್ರಿ ಪಿ.ಚಿದಂಬರಂ ಅವರಿಗೆ ಸಲ್ಲಿಸಲಾಗಿದೆ. ಈ ವೇತನ ಆಯೋಗದ ಶಿಫಾರಸ್ಸುಗಳು ನೌಕರರ ನಿರೀಕ್ಷೆಗಳನ್ನು ಹುಸಿಗೊಳಿಸಿದೆ. ಏಕೆಂದರೇ ಗ್ರೂಪ್ 'ಡಿ' ಹುದ್ದೆಗಳನ್ನು ಬಹುತೇಕ ರದ್ದುಗೊಳಿಸಿ ಗುತ್ತಿಗೆ ಆಧಾರದಲ್ಲಿ ನೇಮಕ ಮಾಡಿಕೊಳ್ಳಲು ಹೇಳಲಾಗಿದೆ. ಅಷ್ಟೇ ಅಲ್ಲ ಕನಿಷ್ಠ ವೇತನವನ್ನು ರೂ.4,440ಕ್ಕೆ ಮಿತಿಗೊಳಿಸಿದ್ದೂ, ವಾಸ್ತವದಲ್ಲಿ ಅನುಕಂಪ ಆಧಾರಿತವಾಗಿ ನೇಮಕವಾಗುವ ಗ್ರೂಪ್ 'ಡಿ' ನೌಕರನ ವೇತನ ಏರಿಕೆಯೇ ಆಗಲಿಲ್ಲ. ಒಟ್ಟಾರೆ ಶೇ.40 ವೇತನ ಹೆಚ್ಚಳವಾಗಿದೆ ಎಂದು ಎಲ್ಲ ಪತ್ರಿಕೆ/ಟಿವಿಗಳಲ್ಲಿ ಅಬ್ಬರದಲ್ಲಿ ಪ್ರಚಾರ ಮಾಡಿರುವುದು, ವಾಸ್ತವವಾಗಿ ಶೇ.28 ಕ್ಕೂ ಕಡಿಮೆಯೇ ಆಗಿದೆ. ಕಳೆದ 5ನೇ ವೇತನ ಆಯೋಗದ ನಂತರ ಹೆಚ್ಚಳವಾಗಿದ್ದು ಶೇ.40. ಈಗ 10 ವರ್ಷಗಳ ನಂತರ ಶೇ.28 ಮಾತ್ರ. ಇಂಕ್ರಿಮೆಂಟ್ ದರ ಕಡಿಮೆ ಆಗುತ್ತೆ, ಹೀಗೆ ಇನ್ನು ಹತ್ತು ಹಲವು ಅಂಶಗಳಿವೆ.

ಮತ್ತೊಂದೆಡೆ ಐಎಎಸ್ ಅಧಿಕಾರಿಗಳಿಗೆ ಈಗಿನ ರೂ.30,000 ರಿಂದ ರೂ.90,000 ಮಾಸಿಕ ಮೂಲ ವೇತನವಾಗಿ ಏರಿಸಲಾಗಿದೆ ಮತ್ತು ಈ ಹಿಂದೆ ಅತ್ಯಂತ ಕಡಿಮೆ ಸಂಬಳಕ್ಕೂ ಅತ್ಯಂತ ಹೆಚ್ಚು ವೇತನ ನಡುವಿನ ವ್ಯತ್ಯಾಸ 1:12 ಇದ್ದದ್ದು ಈಗ 1:18ಕ್ಕೆ ಏರಿದೆ. ಅಧಿಕಾರಿಗಳ ವೇತನದ ಭಾರಿ ಹೆಚ್ಚಳವನ್ನು ಖಾಸಗೀ ರಂಗದಲ್ಲಿ ಹಾಗೂ ಸಾರ್ವಜನಿಕ ರಂಗದ ಕೈಗಾರಿಕೆಗಳಲ್ಲಿರುವ ವೇತನಗಳನ್ನು ಗಮನದಲ್ಲಿ ಇರಿಸಿಕೊಂಡು ಮಾಡಬೇಕಾಯಿತೆಂದು ಹೇಳಲಾಗಿದೆ.

ಈ ಹಿಂದಿನ 5ನೇ ವೇತನ ಆಯೋಗದ ಶಿಫಾರಸ್ಸುಗಳ ಜಾರಿಯಿಂದಾಗಿ ವಾರ್ಷಿಕ ರೂ.12,000 ಕೋಟಿ ವೆಚ್ಚ ಆಗುತ್ತಿತ್ತು. ಆದರೇ ಈ ಬಾರಿಯ ವೇತನ ಹೆಚ್ಚಳದಿಂದ ರೂ.7,975 ಕೋಟಿ (ಅದರಲ್ಲೂ ಅಧಿಕಾರಿಗಳಿಗೆ ಸಿಂಹಪಾಲು) ಮಾತ್ರ ಖರ್ಚಾಗುತ್ತದೆ. ಇದರಿಂದ ಸ್ಪಷ್ಟವಾಗಿ ವೇತನ ಹೆಚ್ಚಳದ ಮಾಯಾಜಾಲ ಏನೆಂಬುದು ಮೇಲ್ನೋಟಕ್ಕೆ ಗೊತ್ತಾಗುತ್ತದೆ.

ಜಾಗತೀಕರಣದ ಯುಗದಲ್ಲಿ 'ಎಂತಹ' ವರದಿ ನೀಡಬೇಕೋ ಅದನ್ನೇ ನೀಡಿದೆ ಆಯೋಗ. ನೌಕರರಿಗೆ ನೆಪ ಮಾತ್ರದ ವೇತನ ಏರಿಕೆ, ಐಎಎಸ್ ಅಧಿಕಾರಿಗಳಿಗೆ ಮೂರು ಪಟ್ಟು ವೇತನ 'ಹೇರಿಕೆ'!!!

ವೇತನ ಆಯೋಗವು ಭಾರತ ಕಾರ್ಮಿಕ ಸಮ್ಮೇಳನ 15ನೇ ಅಧಿವೇಶನದ ತೀರ್ಮಾನದಂತೆ ರೂ.10,000 ಕನಿಷ್ಠ ವೇತನವಾಗಿ ನಿಗದಿಗೊಳಿಸಲು ನೌಕರರ ಸಂಘಗಳು ಸವಿವರವಾಗಿ ಮನವಿ ಮಾಡಿದ್ದರು.. ಹೋಗಲಿ ಹಿಂದಿನ 5ನೇ ವೇತನ ಆಯೋಗವು 10 ವರ್ಷಗಳ ಒಟ್ಟು ರಾಷ್ಟ್ರೀಯ ನಿವ್ವಳ ಬೆಳವಣಿಗೆಯ ಶೇಕಡಾವಾರು ಆಧಾರವಾಗಿ ನಿಗದಿಪಡಿಸಿದಂತೆ ಕನಿಷ್ಠ ನಿಗದಿ ಮಾಡಬೇಕಾದರೂ ರೂ.7,404/- ಕನಿಷ್ಠ ಮಾಡಬೇಕಿತ್ತು. ಆದರೇ ಶ್ರೀ ಕೃಷ್ಣ ಆಯೋಗವು ಯಾವುದೇ ಆಧಾರಗಳನ್ನು ಪರಿಗಣಿಸದೇ ಊಹಾತ್ಮಕವಾಗಿ ವೇತನವನ್ನು ರೂ.5,740/- ಎಂದು ವೇತನ ಶ್ರೇಣಿ ನಿಗದಿಮಾಡಿದೆ. ವೇತನ ಸ್ಥಗಿತತೆಯನ್ನು ನಿಯಂತ್ರಿಸುವ ದಿಶೆಯಲ್ಲಿ ಶೇಕಡಾವಾರು ಭಡ್ತಿ ದರ (ಇಂಕ್ರಿಮೆಂಟ್) ಮೂಲಕ 24 ವರ್ಷಗಳಿಗೂ ಮೀರಿ ಮುಂದುವರೆದರೂ ಅಳವಡಿಸಿಕೊಳ್ಳಬಹುದಾಗಿ ಹೇಳಲಾಗಿದೆ. ಅಲ್ಲದೇ ಈ ವೇತನ ಭಡ್ತಿ ದರ ಮಾದರಿಯ ಮತ್ತೊಂದು ಉದ್ದೇಶವು ಬಡ್ತಿಗಳನ್ನು ಕಡಿತಗೊಳಿಸುವ ಸಲುವಾಗಿ ಮಾಡಲಾಗಿದೆ ಎಂದು ಒತ್ತಿ ಹೇಳಿದ್ದಾರೆ. ಶೇಕಡಾವಾರು ಭಡ್ತಿದರ 2.5 ಎಂದು ಶಿಫಾರಸ್ಸು ಮಾಡಲಾಗಿದೆ. ಅಂದರೇ ಈಗಾಗಲೇ ನಿಗದಿತ ಹಣದ ಬಡ್ತಿ ದರಕ್ಕಿಂತ ಕಡಿಮೆ ಆಗುವಂತಹ ಪರಿಸ್ಥಿತಿ ಅಥವಾ ಯಥಾ ಸ್ಥಿತಿಯನ್ನಷ್ಟೇ ಮುಂದುವರಿಸಿ ವೇತನ ಹೆಚ್ಚಳ ಎಂಬುದು ಮರಿಚಿಕೆ ಎಂಬಂತೆ ಮಾಡಲು ಪ್ರಯತ್ನಿಸಲಾಗಿದೆ.

ಇದುವರೆಗೆ ಇದ್ದ ರಾಷ್ಟ್ರೀಯ ಹಬ್ಬಗಳಿಗಾಗಿ ಸರ್ಕಾರಿ ರಜಾದಿನಗಳನ್ನು 18ರಿಂದ ಕೇವಲ 3 ದಿನಗಳಿಗೆ ಇಳಿಸಲು ಶಿಫಾರಸ್ಸು ಮಾಡಲಾಗಿದೆ. ಅವುಗಳೇಂದರೆ 1. ಜನವರಿ 26, 2. ಆಗಸ್ಟ್ 15 ಹಾಗೂ 3. ಅಕ್ಟೋಬರ್ 2 ಮಾತ್ರ.

ದೇಶದಲ್ಲಿ ಮತ್ತು ಜಗತ್ತಿನಲ್ಲೇ ಅತ್ಯಂತ ಹೆಚ್ಚು ನೌಕರರನ್ನು ಹೊಂದಿರುವ ಭಾರತೀಯ ರೈಲ್ವೆಯನ್ನು ಕಂಪನಿಯಾಗಿ ಮಾಡಲು ಶಿಫಾರಸ್ಸು ಮಾಡಲಾಗಿದೆ. ಇದರಿಂದಾಗಿ ಕ್ರಮೇಣ ರೈಲ್ವೆ ದರಗಳ ನಿಗದಿ ನಿಯಂತ್ರಣವನ್ನು ಸರ್ಕಾರದ ಜವಾಬ್ದಾರಿಯಿಂದ ತಪ್ಪಿಸುವುದು. ಅಷ್ಟೇ ಅಲ್ಲ ಕ್ರಮೇಣ ಖಾಸಗೀಕರಿಸುವ ಹುನ್ನಾರ ಇದರಲ್ಲಿ ಒಳಗೊಂಡಿದೆ.

ನೌಕರರಿಗೆ ಬೋನಸ್ಸು ನೀಡುವುದನ್ನು ನಿಲ್ಲಿಸಲು ಹಾಗೂ ಅದರ ಬದಲಾಗಿ ಕಾರ್ಯಕ್ಷಮತೆಯ ಆಧಾರದ ವೇತನ ಎಂದು ಶಿಫಾರಸ್ಸು ಮಾಡಲಾಗಿದೆ. ಅಷ್ಟೇ ಅಲ್ಲ ಹೆಚ್ಚುವರಿ ಕೆಲಸ (ಓ.ಟಿ.) ವನ್ನು ರದ್ದುಗೊಳಿಸಿ ಕಾರ್ಯಕ್ಷಮತೆಯ ವೇತನದ ಹೆಸರಲ್ಲಿ ಪಡೆಯಲು ಸೂಚಿಸಲಾಗಿದೆ.

ಹೊಸ ನಿವೃತ್ತಿ ವೇತನ ಯೋಜನೆ ಈಗಾಗಲೇ 1-4-2004ರಿಂದ ನೇಮಕವಾಗುವ ನೌಕರರಿಗೆ ಅನ್ವಯಗೊಳಿಸಲಾಗಿದ್ದೂ ಅದನ್ನು ಹಾಲಿ ನೌಕರರಿಗೂ ಜಾರಿಗೊಳಿಸಲು ಅಗತ್ಯ ಶಿಫಾರಸ್ಸು ನೀಡಲು ಸರ್ಕಾರ ಕೇಳಿತ್ತು. ಆದರೆ ನೌಕರರ ನಿರಂತರ ಹೋರಾಟ ಹಾಗೂ ಎಡಪಕ್ಷಗಳ ಒತ್ತಾಯದ ಕಾರಣ ಹೊಸ ನಿವೃತ್ತಿ ವೇತನ ಯೋಜನೆ ಕಾನೂನಾಗಿ ಮಾಡಲಾಗಿರದ ಕಾರಣ ಈ ವಿಷಯದಲ್ಲಿ ಏನನ್ನೂ ಹೇಳಿಲ್ಲ.

ಆದರೆ ನಿವೃತ್ತಿ ವೇತನ ಪೂರ್ಣವಾಗಿ ಪಡೆಯಲು 33 ವರ್ಷ ಸೇವೆ ಸಲ್ಲಿಸಿರಬೇಕೆಂಬ ಷರತ್ತನ್ನು ಬದಲಾಯಿಸಿ 20 ವರ್ಷ ಸೇವೆ ಸಲ್ಲಿಸಿದವರಿಗೆ ಪೂರ್ಣ ನಿವೃತ್ತಿ ವೇತನ ಪಡೆಯಲು ಅರ್ಹರೆಂದು ಹೇಳಿರುವುದು ಪರೋಕ್ಷವಾಗಿ ಹಾಲಿ ನೌಕರರನ್ನು ಸರ್ಕಾರಿ ಕೆಲಸದಿಂದ ಹೊರ ಹೋಗಲು ಪ್ರೋತ್ಸಾಹಿಸುವ ದುರುದ್ದೇಶವೂ ಒಳಗೊಂಡಿದೆ.

ಬೆಲೆ ಏರಿಕೆಗೆ ಅನುಗುಣವಾಗಿ ಶೇ.50 ತುಟ್ಟಿ ಭತ್ಯೆ ಹಂತ ತಲುಪಿದಾಗ ಮೂಲ ವೇತನದಲ್ಲಿ ಸೇರ್ಪಡೆ ಮಾಡಲು ಹಿಂದಿನಂತೆ ಜಾರಿಯಲ್ಲಿರುವುದನ್ನು ಸ್ಥಗಿತಗೊಳಿಸಲು ಸೂಚಿಸಲಾಗಿದೆ. ಬದಲಾಗಿ ಭತ್ಯೆಗಳಲ್ಲಿ ಶೇ.25 ಏರಿಕೆಯನ್ನು ಶೇ.50 ತುಟ್ಟಿಭತ್ಯೆ ಆದಾಗ ಮಾಡಲು ಶಿಫಾರಸ್ಸು ಮಾಡಲಾಗಿದೆ.

ಮಹಿಳಾ ನೌಕರರಿಗೆ ಈಗಿನ ಹೆರಿಗೆ ರಜೆಯನ್ನು 120 ದಿನಗಳಿಂದ 180 ದಿನಗಳಿಗೆ ಏರಿಸಲಾಗಿರುವುದು ಸ್ವಾಗತಾರ್ಹವಾಗಿದೆ. ನಗರ ಪರಿಹಾರ ಭತ್ಯೆ ರದ್ದುಗೊಳಿಸಲಾಗಿದೆ. ಅದರ ಬದಲಾಗಿ ಸಾರಿಗೆ ಭತ್ಯೆ 4 ಪಟ್ಟು ಹೆಚ್ಚಿಸಲು ಹಾಗೂ ಶಿಕ್ಷಣ ಭತ್ಯೆಯನ್ನು ಒಂದು ಮಗುವಿಗೆ ರೂ.1,000 ಮಾಸಿಕ ಪಾವತಿಸಲು ಶಿಫಾರಸ್ಸು ಮಾಡಲಾಗಿದೆ.

ಆಯೋಗವು ತನ್ನ ಕಾರ್ಯನಿರ್ವಹಣೆ ಯ ಬಗ್ಗೆ ಹೆಗ್ಗಳಿಕೆ ಮಾಡಿಕೊಳ್ಳುತ್ತಾ 48 ಸಿಬ್ಬಂದಿ ನೀಡಿದ್ದರೂ ಕೇವಲ 17 ಸಿಬ್ಬಂದಿ ಮಾತ್ರ ನೇಮಕ ಮಾಡಿಕೊಂಡಿರುವುದಾಗಿ ಹಾಗೂ ಯಾವುದೇ ಒಬ್ಬ ಗ್ರೂಪ್ ಡಿ ನೌಕರರನ್ನು ನೇಮಕ ಮಾಡಿಕೊಂಡಿಲ್ಲವೆಂದು ಹೇಳಿದೆ. ಆದರೆ ಇದೇ ಮೊದಲ ಬಾರಿಗೆ ವೇತನ ಆಯೋಗ ತನ್ನ ಬಹುತೇಕ ಕೆಲಸಗಳನ್ನು, ಅಧ್ಯಯನ ಮಾಡುವ ಕೆಲಸಗಳನ್ನು ಹೊರ ಗುತ್ತಿಗೆ ನೀಡಲಾಗಿತ್ತೆಂಬುದನ್ನು ಮರೆಮಾಚಿದಂತೆ ಕಾಣುತ್ತದೆ.

ಒಟ್ಟಾರೆ ವೇತನ ಆಯೋಗದ ಶಿಫಾರಸ್ಸುಗಳ ಈಗಿರುವ 35ರ ವೇತನ ಶ್ರೇಣಿಗಳ ಬದಲಾಗಿ 20 ವೇತನ ಶ್ರೇಣಿಗಳನ್ನು ಮಾಡಿ ನೌಕರರ ಶೇ.80ರಷ್ಟು ಇರುವ ಡಿ, ಸಿ, ಬಿ, ಎ ನೌಕರರಿಗೆ ನಾಮಕಾವಸ್ತೆ ಹೆಚ್ಚಳ ಮಾಡಿ ಕೇವಲ ಶೇ.20 ರಷ್ಟಿರುವ ಮೇಲಾಧಿಕಾರಿಗಳಿಗೆ ಮಾತ್ರ ಸುಖದ ಸುಪ್ಪತ್ತಿಗೆ ನೀಡುವ ಸಾರಾಂಶವಾಗಿದೆ. ಆದ್ದರಿಂದಲೇ ಕೇಂದ್ರ ಸರ್ಕಾರಿ ನೌಕರರ ಸಂಘಟನೆಗಳು ದಿನಾಂಕ 26-03-2008ರಂದು ದೇಶವ್ಯಾಪಿ ಸಾಂಕೇತಿಕ ಪ್ರತಿಭಟನೆ ಮಾಡಿರುವುದು ನ್ಯಾಯಸಮ್ಮತವಾಗಿದೆ. ಆದ್ದರಿಂದ ಕೇಂದ್ರ ಸರ್ಕಾರವು ವೇತನ ಆಯೋಗದ ಶಿಫಾರಸ್ಸುಗಳನ್ನು ನೌಕರರ ಸಂಘಗಳೊಂದಿಗೆ ಸಮಾಲೋಚಿಸಿ ಸಮಗ್ರ ಬದಲಾವಣೆಗಳನ್ನು ಮಾಡಿ ಉತ್ತಮ ವೇತನ ಹೆಚ್ಚಳ ಮಾಡುವ ಮೂಲಕ ಜೀವನ ಮಟ್ಟ ಕಾಪಾಡುವಂತೆ ಕ್ರಮ ವಹಿಸಲು ಸಿಐಟಿಯು ಒತ್ತಾಯಿಸಿದೆ.

☐ ಎಸ್.ಪ್ರಸನ್ನಕುಮಾರ್



ಬದುಕನ್ನೇ ಮಾರುಕಟ್ಟೆಗೆ ತಂದಿಟ್ಟು ಬಿಕರಿಗಿಟ್ಟವರು

ಅಮೆರಿಕದ ಸಾಮ್ರಾಜ್ಯಶಾಹಿ ಜಗತ್ತಿನ ಆರ್ಥಿಕದ ಮೇಲೆ ತನ್ನ ಹಿಡಿತವನ್ನು ಸಾಧಿಸುವ ಸಾಹಸದಲ್ಲಿ ಸದಾ ತೊಡಗಿರುತ್ತದೆ. ಅದು ಪ್ರಚುರಪಡಿಸುವ ಮಾರುಕಟ್ಟೆ ಆರ್ಥಿಕತೆ ಜಗತ್ತಿನಾದ್ಯಂತ ಇರಬೇಕೆಂದು ಅದರ ಹುನ್ನಾರ. ಈ ಹುನ್ನಾರದಡಿ ಇಡೀ ಜಗತ್ತಿನ ಆರ್ಥಿಕವನ್ನು ತಾನು ಕೊಂಡುಕೊಳ್ಳುವ ತರಾತುರಿ ಇದೆ.

ಲಾಭ ಮಾಡುವ ಹಪಾಹಪಿಯಲ್ಲಿ ಕೆಟ್ಟ ಸಾಲಗಳನ್ನು ನೀಡಿದ ಅಮೆರಿಕದ ಕಂಪನಿಗಳು ಈ ಕೆಟ್ಟ ಸಾಲದ ಸುಳಿಯಲ್ಲೇ ಮುಳುಗತೊಡಗಿದವು. ಸಬ್‌ಪ್ರೈಮ್ ಸಾಲಗಳ ಈ ಸುಳಿಯಲ್ಲಿ ಸಿಲುಕಿ ಮಾರುಕಟ್ಟೆ ಆರ್ಥಿಕದ ಜಗತ್ತನ್ನೇ ಆರ್ಥಿಕದ ಹಿಂಜರಿತನದ ಸುಳಿಯಲ್ಲಿ ಅದು ಸಿಲುಕಿಸಿದೆ.

ಅಮೆರಿಕದ ಫೆಡರಲ್ ರಿಸರ್ವ್‌ನ ಗವರ್ನರ್ (ಮುಖ್ಯಸ್ಥ) ಬೆನ್ ಬರ್ನಂಕೆ ಈಗ ಈ ಸುಳಿಯಿಂದ ಅಮೆರಿಕವನ್ನು ಹೊರತರಲು ಎಲ್ಲ ತರಹದ ಸರ್ಕಸ್ಸನ್ನೂ ಮಾಡುತ್ತಿದ್ದಾನೆ. ಬಡ್ಡಿ ದರಗಳನ್ನು ತೀವ್ರವಾಗಿ ಕಡಿತಗೊಳಿಸಿರುವ ಈತ ಈ ಕೆಟ್ಟ ಸಾಲಗಳು ಮರುಪಾವತಿಯಾಗಲಿ ಎಂದು ಹಾರೈಸುತ್ತಿದ್ದಾನೆ. ಆದರೆ ಜೂಜಿನಂತೆ ನಡೆದಿರುವ ಈ ಕೆಟ್ಟ ಸಾಲಗಳ ಮಾರಾಟ ಎಷ್ಟು ಹದಗೆಟ್ಟಿದೆಯೆಂದರೆ ಬಡ್ಡಿ ಕಡಿಮೆ ಮಾಡಿದರೂ ಮರು ಪಾವತಿಯಾಗುವ ಸಾಧ್ಯತೆಗಳು ಕಾಣುತ್ತಿಲ್ಲ.

ಈಗ ಕೆಲವರು ಈ ಕೆಟ್ಟ ಸಾಲಗಳನ್ನೇ ಮಾರುಕಟ್ಟೆಯಲ್ಲಿಟ್ಟು ಮಾರಾಟ ಮಾಡಬೇಕೆಂದು ಹೇಳತೊಡಗಿದ್ದಾರೆ. ಈ ಕೆಟ್ಟ ಸಾಲಗಳನ್ನು ಕೊಳ್ಳುವ ಕಂಪನಿಗಳು ಏನಾಗಬೇಕು?

ಜಾಗತೀಕರಣ ಉದಾರೀಕರಣದ ಹೆಸರಿನಲ್ಲಿ ತನ್ನೆಲ್ಲ ಬಿಕ್ಕಟ್ಟುಗಳನ್ನು ಬಡ ರಾಷ್ಟ್ರಗಳಿಗೆ ರಫ್ತು ಮಾಡುವ ಅಮೆರಿಕ ಕೆಟ್ಟ ಸಾಲಗಳಿಗೂ ಮಾರುಕಟ್ಟೆ ಹುಡುಕುವ ಮಾತು ಆಶ್ಚರ್ಯವಲ್ಲ.

ಆದರೆ ಅಮೆರಿಕದ ಆರ್ಥಿಕತದ ಮೇಲೆ ಅವಲಂಬಿಸಿರುವ (ಅಥವಾ ಸಂಬಂಧವಿರಿಸಿ ಕೊಂಡಿರುವ) ಎಲ್ಲ ದೇಶಗಳಿಗೆ ತನ್ನ ಬಿಕ್ಕಟ್ಟನ್ನು ರವಾನಿಸುತ್ತದೆ. ಇಂದು ಚೀನಾ ಮತ್ತು ಭಾರತ ಅಮೆರಿಕಕ್ಕೆ ಹೆಚ್ಚು ರಫ್ತು ಮಾಡುವ ದೇಶಗಳಾಗಿವೆ. ಅಮೆರಿಕದಲ್ಲಿ ಹಿಂಜರಿತವೆಂದರೆ ಚೀನಾ ಮತ್ತು ಭಾರತಗಳ ರಫ್ತಿಗೆ ಬೇಡಿಕೆ ಕಡಿಮೆಯಾಗುತ್ತದೆ. ಹೀಗೆ ರಫ್ತಿಗೆ ಬೇಡಿಕೆ ಕಡಿಮೆಯಾದರೆ ಈ ಆರ್ಥಿಕಗಳು ಕಷ್ಟದಲ್ಲಿ ಬೀಳುತ್ತವೆ. ಅಮೆರಿಕದ ಆರ್ಥಿಕ ಹಿಂಜರಿತದ ಪರಿಣಾಮಗಳು ಈ ದೇಶಗಳ ಮೇಲೆ ಆಗುತ್ತವೆ. ಈಗಾಗಲೇ ಅಮೆರಿಕದಲ್ಲಿ 63,000 ಉದ್ಯೋಗಗಳನ್ನು ಕಡಿತಗೊಳಿಸಲಾಗಿರುವ ಸುದ್ದಿ ಬಂದಿದೆ. ಹೀಗೆಯೇ ಭಾರತದ ಕಂಪನಿಗಳಾದ ಟಾಟಾ ಕನ್ಸಲ್ಟಿಂಗ್ ಸರ್ವಿಸಸ್ ಇತ್ಯಾದಿಗಳು ಉದ್ಯೋಗ ಕಡಿತದ ಸೂಚನೆಗಳನ್ನು ನೀಡುತ್ತಿವೆ. ಉದ್ಯೋಗ ಕಡಿತವಿಲ್ಲದೆ ಇದ್ದಲ್ಲಿ ಸಂಬಳ ಕಡಿತದ ಸೂಚನೆಗಳಿವೆ. ಈ ಕಡಿತದ ಲಕ್ಷಣಗಳೂ ಹೀಗೆ ಮುಂದುವರೆದರೆ ಭಾರತದ ಜನರೂ ಆರ್ಥಿಕ ಹಿಂಜರಿತವನ್ನು ಅನುಭವಿಸಬೇಕಾಗುತ್ತದೆ. ಬೆಲೆ ಏರಿಕೆಯ ಭೂತ ಭಾರತದ ಜನತೆಯನ್ನು ಈಗಾಗಲೇ ಕಾಡುತ್ತಿದೆ. ಆಹಾರ ಪದಾರ್ಥಗಳ ಬೆಲೆ ಯದ್ವಾತದ್ವಾ ಏರುತ್ತಿದೆ. ಭಾರತದ ಕೇಂದ್ರ ಸರ್ಕಾರದ ಆರ್ಥಿಕ ಮಂತ್ರಿ ಚಿದಂಬರಂ ಮಹಾಶಯ ರೈತರ ಸಾಲ ಮನ್ನಾ ಮಾಡಿರುವ ತನ್ನ ಸಾಹಸದ ಮಾತುಗಳನ್ನೇ ಆಡುತ್ತಿದ್ದಾರೆ. ಬೆಲೆಯೇರಿಕೆಯ ತಡೆಗೆ ಏನೇನೂ ಮಾಡದ ಸರ್ಕಾರ ಈಗ ಉದ್ಯೋಗ ಕಡಿತಗಳಾದರೆ ಜನತೆಗೆ ಎಂತಹ ಸಾಂತ್ವನ ನೀಡಬಲ್ಲದು? ಮಾರುಕಟ್ಟೆ ಆರ್ಥಿಕ ಈಗ ಜನರ ಬದುಕನ್ನೇ ಮಾರುಕಟ್ಟೆಗೆ ತಂದು ಮೂರಾಬಟ್ಟೆ ಮಾಡಿದರೆ ಜನ ಸಹಿಸಿಕೊಂಡಾರೆ? ಈಗಾಗಲೇ ಪ್ರತಿಭಟನೆಯ ಅಲೆಗಳು ಎಲ್ಲಾ ಕಡೆ ಏಳುತ್ತಿವೆ. ಈ ಅಲೆಗಳು ಚಳುವಳಿಯಾಗಿ ಮಾರ್ಪಡುವುದರಲ್ಲಿ ಯಾವುದೇ ಸಂದೇಹವಿಲ್ಲ ಅಲ್ಲವೇ? ○


ಜಗದಗಲ

ಶರತ್‌ಚಂದ್ರ

ಪಾಕಿಸ್ತಾನದಲ್ಲಿ ಹೊಸ ಸರ್ಕಾರ – ಮುಷರಫ್‌ಗೆ ಕೊನೆಗಾಲ?

ಪಾಕಿಸ್ತಾನದಲ್ಲಿ ಕೊನೆಗೂ ಸರ್ಕಾರ ರಚನೆಯಾಗಿದೆ. ಚುನಾವಣೆ ಫಲಿತಾಂಶ ಬಂದು ಪೂರ್ತಿ ಒಂದು ತಿಂಗಳ ನಂತರ ಪ್ರಧಾನಿ ಯಾರಾಗಿರಬೇಕು ಎಂಬ ಪ್ರಶ್ನೆಗೆ ಪರಿಹಾರ ಸಿಕ್ಕಿದೆ. ಪಿ.ಪಿ.ಪಿ.ಯ ಯೂಸುಫ್ ಗಿಲಾನಿ ಪ್ರಧಾನಿಯಾಗಿ ಆಯ್ಕೆಯಾಗಿದ್ದಾರೆ. ಬೆನಜಿರ್ ಪತಿ ಜರ್ದಾರಿ, ಮಾಜಿ ಪ್ರಧಾನಿ ನವಾಜ್ ಶರೀಫ್, ಸಿಂಧ್ ಪ್ರದೇಶದ ಪಿ.ಪಿ.ಪಿ. ಪಕ್ಷದ ಹಿರಿಯ ನಾಯಕ ಮಖ್‌ದೂಮ್ ಫಹಿಮ್ - ಇತ್ಯಾದಿ ಹಲವು ಹೆಸರುಗಳು ಕೇಳ ಬಂದವು. ಹಲವು ಸುತ್ತಿನ ಚರ್ಚೆ ನಂತರ ಗಿಲಾನಿ ಸರ್ವಸಮ್ಮತ ಅಭ್ಯರ್ಥಿಯಾಗಿ ಹೊಮ್ಮಿದರು.

ಪಿ.ಪಿ.ಪಿ. ನಾಯಕ ಜರ್ದಾರಿಯ ನಿಕಟವರ್ತಿಯಾದ ಗಿಲಾನಿಯವರು ಮುಶರಫ್ ಅಧ್ಯಕ್ಷಗಿರಿಯ ಬಹುಭಾಗ ಜೈಲಿನಲ್ಲಿ (ರಾಜಕೀಯ ದುರುದ್ದೇಶದ ಹುಸಿ ಎನ್ನಲಾದ ಭ್ರಷ್ಟಾಚಾರ ಆಪಾದನೆ ಮೇಲೆ) ಕಳೆದು ಜನರ ಗೌರವಕ್ಕೆ ಪಾತ್ರರಾಗಿದ್ದಾರೆ. ಪಂಜಾಬಿನವರಾಗಿ ಸರ್ಕಾರ-ಸೈನ್ಯದಲ್ಲಿ ಪ್ರಬಲವಾಗಿರುವ ಪಂಜಾಬಿ ಲಾಬ್ಬಿಗೆ ಸ್ವೀಕಾರಾರ್ಹ ಆಗಿದ್ದಾರೆ. ದಕ್ಷಿಣ ಪಂಜಾಬಿನವರಾಗಿ, ಉತ್ತರ ಪಂಜಾಬಿನಲ್ಲಿ ಪ್ರಬಲವಾಗಿರುವ ನವಾಜ್ ಶರೀಫ್‌ರ ಮುಸ್ಲಿಂ ಲೀಗ್ ಪಕ್ಷಕ್ಕೂ ಸ್ವೀಕಾರಾರ್ಹ ಆಗಿದ್ದಾರೆ ಎನ್ನಲಾಗಿದೆ. ಪ್ರಧಾನಿ ಚುನಾವಣೆಯಲ್ಲಿ ಶೇ.70 ಮತಗಳಿಸಿದ ಗಿಲಾನಿ ಅವರು ರಚಿಸಲಿರುವ ಸರ್ಕಾರ ವ್ಯಾಪಕ ಬೆಂಬಲ ಇರುವ ಹಲವು ಪಕ್ಷಗಳ ರಾಷ್ಟ್ರೀಯ ಸರ್ಕಾರವಾಗಿರುತ್ತದೆ.


ಪ್ರಧಾನಿ ಗಿಲಾನಿ

ಪ್ರಧಾನಿ ಪ್ರಮಾಣ ವಚನ ಸ್ವೀಕರಿಸುತ್ತಿದ್ದಂತೆ, ವಿಳಂಬವಿಲ್ಲದೆ ಪ್ರಜಾಪ್ರಭುತ್ವ ಪುನಃ ಸ್ಥಾಪಿಸುವ ದಿಟ್ಟ ಮತ್ತು ತುರ್ತಾದ ಕ್ರಮಗಳಿಗೆ ಮುಂದಾಗಿರುವುದು ಉತ್ತಮ ಸೂಚನೆ. ಮಾಜಿ ಮುಖ್ಯ ನ್ಯಾಯಾಧೀಶ ಮತ್ತು ಇತರ ಪ್ರಮುಖ ನ್ಯಾಯಾಧೀಶರುಗಳ ಗೃಹ-ಬಂಧನದಿಂದ ಬಿಡುಗಡೆ ಮಾಡಲಾಗಿದೆ, ಅಧ್ಯಕ್ಷ ಮುಶರಫ್‌ರ ಬಲಗೈ ಎನ್ನಲಾದ ಹಲವು ಹಿರಿಯ ಅಧಿಕಾರಿಗಳ ವರ್ಗಾವಣೆ ಮಾಡಲಾಗಿದೆ. ಮೂವತ್ತು ದಿನಗಳೊಳಗೆ ನವೆಂಬರ್ 30 ರಂದು ವಜಾ ಮಾಡಲಾದ ಸುಪ್ರೀಂ ಕೋರ್ಟಿನ ನ್ಯಾಯಾಧೀಶರುಗಳ ಸ್ಥಾನಮಾನ ಮರಳಿಸುವುದಕ್ಕೆ ಬದ್ಧ ಎಂದು ಗಿಲಾನಿ ಹೇಳಿದ್ದಾರೆ. ಇದು ಆದರೆ ಅಧ್ಯಕ್ಷ ಮುಶರಫ್ ಚುನಾವಣೆಯ ವಿರುದ್ಧ ಕೇಸು ಪುನರಾರಂಭವಾಗಿ ಅದು ರದ್ದಾಗುವ ಸಾಧ್ಯತೆಯೂ ಇದೆ.

ಪುನಃ 1973 ರ ಸಂವಿಧಾನ

1973 ರ ಸಂವಿಧಾನ ಪುನಃ ಸ್ಥಾಪಿಸುವ ಭರವಸೆ ಸಹ ಮುಶರಫ್ ತಂದ ಸಂವಿಧಾನಾತ್ಮಕ ಬದಲಾವಣೆಗಳ ರದ್ದತಿಯೆಂದೆ ಎನ್ನಬಹುದು. ಇದರಿಂದ ಚಿಂತಾಕ್ರಾಂತವಾದ ಅಮೆರಿಕನ್ ಸರ್ಕಾರ ತಕ್ಷಣ ಎರಡು ಹಿರಿಯ ಅಧಿಕಾರಿಗಳನ್ನು ಕಳಿಸಿತು. ಅವರು ಜರ್ದಾರಿ ಮತ್ತು ಶರೀಫ್‌ರನ್ನು ಭೇಟಿ ಮಾಡಿ ಮುಶರಫ್ ಅಧಿಕಾರದಿಂದ ಕೆಳಗಿಳಿಸಬಾರದು ಎಂದು ಒತ್ತಡ ಹೇರಿದೆ ಎನ್ನಲಾಗಿದೆ. ಆದರೆ ವಕೀಲರ ಮತ್ತು ಅವರ ನಾಯಕತ್ವದ ಚಳುವಳಿಯ ಒತ್ತಡ ಅಷ್ಟೇ ಜೋರಾಗಿದೆ. ಸರ್ಕಾರದ ಮುಂದೆ ಸ್ಥಿರತೆ ಸೇರಿದಂತೆ ಹಲವು ಸವಾಲುಗಳಿವೆ. ಅವನ್ನು ಈ ಸರ್ಕಾರ ಸಮರ್ಥವಾಗಿ ಎದುರಿಸುತ್ತದೆ ಎಂಬ ಆಶಾಭಾವನೆ ಇದೆ.

ಭೂತಾನದಲ್ಲೂ ಚುನಾವಣೆಗಳು

ನೆರೆಯ ಭೂತಾನದಲ್ಲೂ ಮೊದಲ ಬಾರಿಗೆ ಚುನಾವಣೆಗಳು ನಡೆದಿವೆ. ಶೇ.80 ಕ್ಕೂ ಹೆಚ್ಚು ಮತದಾನ ಆಗಿದೆ. ಭೂತಾನ್ ಯುನೈಟೆಡ್ ಪಾರ್ಟಿ 47 ಸೀಟುಗಳಲ್ಲಿ 44 ಸೀಟು ಗೆದ್ದು ಭಾರೀ ಬಹುಮತ ಗಳಿಸಿದೆ. ಗೆದ್ದ ಈ ಪಕ್ಷ ಮತ್ತು ವಿರೋಧಿ ಪೀಪಲ್ಸ್ ಡೆಮೊಕ್ರಾಟಿಕ್ ಪಾರ್ಟಿ ಎರಡೂ ರಾಜನಿಗೆ ನಿಷ್ಟವಾದ ಪಕ್ಷಗಳು. ನೇಪಾಳದಲ್ಲಿ ಪ್ರಜಾಪ್ರಭುತ್ವ ಜನರ ಚಳುವಳಿಯ ಒತ್ತಡದಿಂದ ಆದರೆ, ಭೂತಾನದಲ್ಲಿ ರಾಜನೇ ಚುನಾವಣೆಗಳನ್ನು ಸ್ವಯಂ ಪ್ರೇರಿತನಾಗಿ ನಡೆಸಿದ್ದು ವಿಶೇಷ. ಭೂತಾನ ನೆರೆಯ ನೇಪಾಳದಿಂದ ಪಾಠ ಕಲಿಯಬೇಕು. ರಾಜ ರಾಜಕೀಯ ಮತ್ತು ನೀತಿ ರೂಪಿಸುವ ಪ್ರಕ್ರಿಯೆಯಲ್ಲಿ ಹಸ್ತಕ್ಷೇಪ ಮಾಡಬಾರದು. ರಾಜಕೀಯ ಪಕ್ಷಗಳು ಜನಪರ ನೀತಿಗಳನ್ನು ಅನುಸರಿಸುವ ಉತ್ತಮ ಆಡಳಿತ ಕೊಡಲು ಪ್ರಯತ್ನಿಸಬೇಕು. ಪರಸ್ಪರ ಕಚ್ಚಾಡುವ ಅಥವಾ ಎಲ್ಲದಕ್ಕೂ ರಾಜನತ್ತ ನೋಡುವ ಪ್ರವೃತ್ತಿಯಿಂದ ರಾಜನ ಹಸ್ತಕ್ಷೇಪಕ್ಕೆ ಅವಕಾಶ ಮಾಡಿ ಕೊಡಬಾರದು. ಆರನೇ ಒಂದು ಬಾಗ ಇರುವ ನೇಪಾಳಿ ಮೂಲದ ಜನರಿಗೆ ಪ್ರಜೆಯಾಗುವ ಮತ್ತು ಮತದಾರರಾಗುವ ಹಕ್ಕು ಕೊಟ್ಟಿಲ್ಲ. ಇದು ಪ್ರಜಾಪ್ರಭುತ್ವದ ನೀತಿ ಅಲ್ಲ. ಚುನಾವಣೆಗಳಿಂದಲೇ ಪ್ರಜಾಪ್ರಭುತ್ವ ಬೆಳೆಯುವುದಿಲ್ಲ. ಪ್ರಜಾಪ್ರಭುತ್ವ ಪ್ರಜ್ಞೆಯನ್ನು ಬಿತ್ತಿ ಬೆಳೆಸಬೇಕು. ○

ತೈವಾನ್‌ನಲ್ಲಿ ಚೀನಾ ವಿರೋಧಿ ಆಳುವ ಪಕ್ಷದ ಸೋಲು

ಇತ್ತೀಚೆಗೆ ತೈವಾನ್‌ನಲ್ಲಿ ನಡೆದ ಅಧ್ಯಕ್ಷೀಯ ಚುನಾವಣೆಗಳ ಫಲಿತಾಂಶ ಬಂದಿದೆ. ಚೀನಾ-ವಿರೋಧಿ ಮತ್ತು ಸ್ವತಂತ್ರ ತೈವಾನ್ ಅಜೆಂಡಾವನ್ನು ಆಕ್ರಾಮಕವಾಗಿ ಜಾರಿ ಮಾಡಿದ್ದ ಆಳುವ ಡಿ.ಪಿ.ಪಿ ಭಾರೀ ಮತಗಳ ಅಂತರದಿಂದ ಸೋತಿದೆ. ವಿರೋಧ ಪಕ್ಷ ಕ್ಯೂಮಿಂಟಾಂಗ್‌ನ ಮಾ-ಯಿಂಗ್-ಜೂ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಎರಡು ತಿಂಗಳ ಹಿಂದೆ ನಡೆದ ಪಾರ್ಲಿಮೆಂಟರಿ ಚುನಾವಣೆಯಲ್ಲಿ ಸಹ ಕ್ಯೂಮಿಂಟಾಂಗ್ ಬಹುಮತ ಪಡೆಯಿತು ಎಂದು ಇಲ್ಲಿ ನೆನಪಿಸಿಕೊಳ್ಳಬಹುದು. ಚೀನಾದ ಜತೆ ಸಂಬಂಧ ಉತ್ತಮ ಪಡಿಸುವ ಘೋಷಣೆ ಮೇಲೆ ಕ್ಯೂಮಿಂಟಾಂಗ್ ಚುನಾವಣೆ ಗೆದ್ದಿದೆ ಎಂಬುದು ಗಮನಾರ್ಹ. ಪರಸ್ಪರ ಆರ್ಥಿಕ, ವಾಣಿಜ್ಯ, ಸಾಗಾಣಿಕೆ ಸಂಬಂಧಗಳನ್ನು ಉತ್ತಮ ಪಡಿಸುವ ಮತ್ತು ಈಗಿರುವ ಹಲವು ನಿರ್ಬಂಧಗಳನನ್ನು ಸಡಿಲಿಸುವುದಾಗಿ ಕ್ಯೂಮಿಂಟಾಂಗ್ ಹೇಳಿದೆ. ಈ ಬಗ್ಗೆ ಚೀನಾದ ಸರ್ಕಾರದ ಜತೆ ಸೌಹಾರ್ದಯುತ ವಾತಾವರಣ ನಿರ್ಮಿಸಿ ಮಾತುಕತೆ ನಡೆಸಬೇಕೆಂದಿದೆ.

ಹಿಂದಿನ ಡಿ.ಪಿ.ಪಿ ಸರ್ಕಾರ ಚೀನಾ ಸರ್ಕಾರದ ಜತೆ ಸಂಘರ್ಷದ ಹಾದಿ ಹಿಡಿದಿತ್ತು. ಅಮೆರಿಕದಿಂದ ಆಧುನಿಕ ಶಸ್ತ್ರಾಸ್ತ್ರ ಆಮದಿಗೆ ಪ್ರಯತ್ನ ಮಾಡಿತ್ತು. ತೈವಾನ್ ವಿಶ್ವಸಂಸ್ಥೆ ಸದಸ್ಯತ್ವ ಕೇಳಬೇಕೆ ಬೇಡವೇ ಎಂಬ ಬಗ್ಗೆ ಜನಮತ ಸಂಗ್ರಹವನ್ನು ಅಧ್ಯಕ್ಷೀಯ ಚುನಾವಣೆ ಜತೆ ನಡೆಸಿತು. ಈ ಬಗ್ಗೆ ತೈವಾನ್ ಜನ ಬೇಡ ಎಂಬ ತೀರ್ಪು ಕೊಟ್ಟು ಚೀನಾದ ಜತೆ ಸಂಬಂಧ ಉತ್ತಮ ಪಡಿಸುವುದಕ್ಕೆ ಆದ್ಯತೆ ತೋರಿಸಿದ್ದಾರೆ. 1949ರ ಚೀನಾದ ಕ್ರಾಂತಿಯ ಸಂದರ್ಭದಲ್ಲಿ ಕಮ್ಯುನಿಸ್ಟ್ ಪಡೆಗಳಿಂದ ಸೋತ ಕ್ಯೂಮಿಂಟಾಂಗ್ ಮುಖ್ಯಸ್ಥ ಚಿಯಾಂಗ್ ಕೈಶೇಕ್ ತೈವಾನ್ ದ್ವೀಪಕ್ಕೆ ಓಡಿ ಹೋಗಿ ಸರ್ಕಾರ ಸ್ಥಾಪಿಸಿದ. ಚೀನಾದ ಕ್ರಾಂತಿಯನ್ನು ಸೋಲಿಸಲು ಕ್ಯೂಮಿಂಟಾಂಗ್‌ಗೆ ಅಮೆರಿಕ ಸೇರಿದಂತೆ ಹಲವು ಸಾಮ್ರಾಜ್ಯಶಾಹಿ ದೇಶಗಳು ಕುಮ್ಮಕ್ಕು, ಬೆಂಬಲ ನೀಡಿದವು. ಚಿಯಾಂಗ್ ಕೈಶೇಕ್ ಸರ್ಕಾರವೇ ನಿಜವಾದ ಚೀನಾದ ಸರ್ಕಾರ ಎಂದು ಮಾನ್ಯತೆ ನೀಡಿದವು. ವಿಶ್ವ ಸಂಸ್ಥೆಯಲ್ಲೂ ಕ್ಯೂಮಿಂಟಾಂಗ್ ಸರ್ಕಾರಕ್ಕೆ ಸದಸ್ಯತ್ವ ನೀಡಿದವು.

ಜಗತ್ತಿನ ಅತ್ಯಂತ ಹೆಚ್ಚು ಜನಸಂಖ್ಯೆಯ ದೇಶದ ಜನತೆಯನ್ನು ಪ್ರತಿನಿಧಿಸುವ ಮಾವೋ-ತ್ಸೆ-ತುಂಗ್ ಸರ್ಕಾರಕ್ಕೆ ಹಲವು ದಶಕಗಳ ಕಾಲ ವಿಶ್ವ ಸಂಸ್ಥೆ ಮತ್ತು ಹಲವು ಶ್ರೀಮಂತ ದೇಶಗಳು ಮಾನ್ಯತೆ ನೀಡಲಿಲ್ಲ. ಚೀನಾದ ಒಂದು ದ್ವೀಪವಾಗಿದ್ದ ತೈವಾನ್ ಒಂದು ದೇಶ ಅಲ್ಲ. ಚೀನಾವನ್ನು ಒಡೆಯಲು, ದುರ್ಬಲಗೊಳಿಸಲು ಶ್ರೀಮಂತ ದೇಶಗಳ ಪಿತೂರಿಯ ಭಾಗ. ಅಲ್ಲಿನ ಜನತೆ ಚೀನಾದ ಭಾಗವಾಗಿರಲು ಬಯಸುತ್ತಾರೆ. ಇದು ಚೀನಾದ ನಿಲುವು. ಭಾರತ ಮತ್ತು ಮೂರನೇ ಜಗತ್ತಿನ ಅಲಿಪ್ತದೇಶಗಳು ತೈವಾನ್ ನಿಜವಾದ ಚೀನಾ ಎಂದು ಯಾವತ್ತೂ ಮಾನ್ಯ ಮಾಡಲಿಲ್ಲ.

ಚೀನಾ 'ಎರಡು ವ್ಯವಸ್ಥೆಗಳು, ಒಂದು ದೇಶ' ನೀತಿಯ ಆಧಾರದ ಮೇಲೆ ತೈವಾನ್ ಚೀನಾದ ಜತೆ ಸೇರಬೇಕೆಂಬ ಪ್ರಸ್ತಾವ ಮುಂದಿಟ್ಟಿದೆ. ಈ ನೀತಿಯನ್ನು ಇದೇ ರೀತಿ ವಿಶಿಷ್ಟ ಚಾರಿತ್ರಿಕ ಸಂದರ್ಭದಲ್ಲಿ ಚೀನಾದಿಂದ ಪ್ರತ್ಯೇಕವಾಗಿದ್ದ ಹಾಂಕಾಂಗ್ ಮತ್ತು ಮಕಾವೊಗಳಲ್ಲಿ ಶಾಂತಿಯುತವಾಗಿ ಯಶಸ್ವಿಯಾಗಿ ಜಾರಿ ಮಾಡಲಾಯಿತು. ಅಲ್ಲಿನ ಜನರ ದೃಷ್ಟಿಯಿಂದ ಈ ನೀತಿಯ ಜಾರಿ ತೃಪ್ತಿಕರವಾಗಿದೆ. ಇದು ತೈವಾನ್‌ನಲ್ಲೂ ಜಾರಿ ಆದರೆ ಅಮೆರಿಕಕ್ಕೆ ಮುಖಭಂಗ. ಆದ್ದರಿಂದ ಅಲ್ಲಿನ ಸರ್ಕಾರಗಳ ಮೇಲೆ ಚೀನಾ-ವಿರೋಧಿ ನೀತಿ ತಳೆಯಲು ಅಮೆರಿಕ ತನ್ನ ಆರ್ಥಿಕ-ಮಿಲಿಟರಿ ಬಲ ದುರ್ಬಳಕೆ ಮಾಡುತ್ತಿದೆ. ಅಮೆರಿಕದ ಈ ನೀತಿ ಮತ್ತು ಪ್ರಯತ್ನವನ್ನು ಜನ ವಿರೋಧಿಸುತ್ತಾರೆ ಎಂದು ಈ ಚುನಾವಣೆಯ ಫಲಿತಾಂಶದ ಸಾರ. 60 ವರ್ಷಗಳ ಹಿಂದೆ ಅಮೆರಿಕ ಹುಟ್ಟು ಹಾಕಿದ ಕ್ಯೂಮಿಂಟಾಂಗ್ ಸರ್ಕಾರ ಇಂದು ಚೀನಾದ ಜತೆ ಉತ್ತಮ ಸಂಬಂಧ ಬಯಸುತ್ತದೆ. ಅಮೆರಿಕದ ಮಾತು ಕೇಳುವುದಿಲ್ಲ ಎಂಬುದು ಬದಲಾದ ಜಾಗತಿಕ ಪರಿಸ್ಥಿತಿಗೆ ಹಿಡಿದ ಕನ್ನಡಿ.

ಬಲಿಷ್ಟ ಹೋರಾಟವೊಂದೇ ದಾರಿ....

ಪುಟ 7 ರಿಂದ

ಇದರಿಂದ ಜನಪರವಾದ ಪರ್ಯಾಯ ಧೋರಣೆಯ ಬದ್ಧತೆ ಹೊಂದಿರುವ ಎಡಪಕ್ಷಗಳ ನೇತೃತ್ವದ ಸರ್ಕಾರಗಳು ತೀವ್ರ ಸಂಕಷ್ಟಗಳನ್ನು ಎದುರಿಸಬೇಕಾಗಿದೆ. ಇಷ್ಟಾದರೂ ರಾಜ್ಯ ಸರ್ಕಾರಗಳ ಸೀಮಿತ ಸಂಪನ್ಮೂಲಗಳ ಮಿತಿಯೊಳಗೆ ಕೇಂದ್ರದ ಒತ್ತಡಗಳನ್ನು ಮೀರಿ ಪಶ್ಚಿಮ ಬಂಗಾಳ, ಕೇರಳ, ತ್ರಿಪುರಾಗಳ ಎಡಪಕ್ಷಗಳ ನೇತೃತ್ವದ ಸರ್ಕಾರಗಳು ಜನತೆಗೆ ಪರ್ಯಾಯ ಧೋರಣೆಗಳನ್ನು ನೀಡಲು ಶ್ರಮಿಸುತ್ತಿವೆ.

ಈ ಕಳೆದ ಮೂರು ವರ್ಷಗಳ ಅವಧಿಯಲ್ಲಿ, ಪಶ್ಚಿಮ ಬಂಗಾಳ, ತ್ರಿಪುರ, ಕೇರಳ ವಿವಿಧ ಚುನಾವಣೆಗಳಲ್ಲಿ ಸಿಪಿಐ(ಎಂ) ಮತ್ತು ಎಡಪಕ್ಷಗಳು ಗಳಿಸಿಕೊಂಡಿರುವ, ಹೆಚ್ಚಿಸಿಕೊಂಡಿರುವ ಜನಬೆಂಬಲವೇ ಇದಕ್ಕೆ ಸಾಕ್ಷಿಯಾಗಿದೆ. ದೇಶದ ಜನತೆಯ ಮುಂದೆ ಕಾಂಗ್ರೆಸ್, ಬಿಜೆಪಿ ಕೂಟಗಳಿಗೆ ಪರ್ಯಾಯವಾಗಿ ಬದಲಿ ನೀತಿಯನ್ನು ಮಂಡಿಸುವುದರಲ್ಲಿ ಈ ಎಡ ನೇತೃತ್ವದ ಸರ್ಕಾರಗಳು ಅಮೂಲ್ಯವಾದ ಪಾತ್ರವನ್ನು ವಹಿಸುತ್ತಿವೆ.

ಬಿಜೆಪಿಯು 2004ರ ಚುನಾವಣಾ ಫಲಿತಾಂಶದಿಂದ ಯಾವ ಪಾಠವನ್ನು ಕಲಿಯಲಿಲ್ಲ. ಅದು ತನ್ನ ಅದೇ ಹಳೆಯ ಕೋಮುವಾದಿ ಅಜೆಂಡಾಗಳ ಪಾದಕ್ಕೆ ಮತ್ತೊಮ್ಮೆ ಎರಗಿಬಿದ್ದಿದೆ. ತನ್ನ ರಾಜ್ಯ ಸರ್ಕಾರಗಳಿರುವ ಕಡೆ ದುಡಿಯುವ ಜನಕ್ಕೆ ವಿರೋಧಿಯಾದ, ಶ್ರೀಮಂತರ ಪರವಾದ ನೀತಿಯನ್ನು ನಿರ್ಲಜ್ಜವಾಗಿಯೇ ಅನುಸರಿಸುತ್ತಿದೆ. ಅಲ್ಪಸಂಖ್ಯಾತರ ಮೇಲಿನ ದಾಳಿಗಳಂತೂ ಮಿತಿ ಮೀರುತ್ತಿವೆ. ಇದೀಗ ಕೇಂದ್ರ ಯುಪಿಎ ಸರ್ಕಾರದ ಜನವಿರೋಧಿ ನೀತಿಗಳಿಂದ ಸೃಷ್ಟಿಯಾಗುತ್ತಿರುವ ಅತೃಪ್ತಿಯ ಲಾಭವನ್ನು ಲಪಟಾಯಿಸಲು ಅದು ಇನ್ನಿಲ್ಲದ ಸಂಚು ಮಾಡುತ್ತಾ ಕಾದು ಕೂತಿದೆ.

ಇಂತಹ ಸಂಕೀರ್ಣ ಪರಿಸ್ಥಿತಿಯಲ್ಲಿ ಕೋಮುವಾದಿ ಶಕ್ತಿಗಳನ್ನು ಮೂಲೆ ಗುಂಪು ಮಾಡುವ, ಸುಲಿಗೆಕೋರ ಸಾಮ್ರಾಜ್ಯಶಾಹಿ ಶಕ್ತಿಗಳ ತಂತ್ರಗಳನ್ನು ಬಯಲು ಮಾಡಿ ಹಿಮ್ಮೆಟ್ಟಿಸುವ, ದುಡಿಯುವ ಜನರ ಬದುಕಿನ ಪ್ರಶ್ನೆಗಳನ್ನು ಮುಂಚೂಣಿಗೆ ತಂದು ಆ ಮೂಲಕ ಮೂರನೇ ರಾಜಕೀಯ ಪರ್ಯಾಯವನ್ನು ರೂಪಿಸುವ ಮಹತ್ವದ ಹೊಣೆ ದೇಶದ ಕಮ್ಯುನಿಸ್ಟ್ ಚಳುವಳಿಯ ಮೇಲಿದೆ. ಈ ಬಗ್ಗೆ ಸೂಕ್ತ ನಿರ್ದೇಶನಗಳನ್ನು ಕೊಯಮತ್ತೂರು ಅಧಿವೇಶನ ನೀಡಲಿದೆ.

ನೋಟ



ಡಾ. ಜಿ. ಭಾಸ್ಕರ ಮಯ್ಯ

ವಿಲಕ್ಷಣ ಜನಾಂಗೀಯವಾದ

ಅಮೇರಿಕಾದ ರಾಷ್ಟ್ರಪತಿ ಜಾರ್ಜ್ ಡಬ್ಲ್ಯೂ ಬುಶ್ 2005 ಫೆಬ್ರವರಿ ಮೂರನೆಯ ವಾರ ಬೆಲ್ಜಿಯಾ ರಾಜಧಾನಿ ಬ್ರೂಸೆಲ್‌ನಲ್ಲಿ ಹೇಳಿದ ಮಾತು.

'ಜಗತ್ತಿನ ಯಾವ ಶಕ್ತಿಯೂ ಅಮೇರಿಕಾ ಮತ್ತು ಯುರೋಪನ್ನು ವಿಭಜಿಸಲಾರವು. ವಿಶ್ವದಲ್ಲೆಡೆ ಶಾಂತಿ ನೆಲಸಬೇಕಾದರೆ ನಮ್ಮ ಮೈತ್ರಿ ಅತ್ಯಗತ್ಯ !?

ಬುಶ್‌ನ ಈ ಹೇಳಿಕೆಯನ್ನು ನವವಸಾಹತುಶಾಹಿ - ನವಸಾಮ್ರಾಜ್ಯಶಾಹಿ - ಜಾಗತೀಕರಣದ ಪರಿವೀಕ್ಷ್ಯದಲ್ಲಿ ಸಮೀಕ್ಷಿಸಬೇಕಾದ ಅಗತ್ಯತೆಯಿದೆ. ಬುಶ್ ತನ್ನ ಧೂರ್ತವಾದವನ್ನು ಹೀಗೆ ಮಂಡಿಸುತ್ತಾನೆ. 'ವಿಶ್ವದಲ್ಲಿ ಶಾಂತಿ ಮತ್ತು ಸಮೃದ್ಧಿಗಾಗಿ ನಮ್ಮ ದೃಢವಾದ ಮೈತ್ರಿ ಅತ್ಯಾವಶ್ಯಕವಾಗಿದೆ. ಆದ್ದರಿಂದ ಯುರೋಪ್ ಮತ್ತು ಅಮೇರಿಕಾ ಹೆಗಲಿಗೆ ಹೆಗಲು ಕೊಟ್ಟು ದುಡಿಯಬೇಕಾಗಿದೆ.

ಈ ಬಗೆಯ ವಾದವು ಅಸ್ಪಷ್ಟವಾಗಿ-ಪರೋಕ್ಷವಾಗಿ ಜನಾಂಗೀಯವಾದದಂತೆ ಕಾಣಿಸುತ್ತದೆ. ಇದು 'ಆಂಗ್ಲೊ-ಸೆಕ್ಸನ್' ಶ್ವೇತವಾದದ ವಾಸನೆಯಿಂದ ಕೂಡಿದೆ. ಇದನ್ನು ಅಖಿನ್ ಯುರೋಪಿಯನ್‌ವಾದ ಅಥವಾ ಪಾನ್ ಯುರೋಪಿಯ ನಿಸಮ್ ಎಂತಲೂ ಕರೆಯಬಹುದಾಗಿದೆ.

1990ರಲ್ಲಿ ರಷ್ಯಾ ವಿಘಟನೆಯ ಐದಾರು ವರ್ಷಗಳ ಹಿಂದೆ ಗೋರ್ಬೊಚೆವ್ ನಡೆಸಿದ 'ಪೆರಿಸ್ಟ್ರಾಯಿಕ' ಅಭಿಯಾನದಲ್ಲಿ ಈ ವಿಷಪಾಷಾಣಗಳನ್ನು ನೋಡಬಹುದು. ಆತ ಹೀಗೆಂದಿದ್ದ: 'ನಾವು ಕಾಲು ಕೆರೆದು ಜಗಳವಾಡುತ್ತೇವೆಂಬುದು ತಪ್ಪು. ನಮಗೆ ಅಂಥ ಯಾವುದೇ ಇರಾದೆ ಇಲ್ಲ. ನಮ್ಮದು ಸಮಾನ ಯುರೋಪಿಯನ್ ಕುಟುಂಬ. ಸಮಾನ ಯುರೋಪಿಯನ್ ಪೈತ್ರಿಕ ಸಂಪತ್ತು ನಮ್ಮದು'. ಈ ಮಾತುಗಳಲ್ಲಿ ಜನಾಂಗೀಯವಾದದ (ಫ್ಯಾಸಿಸಮ್) ಶಬ್ದಾವಳಿಗಳನ್ನು ಗಮನಿಸಬಹುದು.


ಎಂಥ ವಿಪರ್ಯಾಸವೆಂದರೆ, ಕಮ್ಯೂನಿಸ್ಟ್ ಬಳಗದ ಶಿಖರಸ್ಥ ನೇತಾರ ಗೋರ್ಬಚೇವ್ - ಕಮ್ಯೂನಿಸ್ಟ್ ಹಾಗೂ ಬಂಡವಾಳವಾದಿ ವ್ಯವಸ್ಥೆಯ ನಡುವಣ ಶತ್ರುತ್ವದ ವೈರುಧ್ಯವನ್ನು ಸಂಪೂರ್ಣವಾಗಿ ನಿರಾಕರಿಸುತ್ತಾನೆ.

ಇನ್ನೂ ಸ್ಪಷ್ಟವಾಗಿ ಹೇಳಬೇಕೆಂದರೆ 1987ರಲ್ಲಿ ಕಮ್ಯುನಿಸ್ಟ್ ರಾಷ್ಟ್ರಪತಿ ಏನನ್ನು ಹೇಳಿದನೋ ಅದನ್ನೇ ಜಾರ್ಜ್ ಬುಶ್ 1999ರಲ್ಲಿ ಹೇಳಿದ. ಅದುವೇ 'ಅಖಿಲ ಅಟ್ಲಾಂಟಿಕ್ ಆಂಗ್ಲೋ ಸೆಕ್ಸನ್‌ವಾದ'.

ಕೆಲವೇ ವರ್ಷಗಳ ಹಿಂದೆ ಬ್ರಿಟನಿನ ಪ್ರಧಾನಮಂತ್ರಿ ಟೋನಿ ಬ್ಲೇರ್‌ನ ರಾಜಕೀಯ ಸಲಹೆಗಾರ ರಾಬರ್ಟ್ ಕೂಪರ್ ರಕ್ಷಣಾತ್ಮಕ ಸಾಮ್ರಾಜ್ಯವಾದ (Defensive Imperialism)ವನ್ನು ಮಂಡಿಸಿದ್ದ. ಕೂಪರನ ಪ್ರಕಾರ 'ಮೂರನೆಯ ವಿಶ್ವದ 'ಪ್ರಜಾಪ್ರಭುತ್ವ' ಸಂಪೂರ್ಣ ವಿಫಲವಾಗಿದೆ. ಆದ್ದರಿಂದ ಇಂದು 19ನೆಯ ಶತಮಾನಕ್ಕಿಂತಲೂ ಅತಿ ತೀವ್ರವಾದ ಸಾಮ್ರಾಜ್ಯವಾದ ಮತ್ತು ವಸಾಹತುವಾದದ ಅಗತ್ಯತೆಯಿದೆ.:. ಪ್ರಜಾಪ್ರಭುತ್ವದ ರಕ್ಷಣೆಗೆ ರಕ್ಷಣಾತ್ಮಕವಾದ ಸಾಮ್ರಾಜ್ಯವಾದದ ಅಗತ್ಯತೆಯಿದೆ'.

ಇದೆಲ್ಲದರ ಅರ್ಥವಾದರೂ ಏನು? ರಕ್ಷಣಾತ್ಮಕ ಸಾಮ್ರಾಜ್ಯವಾದವೆಂದರೂ 'ಯುರೋ-ಅಮೇರಿಕನ್ ಐಕ್ಯ' ವೆಂದರೂ ಒಂದೇ. ಇದರಲ್ಲಿ ಯಾವ ಅಂತರವೂ ಇಲ್ಲ.

ಅಮೇರಿಕಾದ ರಕ್ಷಣಾ ವಿಶೇಷಜ್ಞ ಪಿ. ಹಟ್ಟಿಂಗ್‌ಟನ್ ಕಳೆದ ಶತಮಾನದ ಕೊನೆಯಲ್ಲಿ ಹೇಳಿದ 'ನಾಗರಿಕತೆಗಳ ಹೋರಾಟ', 'ವಿಶ್ವವ್ಯವಸ್ಥೆಯ ಪುನರ್ನಿರ್ಮಾಣ' ದತಂಹ ವಿವಾದಾತ್ಮಕ ಧಾರ್ಮಿಕ ಥೀಸಿಸನ್ನು ನಾವು ನೆನಪಿಸಿಕೊಳ್ಳಬೇಕು. ಇವೆಲ್ಲವೂ ಕೇವಲ ಆಕಸ್ಮಿಕಗಳಲ್ಲ, ಜಾಗತೀಕರಣದ ಮೂಲಕ ಕರಿಜಗತ್ತಿನ ವಿರುದ್ಧ ಬಿಳಿ ಜಗತ್ತಿನ ಚಕ್ರವ್ಯೂಹದ ರಣನೀತಿ.




▪ ಜಯ

ಕಣ್ಮರೆಯಾಗುತ್ತಿರುವ ಪ್ರೇಮ ಕಾಶ್ಮೀರದ ಹಿಮಗಡ್ಡೆಗಳು

ಜಮ್ಮು ಮತ್ತು ಕಾಶ್ಮೀರದ ಲೆಹ್ ಎಂಬ ಕಣಿವೆ ಪ್ರದೇಶವು ಭೂಮಟ್ಟದಿಂದ ಸುಮಾರು 18,000 ಅಡಿ ಎತ್ತರದಲ್ಲಿದೆ. ಆ ಲೆಕ್ಕಕ್ಕೆ ಬೆಂಗಳೂರು ನಗರ ಸಮುದ್ರಮಟ್ಟದಿಂದ ಸುಮಾರು 3000 ಅಡಿಗಳಷ್ಟು ಮೇಲಿದೆ. 30 ವರ್ಷಗಳ ಹಿಂದೆ ಜಮ್ಮು ಮತ್ತು ಕಾಶ್ಮೀರದ ಲೆಹ್ ಪ್ರದೇಶದಲ್ಲಿ ಭಾರತೀಯ ಸೇನೆಯ ಟ್ರಕ್ಕುಗಳು ಮತ್ತು ಲಾರಿಗಳು ರಸ್ತೆಯಲ್ಲಿ ಚಲಿಸಬೇಕಾದರೆ, ಸೇನೆಯು ಮೊದಲಿಗೆ ರಸ್ತೆಯಲ್ಲಿ ಬಿದ್ದ ಹಿಮಗಡ್ಡೆಯನ್ನು ತೆರವುಗೊಳಿಸುವುದಕ್ಕೇ ಯುದ್ಧ ಮಾಡಬೇಕಾಗಿತ್ತು! ಹಿಮಪರ್ವತಗಳಲ್ಲಿ ಸಾಹಸ ಕಾರ್ಯಗಳಲ್ಲಿ ತೊಡಗುವ ಬೆಟ್ಟ ಏರುವವರು ಕೆಲವುಕಡೆ ವಿಶೇಷ ವಾಹನಗಳನ್ನು ಬಳಸಿ ಮುಂದೆ ಚಲಿಸಬೇಕಾಗಿತ್ತು. ಆದರೀಗ ಅದೇನೂ ಕಷ್ಟಕರವಾಗಿಲ್ಲ. ಏಕೆಂದರೆ, ಜಮ್ಮು ಮತ್ತು ಕಾಶ್ಮೀರದ ಲಡಾಕ್ ಪ್ರದೇಶದಲ್ಲಿ ಹಿಮಪರ್ವತಗಳು ನಿಧಾನವಾಗಿ ಕಣ್ಮರೆಯಾಗುತ್ತಿವೆ. ಆ ಪ್ರದೇಶದ ಜನರಿಗೆ ನೀರ್ಗಲ್ಲುಗಳ ದೊಡ್ಡ ದೊಡ್ಡ ಕಾಲುವೆಗಳು ನೀರಿನ ಮೂಲಗಳಾಗಿದ್ದವು. ನಮ್ಮ ಬೆಂಗಳೂರಿನಲ್ಲಿ ವರ್ಷಂಪ್ರತಿ ಸುಮಾರು 1200 ಮಿಲಿ ಮೀಟರ್ ಮಳೆಬಿದ್ದರೆ, ಲಡಾಕ್‌ನಂಥಹ ಹಿಮಚ್ಛಾದಿತ ಪ್ರದೇಶಗಳಲ್ಲಿ ಕೇವಲ 50ಮಿಲಿ ಮೀಟರ್ ಮಳೆ ಬೀಳುತ್ತಿದ್ದರಿಂದ ಹಿಮಗಡ್ಡೆಯ ಕಾಲುವೆಗಳೇ ಜನರಿಗೆ ನೀರುಣಿಸುತ್ತಿದ್ದವು. ಆದರೀಗ ಅಂತಹ ನೀರಿನ ಆಕರಗಳೇ ಕಣ್ಮರೆಯಾಗುತ್ತಿರುವುದು ಅಲ್ಲಿನ ಸಾಮಾನ್ಯ ಜನರ ಆತಂಕಕ್ಕೆ ಕಾರಣವಾಗಿದೆ.


ಜಾಗತಿಕ ತಾಪಮಾನದ ತಿರುಗೇಟು:

ಹಿಮಗಡ್ಡೆಗಳು ಕಣ್ಮರೆ ಯಾಗುತ್ತಿರುವುದಕ್ಕೂ ಪ್ರಪಂಚದಾದ್ಯಂತ ಭೂಮಿಯ ತಾಪಮಾನ ಏರುತ್ತಿರುವುದಕ್ಕೂ ಒಂದಕ್ಕೊಂದು ನಂಟಿದೆ. ಭೂಮಿಯ ತಾಪಮಾನ ಏರಿದಂತೆಲ್ಲ ಹಿಮಗಡ್ಡೆಗಳು ಆ ಶಾಖಕ್ಕೆ ಕರಗಿ ನೀರಾಗಿ ಹರಿಯತೊಡಗುತ್ತವೆ. ಹೀಗೆ ಹಿಮಗಡ್ಡೆಗಳು ಒಮ್ಮೆಲೆ ಕರಗಿ ಹರಿಯತೊಡಗುವುದರಿಂದ ಹಠಾತ್ತನೆ ನದಿಗಳಲ್ಲಿ ಪ್ರವಾಹ ತುಂಬಿ ಹರಿಯುತ್ತವೆ. ಪರಿಸ್ಥಿತಿ ಹೀಗೆಯೇ ಮುಂದುವರಿದಲ್ಲಿ, ಲಡಾಕ್ ಪ್ರದೇಶದ ಹಿಮಗಡ್ಡೆಗಳೇ ಆಸರೆಯಾಗಿರುವ ತಮ್ಮ ನದಿಗಳು ನೀರಿಲ್ಲದೆ ಬತ್ತಿಹೋಗಿ ಭಾರತ ಮತ್ತು ಪಾಕಿಸ್ತಾನಗಳು ಭೀಕರ ಬರಗಾಲ ಎದುರಿಸಬಹುದೆಂದು ವಿಜ್ಞಾನಿಗಳು ಆತಂಕ ವ್ಯಕ್ತಪಡಿಸಿದ್ದಾರೆ. ಇದಕ್ಕೆ ಪುಷ್ಟಿ ನೀಡುವಂತೆ ಲೆಹ್ ಮತ್ತು ನೋಬ್ರಾ ಕಣಿವೆಗಳಲ್ಲಿ ಕಳೆದ ಬೇಸಿಗೆಯಲ್ಲಿ ಪ್ರಥಮ ಬಾರಿಗೆ ನದಿಗಳಲ್ಲಿ ನೆರೆ ಬಂದಿದೆ.



ಕಣ್ಮರೆಯಾಗುತ್ತಿರುವ ಹಿಮಗಡ್ಡೆಗಳು:

ಲಡಾಕ್ ಕಣಿವೆಯಲ್ಲಿನ ಸುಮಾರು 466 ನೀರ್ಗಲ್ಲುಗಳ ಕಾಲುವೆಗಳಲ್ಲಿ ಸಂಶೋಧನೆ ನಡೆಸಿರುವ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೋ) ಯ ವರದಿಯು ಈ ಅಂಶಗಳನ್ನು ತಿಳಿಸಿದೆ. ಹಾಗೆಯೇ 1962ರಲ್ಲಿ ಸುಮಾರು 2,077 ಚದರ ಕಿಲೋಮೀಟರ್‌ಗಳಷ್ಟು ವಿಸ್ತೀರ್ಣ ಹೊಂದಿದ್ದ ಹಿಮಗಡ್ಡೆಯು 2007ರ ಹೊತ್ತಿಗೆ, 1682 ಚದರ ಕಿಲೋಮೀಟರ್‌ಗಳಿಗೆ ಇಳಿದಿದೆಯಂತೆ. ಅಂದರೆ ಸುಮಾರು ಬೆಂಗಳೂರಿನ ಮೂರರಷ್ಟು ವಿಸ್ತೀರ್ಣವಿದ್ದದ್ದು, ಬಹುತೇಕ ಎರಡರಷ್ಟಕ್ಕೆ ಇಳಿದಿದೆ.



ನೀರಿನ ಮೂಲಗಳು ಕ್ಷೀಣಿಸಿದಂತೆಲ್ಲ, ತಿಕ್ಕಾಟಗಳು ಹೆಚ್ಚುತ್ತವೆ. ಸದ್ಯದ ಭವಿಷ್ಯದಲ್ಲಿ, ಭೂಮಿ ಅಥವಾ ತೈಲಕ್ಕೆ ಬದಲು ನೀರಿಗಾಗಿ ಭೀಕರ ಸಂಘರ್ಷಗಳು ನಡೆಯುತ್ತವೆಂದು ವಿಶ್ವ ಸಂಸ್ಥೆಯ ಪರಿಸರ ಸಂಘಟನೆ ತಿಳಿಸಿದೆ. ಉದಾಹರಣೆಗೆ ಜಮ್ಮು ಮತ್ತು ಕಾಶ್ಮೀರದಿಂದ ಪಶ್ಚಿಮಾಭಿಮುಖವಾಗಿ ಹರಿಯುವ ನದಿಗಳ ನೀರಿನ ಬಳಕೆ ಕುರಿತಂತೆ ಭಾರತ-ಪಾಕಿಸ್ತಾನ 'ಇಂಡಸ್ ನೀರಿನ ಒಪ್ಪಂದ' ಕ್ಕೆ ಸಹಿ ಹಾಕಿವೆ. ಭಾರತ ಆಗಾಗ್ಗೆ ಈ ಒಪ್ಪಂದವನ್ನು ಉಲ್ಲಂಘಿಸುತ್ತಿದೆಯೆಂದು ಪಾಕಿಸ್ತಾನ ದೂರುತ್ತಲಿದೆ. ಅಲ್ಲದೆ, ಈ ಒಪ್ಪಂದದ ಭಾಗವಾಗಿ ಕಾಶ್ಮೀರವು ತನ್ನ ಒಟ್ಟಾರೆ ವ್ಯವಸಾಯ-ಯೋಗ್ಯ ಭೂಮಿಯಲ್ಲಿ ಕೇವಲ ಶೇ. 10ರಷ್ಟು ಭೂಮಿಗೆ ಮಾತ್ರವೇ ನೀರನ್ನು ಬಳಸಿಕೊಳ್ಳುವ ನಿರ್ಬಂಧದಲ್ಲಿದೆ. ಕಾಶ್ಮೀರದ ಹಿಮಪರ್ವತಗಳು ಮತ್ತು ನೀರ್ಗಲ್ಲ ಕಾಲುವೆಗಳು ಬತ್ತಿಹೋದಂತೆಲ್ಲ ನದಿಗಳು ಸಹ ಹಿಂಗತೊಡಗಿ ನೀರಿಗಾಗಿ ಎರಡೂ ದೇಶಗಳ ನಡುವೆ ನಡೆಯುವ ಸಂಘರ್ಷದಿಂದ ಶಾಂತಿ ಪ್ರಕ್ರಿಯೆಗೆ ಮತ್ತಷ್ಟು ಪೆಟ್ಟು ಬೀಳುತ್ತದೆ.

ತಲಾ ನೀರಿನ ಪ್ರಮಾಣದ ಕುಸಿತ:

ತನ್ನ ಶೇ. 90ರಷ್ಟು ನೀರಾವರಿ ಪೂರೈಕೆಗಾಗಿ ಇದೇ ನದಿಗಳ ಮೇಲೆ ಅವಲಂಬಿತಾಗಿರುವ ಪಾಕಿಸ್ತಾನದ ತಲಾ ನೀರು ಲಭ್ಯ ಪ್ರಮಾಣವು 1947ರಲ್ಲಿ 56 ಲಕ್ಷ ಲೀಟರ್ ಇದ್ದದ್ದು, 2005ರ ಹೊತ್ತಿಗೆ ಕೇವಲ 12 ಲಕ್ಷ ಲೀಟರ್‌ಗೆ ಇಳಿದಿದೆ. ಹಾಗೆಯೇ, 1950ರಲ್ಲಿ 50ಲಕ್ಷ ಲೀಟರ್ ಇದ್ದ ಭಾರತದ ತಲಾ ನೀರು ಲಭ್ಯ ಪ್ರಮಾಣವು 2007ಕ್ಕೆ 10ಲಕ್ಷ ಲೀಟರ್ ಆಗಿದೆ. ಇದರಿಂದಾಗಿ ನದಿಗಳಲ್ಲಿ ಒಮ್ಮೊಮ್ಮೆ ಹೆಚ್ಚು ನೀರು ಹರಿಯುವುದು, ಮತ್ತೆ ಕೆಲವೊಮ್ಮೆ ತಿಂಗಳುಗಳ ಕಾಲ ನೀರೇ ಇಲ್ಲದಿರುವುದು ಮುಂದುವರೆದಂತೆಲ್ಲ ಅವಶ್ಯವಿರುವ ತಿಂಗಳುಗಳಲ್ಲಿ ನೀರನ್ನು ಅಣೆಕಟ್ಟುಗಳಲ್ಲಿ ಸಂಗ್ರಹಿಸಿಡಲು ಸಾಧ್ಯವಾಗುವುದಿಲ್ಲ.

ಜಾಗತಿಕ ತಾಪಮಾನದ ದುಷ್ಪರಿಣಾಮಗಳು ಕಾಶ್ಮೀರದತ್ತ ಮಾತ್ರವೇ ಕೆಂಗಣ್ಣು ಬೀರುತ್ತಿಲ್ಲ. ಜಗತ್ತಿನ ಎಲ್ಲೆಡೆ ಇದು ಭೀಕರತೆಗಳ ಮುನ್ಸೂಚನೆಗಳನ್ನು ಬಿತ್ತರಿಸುತ್ತಿದೆ. ಜಾಗತಿಕ ತಾಪಮಾನ ಕಡಿಮೆಗೊಳಿಸಲು ಕ್ಷಿಪ್ರ ಕ್ರಮ ಕೈಗೊಳ್ಳುವುದು ಇಂದಿನ ತುರ್ತು ಕೆಲಸವೆಂದು ವಿಜ್ಞಾನಿಗಳ ಅಂಬೋಣ.

ಕೃಪೆ: ಫ್ರಂಟ್‌ಲೈನ್.

ನಾಟಕ

ಅಸಮಾನತೆ ಹಾಗೂ ಸಂಘರ್ಷದ ಮುಖಾಮುಖಿ 'ಗಂಗಭಾರತ'



ಶಿವರಂಗೋತ್ಸವ

ಭೂಮಿ ಮತ್ತು ನೀರು ಭಾರತದ ಸಾಮಾಜಿಕ ವರ್ಣ ವ್ಯವಸ್ಥೆಯಲ್ಲಿ ಉತ್ತಮರು ಶೂದ್ರಾತಿ ಶೂದ್ರರಿಗೆ ದೊರೆಯದಂತೆ ತಮ್ಮ ಸ್ವತ್ತಾಗಿ ಮಾಡಿಕೊಂಡು ಶತಮಾನಗಳಾಗಿವೆ. ಚಾಂಡಾಲ ಮತ್ತು ಆದಿಮ ಜನರು ಎಂದು ಕರೆವವರಿಗೆ ಜಾತಿ ಪದ್ಧತಿಯ ಮೇಲ್ವರ್ಗದವರಿಂದ ಕರುಣೆಯ ರೂಪದಲ್ಲಿ ಎತ್ತಿಹಾಕಿದ ನೀರನ್ನು ಪ್ರಸಾದವೆಂದು ಪಡೆಯುವ ಅವಮಾನವೀಯ ರೀತಿ ನೀತಿಗಳೂ ಇಂದಿಗೂ ಅನೇಕ ಗ್ರಾಮಗಳಲ್ಲಿ ಇವೆ.

ಜಾಗತೀಕರಣ, ಖಾಸಗೀಕರಣದ ಪ್ರಕ್ರಿಯ ಪ್ರಾರಂಭವಾದ ನಂತರ ಕುಡಿಯುವ ನೀರು ಮತ್ತು ನದಿಗಳೂ ಸಹ ಇಲ್ಲಿ ಮಾರಾಟದ ಸರಕಾಗುತ್ತಿದೆ. ಇಂತಹ ಸನ್ನಿವೇಶದಲ್ಲಿ ಜೀವ ಜಲವನ್ನೇ ಕೇಂದ್ರೀಕರಿಸಿ ರೂಪಸಿದ 'ಗಂಗಾ ಭಾರತ' ನಾಟಕವು ನೀರಿಗಾಗಿ ನಡೆಯುವ ಸಂಘರ್ಷಗಳು ಮತ್ತು ಅದರ ಅಗತ್ಯಗಳ ಬಗ್ಗೆ ಹಾಗೂ ಅದರ ಹೆಸರಿನಲ್ಲಿ ನಡೆಯುವ ವರ್ಣ ಸಮಾಜದ ಅಸಮಾನತೆಯ ವಿಕೃತ ಮುಖಗಳನ್ನು ತೆರೆದಿಡುತ್ತದೆ.

ಕನ್ನಡ ಸಾಹಿತ್ಯ ಅಕಾಡೆಮಿಯ ಉಪ ಸಂಸ್ಕೃತಿ ಮಾಲಿಕೆಯಲ್ಲಿ ಕೋಟಿಗಾನಹಳ್ಳಿ ರಾಮಯ್ಯ ಬರೆದ ಸಿಂಧ್ ಸಂಸ್ಕೃತಿಯಲ್ಲಿ ಮಾದಿಗರು ಪುಸ್ತಕದಲ್ಲಿ ಮೂಡಿಬಂದ 'ಆದಿಮ' ಸಾಂಸ್ಕೃತಿಕ ಬೇರಿನ ಎಳೆಯೊಂದರ ಹುಡುಕಾಟವೇ 'ಗಂಗಾಭಾರತ'.

ಗಂಗೆ ತಮ್ಮ ಮನೆಯ ಮಗಳೆಂಬುದು ಅಸ್ಪೃಶ್ಯ ಕುಲದವರ ನಂಬಿಗೆ, ಬರದ ಸೀಮೆಗೆ ಬಂದ ಗಂಗೆ ಜನರ ಅತಿಯಾದ ದುರಾಸೆಯಿಂದ ನೊಂದು 'ಮೋಚಿ' ಯಾಗಿರುವ ತನ್ನ ತಂದೆಯ ಮನೆಗೆ ಬರುತ್ತಾಳೆ. ಅತ್ತ ದೊರೆಯ ರಾಜ್ಯವು ಬರಗಾಲಕ್ಕೆ ಬಲಿಯಾಗುತ್ತಿರುವಾಗ ಕೆರೆ ಕಟ್ಟಿಸಿದ ದೊರೆ ಗಂಗೆಯ ತವರಿಗೆ ಬಂದು ಕಾಡಿ ಬೇಡಿ ಗಂಗೆಯನ್ನು ಕರೆದುಕೊಂಡು ಹೋಗುವಲ್ಲಿ ಯಶಸ್ವಿಯಾಗುತ್ತಾನೆ. ಕೆರೆ ತುಂಬಿ ಸಮೃದ್ಧಿಯಾಗುತ್ತದೆ. ಗಂಗೆಯ ಪೂಜೆಗಾಗಿ ಕುಲ ಕುಲಗಳ ನಡುವೆ ಕಲಹ ಶುರುವಾದಾಗ ಬೇಸತ್ತ ಗಂಗೆಯು ತನ್ನ ರಕ್ಷಣೆಗೆ ಇದ್ದ ಕಾವಲುಗಾರ ನೀಲಯ್ಯನಿಗೆ ಇಲ್ಲಿಂದ ಹೊರಟು ಹೋಗುತ್ತೇನೆಂದು ಹೇಳುತ್ತಾಳೆ. ತಾನು ದೊರೆಗೆ ತಿಳಿಸಿ ಬರುವ ತನಕ ಹೋಗಬಾರದೆಂದು ಭಾಷೆ ಪಡೆದು ನೀಲಯ್ಯ ಹೊರಡುತ್ತಾನೆ. ಇತ್ತ ಭೇದವನರಿಯದ ಗಂಗೆಯು ಎಲ್ಲೂ ಹೋಗದಂತೆ ತಡೆಯಲು ಪುರೋಹಿತ ಶಾಹಿ ಕುಲ, ಸಂಸ್ಕೃತಿ, ಆಚಾರ ವಿಚಾರ, ಮಡಿ ನೆಪದ ಹೆಸರಿನಲ್ಲಿ ನೀಲಯ್ಯನನ್ನು ಶುದ್ಧೀಕರಿಸುತ್ತಾರೆ. ನೀಲಯ್ಯನೇ ಪೂಜೆ ಮಾಡಬೇಕೆಂದು ಒಪ್ಪಿಕೊಂಡ ಪುರೋಹಿತ ಮುಖಂಡರು ಮೋಸದಿಂದ ಗುಪ್ತವಾಗಿ ನೀಲಯ್ಯನನ್ನು ಕೊಂದು ಗಂಗೆ ದೂರ ಹೋಗದಂತೆ ಮಾಡಲು ಕೊಲೆಯನ್ನು ಬಲಿದಾನವೆಂದು ಬಿಂಬಿಸಿ ನೀಲಯ್ಯನನ್ನು ದೈವತ್ವಕ್ಕೆ ಏರಿಸಿ ಆ ಮೂಲಕ ತಮ್ಮ ವರ್ಗ ಹಿತಾಸಕ್ತಿಯನ್ನು ಕಾಪಾಡಿಕೊಳ್ಳುತ್ತಾರೆ. ಇದು ಒಟ್ಟು ನಾಟಕದ ಕಥಾನಕ.

ಆಳುವ ವರ್ಗಗಳ ಹಿತಾಸಕ್ತಿ ಮತ್ತು ಕುಲ ಧರ್ಮದ ಹೆಸರಿನ ಶೋಷಣೆಯನ್ನು 'ಗಂಗಾ ಭಾರತ' ರಂಗದ ಮೇಲೆ ತರುವಲ್ಲಿ ಯಶಸ್ವಿಯಾಗಿದೆ. ಪಾಳೇಗಾರ, ಸಾಮಂತ, ರಾಜರು ಹೋಗಿ ಪ್ರಜಾಪ್ರಭುತ್ವ ಬಂದರೂ ಸಹ ಕುಲ ಶ್ರೇಷ್ಠತೆಯ ಮನಸ್ಥಿತಿ ಬದಲಾಗಿಲ್ಲ. ಅಸ್ಪೃಶ್ಯರ ಮೇಲಿನ ಶೋಷಣೆ ಹೊಸ ಹೊಸ ರೂಪ ಹೆಸರಿನಿಂದ ಬೆಳೆಯುತ್ತಲೇ ಇದೆ.



ಬಳಲಿ ಬಾಯಾರಿದ ಗಂಗೆ ಕ್ಷೌರಿಕ, ಪತ್ತಾರ, ಮಡಿವಾಳ ಮತ್ತು ಕುಂಬಾರರ ಮನೆಗೆ ಬಂದು ನೀರು ಕೇಳಿದರೆ ಅವರೆಲ್ಲ ಕುಲಗೋತ್ರ ತಿಳಿಯದೆ ನಾ ಮುಟ್ಟುವುದಿಲ್ಲ, ನೀ ದೂರ ಹೋಗು. ಈ ಊರ ಕಟ್ಟಳೆ ಮುರಿಯುವಂತಿಲ್ಲ ಎಂದು ನೀರು ಕೊಡಲು ನಿರಾಕರಿಸುತ್ತಾರೆ. ಈ ಘಟನೆ ಈಗಲೂ ಸಹ ಜೀವಂತವಾಗಿದೆ. ದುಡಿಯುವ ವರ್ಗದ ಬೇರೆ ಬೇರೆ ವಿಭಾಗಗಳು ಪರಸ್ಪರ ನೀರು ಕೊಡಲು ಸಹ ನಿರಾಕರಿಸುವ ಮಟ್ಟಕ್ಕೆ ಅಸಹಾಯಕತೆಗೆ ಈ ನಾಡಿನಲ್ಲಿ ಜಾತಿ ಪದ್ಧತಿಯ ಮೂಲಕ ಬ್ರಾಹ್ಮಣ, ಪುರೋಹಿತ ಶಕ್ತಿಗಳು ಯಶಸ್ವಿಯಾಗಿರುವುದನ್ನು ಮನದಟ್ಟು ಮಾಡುತ್ತದೆ. ನಾಟಕದಲ್ಲಿ ದೊರೆಯು ಜನಪರ ಮತ್ತು ಆದಿಮರ ಪರವಾಗಿರುವುದು ನಿಜಕ್ಕೂ ಅಚ್ಚರಿ ವಿಷಯವೇ. ಗಂಗೆಯ ಜೊತೆ ಕಳಿಸಲಾದ ಬೆಪ್ಪು ಮುನಿ ಪಾತ್ರ ಹಲವು ಸಂದೇಹಕ್ಕೆ ಕಾರಣವಾಗುತ್ತದೆ. ಈ ಪಾತ್ರದ ಮೇಲೆ ಹೆಚ್ಚು ಬೆಳಕು ಚೆಲ್ಲಬೇಕಿತ್ತು.

ಉತ್ತಮ ಬೆಳಕಿನ ವ್ಯವಸ್ಥೆ ಗಮನ ಸೆಳೆಯುತ್ತದೆ. ಪ್ರೇಕ್ಷಕರ ಗಮನ ಬೇರೆಡೆ ಹೋಗದಂತೆ ದೃಶ್ಯ ಬದಲಾವಣೆ ಅರಿವಿಗೆ ಬರದಂತೆ ವ್ಯವಸ್ಥೆಗೊಳಿಸಲಾಗಿದೆ. ಕೆರೆಯ ಸನ್ನಿವೇಶ ಮನದಲ್ಲಿ ಉಳಿಯುವಂತಹದ್ದು. ಬಿಳಿ ಬಟ್ಟೆಗೆ ನೀಲಿ ಬೆಳಕು ಬಿಟ್ಟು ಗಂಗೆ ಹರಿಯುವಂತೆ ಮಾಡಿದ ದೃಶ್ಯ ಕಣ್ಮನ ಸೆಳೆಯುತ್ತದೆ.

ದಿನೇಶ್ ಹೆಚ್.ಎನ್. ಅಭಿನಯದ ದೊರೆಯ ಪಾತ್ರಕ್ಕೆ ಇನ್ನೂ ಹೆಚ್ಚು ರಾಜ ಗಾಂಭೀರ್ಯ ಗತ್ತು ಬೇಕಿತ್ತು. ಒಟ್ಟು ನಾಟಕ ಜೀವ ಕೇಂದ್ರವಾದ ಗಂಗೆಯ ಪಾತ್ರದ ವಿನುತರ ಮನೋಜ್ಞ ಅಭಿನಯ ನಾಟಕದ ನಂತರ ಸಹ ನೋಡುಗರ ಮನದಾಳದಲ್ಲಿ ಉಳಿಯುತ್ತದೆ. ತಾತನ ಪಾತ್ರದಲ್ಲಿ ಸೋಮಶೇಖರ್ ನಟನೆ ಉತ್ತಮವಾಗಿತ್ತು. ಭಾಗವತರಾದ ಸಂಭಾಷಣೆಯಲ್ಲಿ ದತ್ತಾತ್ರೇಯ ಸೈ ಎನಿಸಿಕೊಂಡಿದ್ದಾರೆ. ಮುಖ್ಯವಾಗಿ ನೀಲಯ್ಯ ಮತ್ತು ಮಂತ್ರಿಯ ಪಾತ್ರಗಳಲ್ಲಿ ಇನ್ನೂ ಹೆಚ್ಚು ಕ್ರಿಯಾಶೀಲತೆ ಬೇಕಿತ್ತು. ಅರ್ಥಪೂರ್ಣವಾದ ರಂಗ ಸಜ್ಜಿಕೆ (ನಾಗೇಶ್ ಅಯ್ಯರ್ ಎಂ.ಎಸ್., ಶಂಕರನಾರಾಯಣರಾವ್), ವಸ್ತ್ರ ವಿನ್ಯಾಸ (ಉಮಾಕಾಂತ್.ವಿ., ದೊನ್ನಿ ಶ್ರೀನಿವಾಸ್.ಜಿ.ಎ.), ಪ್ರಸಾಧನ (ರಾಮಕೃಷ್ಣ ಬೆಳ್ತೂರು) ಸೂಕ್ತವಾಗಿದ್ದವು.

ಮೈಕೋ ಶಿವಣ್ಣನವರು ಮೈಕೋ ನಾಗನಾಥಪುರ ಲಲಿತಕಲಾ ಸಂಘದ 'ನಾಗ ಭೂಮಿಕೆ' ತಂಡದ ಕಲಾವಿದರಿಗೆ ನಿರ್ದೇಶಿಸಿದ್ದಾರೆ. ರವೀಂದ್ರ ಕಲಾಕ್ಷೇತ್ರದಲ್ಲಿ ರೂಪಾಂತರ ಆಯೋಜಿಸಿದ 'ಶಿವ ರಂಗೋತ್ಸವ' ದಲ್ಲಿ ಪ್ರದರ್ಶನಗೊಂಡಿತು.

■ ವೀರಣ್ಣ ಕಲ್ಮನಿ, ಬಾಚಿಗೊಂಡನಹಳ್ಳಿ

ಕವನ

ಮಗು ಅಳುತ್ತಿದೆ...

ಮಗು ಅಳುತ್ತಿದೆ
ಕಣ್ ಬಿಟ್ಟು
ಈ ಜಗವ ನೋಡಿ ಹೆದರಿ!
ಯಾವುದೋ ಕರಿನೆರಳು
ದೆವ್ವದ್ದೋ ! ಭೂತದ್ದೋ!
ನೋಡಿ ಕಿಟಾರನೆ ಚೀರಿ
ಅಳುತ್ತಿದೆ ಮಗು
ಗಂಟಲು ಹರಿಯುವಂತೆ

ಎಲ್ಲೋ ಸಿಡಿದ
ಬಾಂಬಿನ ಸದ್ದು
ಯಾರದೋ
ಹರಿದ ರಕ್ತ
ಕಂಡು ಅಳುತ್ತಿದೆ ಮಗು
ಕರುಳ ಕಿತ್ತುಬರುವಂತೆ

ಯಾವುದೋ
ಗುಸುಗುಸು ಸದ್ದು
ಅಪ್ಪನ ಕೈಯಲ್ಲಿ
ಮಸೆದ ಕತ್ತಿ
ಅಮ್ಮನ ತುಟಿಯಲ್ಲಿ
ಪ್ರೀತಿಯಿಲ್ಲದ್ದನಗೆ
ಕಂಡು ಅಳುತ್ತಿದೆ ಮಗು
ಹಗಲು ರಾತ್ರಿಗಳ
ಒಂದು ಮಾಡಿ

ಹೊರಗಡೆ ಯಾವುದೋ
ಹೆಜ್ಜೆಯ ಸಪ್ಪಳ
ಎಲ್ಲೋ ಹತ್ತಿದ ಬೆಂಕಿ
ತನ್ನನ್ನು ಸುಟ್ಟೀತೆಂದು
ಹೆದರಿ ಅಳುತ್ತಿದೆ ಮಗು
ನೆಲದ ಎಧೆ ಬಿರಿಯುವಂತೆ

– ಹುಲಿಕಟ್ಟಿ ಚನ್ನಬಸಪ್ಪ



JANASHAKTHI KANNADA VARA PATRIKE : Printed by G.N.NAGARAJ, No 12. 18th Cross, S.R.Nagar, BANGALORE-560027
Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at: Kriya Prakashana, 12. 18th Cross, S.R.Nagar, BANGALORE - 560027 Karnataka (State) and Published at BANGALORE
No 12.18th Cross, S.R.Nagar, BANGALORE-560027 Editor S.Y.GURURSHANTH, No12, 18th Cross, S.R.Nagar, BANGALORE - 560027
Editor: S.Y.GURUSHANTH